ಬಿಡುವವರಿಲ್ಲ. ಆದ್ದರಿಂದ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಅನಂತ್‌ನಾಗ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಪರಿ-ಶೀಲಿಸುತ್ತೇನೆ. ಖುದ್ದಾಗಿ ಅವರ ಜೊತೆಯಲ್ಲಿ ಹೋಗಿ ಆ ಸಮಸ್ಯೆ ಏನೆಂದು ಕಂಡು ಹಿಡಿದು, ಅದಕ್ಕೆ ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತೇನೆ.

(ಆ) ನಗರಾಭಿವೃದ್ಧಿ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ

+ **ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-** ಮಾನ್ಯ ಅಧ್ಯಕ್ಷರೆ, ನನ್ನ ಖಾತೆಗೆ ಸೇರಿದ ಬೇಡಿಕೆ ಸಂಖ್ಯೆ 31ರ ನಗರಾಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲ ಸೌಲಭ್ಯ ಅಭಿವೃದ್ಧಿ ಬಗ್ಗೆ ಮಾನ್ಯ ಅನೇಕ ಜನ ಸದಸ್ಯರು ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅನೇಕ ಲೋಪದೋಷಗಳನ್ನು ತೋರಿಸಿದ್ದಾರೆ. ಮತ್ತು ವಿಶೇಷವಾಗಿ ನಗರಾಭಿವೃದ್ಧಿ ಇಲಾಖೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಿಗಳು ಮತ್ತು ನಗರ ಯೋಜನಾ ಇಲಾಖೆ, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಈ ಮೂರು ನನಗೆ ಬರುತ್ತದೆ. ಮಾನ್ಯ ಮಿರಾಜುದ್ದೀನ್ ಪಟೇಲ್ ರವರಿಗೆ ಪೌರಾಡಳಿತ ಸೇವೆಗಳು ನಗರಾಭಿವೃದ್ಧಿ ಇಲಾಖೆಯದು ಅವರಿಗೆ ಸೇರುತ್ತದೆ. ನಂತರ ಬೆಂಗಳೂರು ಸಿಟಿ ಕಾರ್ಪೊರೇಷನ್, ಈಗ ತಾನೇ ಉತ್ತರ ಕೊಟ್ಟಂತಹ ಮಾನ್ಯ ಅನಂತನಾಗ್‌ರವರಿಗೆ ಸೇರುತ್ತದೆ. ಬಿ.ಡಬ್ಲ್ಯುಎಸ್.ಎಸ್.ಬಿ., ಬಿ.ಎಂ.ಆರ್.ಡಿ.ಎ., ಎಂ.ಆರ್.ಸಿ.ಎಸ್. ಎಲ್ಲಾ ಸೇರಿಸಿ ಅದು ಮಾನ್ಯ ಮುಖ್ಯಮಂತ್ರಿಗಳಿಗೆ ಹೋಗುತ್ತದೆ. ಮತ್ತು ವಸತಿ ಇಲಾಖೆ 1995ರಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ ಬೇರ್ಪಟ್ಟು ಅದು ಪ್ರತ್ಯೇಕ ಇಲಾಖೆಯಾಗಿ ಮಾನ್ಯ ರೇವಣ್ಣನವರಿಗೆ ಸೇರುತ್ತದೆ. ಅವರೂ ಸಹ ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ.

ಮೊದಲನೆಯದಾಗಿ, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ಬಗ್ಗೆ ಸಾಕಷ್ಟು ವಿಷಯಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈವೊಂದು ಮಂಡಳಿ 1975ರಲ್ಲಿ ಪ್ರಾರಂಭವಾಗಿ ಇವತ್ತು ಬೆಂಗಳೂರನ್ನು ಹೊರತುಪಡಿಸಿ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳನ್ನು ವಿನ್ಯಾಸ ಮತ್ತು ತಯಾರಿಕೆ ಅದರ ಜೊತೆಗೆ ಕಾರ್ಯಗತಗೊಳಿಸುವ ಎಲ್ಲಾ ಕಾರ್ಯಕ್ರಮಗಳನ್ನು ನಮ್ಮ ಇಲಾಖೆ ಹಮ್ಮಿಕೊಂಡಿದೆ. ಇವತ್ತು ಈ ಮಂಡಳಿಯ ವ್ಯಾಪ್ತಿಯಲ್ಲಿ ಸುಮಾರು 242 ನಗರ ಮತ್ತು ಪಟ್ಟಣಪ್ರದೇಶಗಳಿಗೆ ನೀರನ್ನು ಒದಗಿಸುವಂತಹ ಒಂದು ಕಾರ್ಯ 1975 ರಿಂದ 21ವರ್ಷಗಳಿಂದ ಮಾಡಿಕೊಂಡು ಬಂದಿದ್ದೇವೆ. ಇದರಲ್ಲಿ ಸುಮಾರು 71 ನಗರಗಳು ಮಧ್ಯೆ ಜಿಲ್ಲಾ ಪಂಚಾಯಿತಿಗೆ ಸೇರಿದ್ದು ಅನಂತರ ಸುಮಾರು 171 ನಗರಗಳು ನಮಗೆ ಸೇರಿವೆ. ಇದಾದ ಮೇಲೆ ಮಧ್ಯಂತರ ಮಂಡಳಿ ಪಂಚಾಯಿತಿಗಳು ಆದಮೇಲೆ ಅಲ್ಲಿನ 34 ನಗರ ಪ್ರದೇಶಗಳು ಮತ್ತೆ ಈ ಮಂಡಳಿಗೆ ಸೇರಿದ ಮೇಲೆ ಇವತ್ತು 205 ನಗರಪ್ರದೇಶಗಳು ನಮ್ಮ ವ್ಯಾಪ್ತಿಯಲ್ಲಿ ಬರುತ್ತಿವೆ.

ಇದರಲ್ಲಿ ರಾಜ್ಯದಲ್ಲಿ ಮಹಾನಗರ ಪಾಲಿಕೆಗಳು 5, ನಗರಸಭೆಗಳು 32, ಪುರಸಭೆಗಳು 80, ಟೌನ್ ಪಂಚಾಯಿತಿಗಳು 87 ಒಟ್ಟು 205 ನಗರ ಪ್ರದೇಶಗಳು ನಮ್ಮ ಮಂಡಳಿಯ ವ್ಯಾಪ್ತಿಯಲ್ಲಿ ಬರುತ್ತವೆ. ಇದರ ಜನಸಂಖ್ಯೆ ಇವತ್ತು 110 ಲಕ್ಷ ಇದೆ. ರಾಜ್ಯದಲ್ಲಿರತಕ್ಕ ನಾಲ್ಕೂವರೆ, ನಾಲ್ಕು ಮುಕ್ಕಾಲು ಕೋಟಿ ಜನಸಂಖ್ಯೆಯಲ್ಲಿ ಇವೊಂದು ಬೆಂಗಳೂರು ನಗರವನ್ನು ಹೊರತುಪಡಿಸಿ ಇರತಕ್ಕ ಪಟ್ಟಣ ಪ್ರದೇಶಗಳ ಒಟ್ಟು ಜನಸಂಖ್ಯೆ 110 ಲಕ್ಷ ಇದೆ. ಇದನ್ನು ನಾವು 2001ನೇ ಇಸವಿಗೆ ಅಂದರೆ ಈ ಶತಮಾನದಿಂದ ಮುಂದಿನ ಶತಮಾನಕ್ಕೆ ಹೋಗುವ ಯೋಜನೆಯ ರೂಪದಲ್ಲಿ 175 ಲಕ್ಷ ರೂಪಾಯಿಗಳನ್ನು ಏನು ಇವತ್ತು 110 ಲಕ್ಷ ಜನಸಂಖ್ಯೆಯಿದೆ ಅದಕ್ಕನುಗುಣವಾಗಿ 175 ರಿಂದ 200 ಲಕ್ಷಗಳಿಗೆ 2 ಕೋಟಿಯಷ್ಟು ಬೆಳೆಯಬಹುದೆಂದು ಹೇಳಿ ನಗರಪ್ರದೇಶಗಳನ್ನು ಅಂದಾಜು ಮಾಡಿ ಅವುಗಳಿಗೆ ಕುಡಿಯುವ ನೀರನ್ನು ಒದಗಿಸುವ ಕಾರ್ಯವನ್ನು ಮಾಡುತ್ತಿದ್ದೇವೆ. ವಿಶೇಷವಾಗಿ ನಮ್ಮ ಜನಸಂಖ್ಯೆಗನುಗುಣವಾಗಿ ಸುಮಾರು 25ರಷ್ಟು ಭಾಗದ ಜನಗಳಿಗೆ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಒದಗಿಸುವಂತಹ ಕಾರ್ಯವನ್ನು ನಮ್ಮ ಇಲಾಖೆ 1975ಕ್ಕೂ ಹಿಂದೆ ಪಬ್ಲಿಕ್ ಹೆಲ್ತ್ ಇಂಜನಿಯರಿಂಗ್ ಎಂದು ಕೆಲಸ ಮಾಡುತ್ತಿತ್ತು. ಆದಾದ ನಂತರ ಇವತ್ತು ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯಿಂದ ಈ ಜನಸಂಖ್ಯೆಗೆ ಇವತ್ತು ನಾವು ನೀರನ್ನು ಕೊಡುತ್ತಿದ್ದೇವೆ. ಮಂಡಳಿಯ ವ್ಯಾಪ್ತಿಯಲ್ಲಿ ಕಳೆದ 21 ವರ್ಷಗಳಲ್ಲಿ 285 ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳನ್ನು ನಾವು ಮಾಡಿದ್ದೇವೆ. ಇದಕ್ಕೆ ಒಟ್ಟಾರೆ ಹಣ ನಾವು ತೊಡಗಿಸುವಂತ-ಹದ್ದು 366 ಕೋಟಿ ರೂಪಾಯಿಗಳು. ವಿಶೇಷವಾಗಿ ನಗರಪ್ರದೇಶಗಳಲ್ಲಿ 20 ಸಾವಿರ ಜನಸಂಖ್ಯೆಯ ಒಳಗೆ ಇರತಕ್ಕ ಪ್ರದೇಶಗಳಿಗೆ ಅವರು ಏನೂ ಹಣವನ್ನು ಕಟ್ಟುವಂಥಹದ್ದು ಇಲ್ಲ. ಅವರು ಹಣವನ್ನು ಕಟ್ಟಬೇಕಾಗಿಲ್ಲ. ಉಚಿತವಾಗಿ ಪೈಪ್‌ಡ್ ವಾಟರ್‌ಸಪ್ಲೈ ಎಂದು ಅವರಿಗೆ ಕೊಡುವುದು; ಅಂತಹ ಒಂದು ಕಾರ್ಯವನ್ನು ಮಾಡುತ್ತಿದ್ದೇವೆ. 20 ಸಾವಿರ ಜನಸಂಖ್ಯೆಗೆ ಮೇಲಿರತಕ್ಕ ಪ್ರದೇಶಗಳಿಗೆ ನಾವು ಆರ್ಥಿಕ ನೆರವನ್ನು ಹುಡ್ಕೋ ಸಂಸ್ಥೆ ಮತ್ತು ಎಲ್.ಐ.ಸಿ.ಯಿಂದ ಹಣವನ್ನು ಪಡೆದು ಸರ್ಕಾರ ತುಂಬುವಂತಹ ಹಣಕ್ಕೆ ಸರಿಸಮಾನವಾಗಿ ಅವರಿಂದ ಸಾಲವನ್ನು ಪಡೆದು ಆ ಯೋಜನೆಗಳನ್ನು ಕಾರ್ಯಗತ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಇದುವರೆಗೂ ಜೀವವಿಮಾ ನಿಗಮದಿಂದ ಎಲ್.ಐ.ಸಿ.ಯಿಂದ 74 ಯೋಜನೆಗಳಿಗೆ ಪಡೆದಿರತಕ್ಕ ಹಣ ಸುಮಾರು 94 ಕೋಟಿ ರೂಪಾಯಿ. ಜೊತೆಗೆ ಹುಡ್ಕೋದಿಂದ 7 ನೀರು ಸರಬರಾಜು ಯೋಜನೆಗಳಿಗೆ 36 ಕೋಟಿ ರೂಪಾಯಿ ಹಣ-ವನ್ನು ಪಡೆದು ಸುಮಾರು 20 ಕೋಟಿ ರೂಪಾಯಿ ಸಾಲವನ್ನು ಪಡೆದು ಈ ಮೂಲಕ ಸರ್ಕಾರ ಮತ್ತು ನಾವು ಸೇರಿ ಒಟ್ಟಾರೆ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇವತ್ತು ಮಂಡಳಿಯ ವ್ಯಾಪ್ತಿಯಲ್ಲಿ 1996-97ನೇ ಸಾಲಿನ ನಮ್ಮ ಅಯವ್ಯಯ ಪತ್ರದಲ್ಲಿ ತಯಾರು ಮಾಡಿರತಕ್ಕ ಅಂದಾಜು 145 ಕೋಟಿ ರೂಪಾಯಿಗಳು. ನಾವು ಯೋಜನೆಯನ್ನು ತಯಾರು ಮಾಡಿಕೊಂಡು ವಿಶೇಷವಾಗಿ ಉಳಿ-ದಿರತಕ್ಕ ಕೆಲಸಗಳು ಏನಿದ್ದಾವೆ ಅವುಗಳನ್ನು ಪೂರ್ಣಮಾಡತಕ್ಕದ್ದು. ಹೊಸದಾಗಿ ಮಾಡುವಂತಹ ಯೋಜನೆಗಳು 87 ಇವೆ. ಅದೇ ರೀತಿ ಒಳಚರಂಡಿ ಯೋಜನೆಗಳು ಒಟ್ಟು 98 ಯೋಜನೆಗಳು ಇವೆ.

ಅನೇಕ ಮಾನ್ಯ ಸದಸ್ಯರುಗಳು ಬಹಳಷ್ಟು ದಿವಸಗಳಿಂದ ಈ ಯೋಜನೆಗಳು ಪೂರ್ಣವಾಗಿಲ್ಲ, ಹಾಗೆಯೇ ನಿಂತಿದೆ. ಬಹಳಷ್ಟು ಕೆಲಸ ಕಾರ್ಯಗಳು ವೇಗವಾಗಿ ಆಗುತ್ತಿಲ್ಲ ಎಂದು ಟೀಕೆ ಮಾಡಿ-ದ್ದಾರೆ. 1990ರಲ್ಲಿ ಹಾಗೂ 1992ರಲ್ಲಿ ಮಂಜೂರಾದಂತಹ ಯೋಜನೆಗಳನ್ನು ಇವತ್ತು ಮುಗಿಸು-ತ್ತಿಲ್ಲ. ಟೈಮ್‌ಬೌಂಡ್ ಪ್ರೋಗ್ರಾಮ್ ತಾವು ಇಟ್ಟುಕೊಂಡಿಲ್ಲ. ಬಹಳ ತಡ ಮಾಡುತ್ತಿದ್ದೀರಿ. ಆದ್ದರಿಂದ ಕುಡಿಯುವ ನೀರಿನ ತೊಂದರೆ ಜಾಸ್ತಿಯಿದೆ ಎಂದು ಹೇಳಿದ್ದಾರೆ. ಇವತ್ತು ನಾವು ಒಟ್ಟಾರೆ ಕೊಡು-ವಂತಹ ನೀರು 30 ಲೀಟರ್; ಹ್ಯಾಂಡ್‌ಪಂಪ್‌ಗಳ ಮೂಲಕ ನೀರು ಕೊಡುವ ಕಡೆ ಕೆಲವು ಕಡೆ 50 ಲೀಟರ್ ಕೊಡುತ್ತಿದ್ದೇವೆ. ಆದರೆ ನ್ಯಾಷನಲ್ ಅವರೇಜ್ ನಾವು ಕೊಡಬೇಕಾದ್ದು 100 ಮತ್ತು 120 ಲೀಟರ್, ಇವತ್ತು ಅದನ್ನು ಕೊಡಬೇಕಾಗಿದೆ. ಆ ದೃಷ್ಟಿಯಿಂದ ನೀರನ್ನು ವಿಶೇಷವಾಗಿ ಸರ್‌ಪ್ಲಸ್ ವಾಟರ್ ಎಲ್ಲಿ ಕೆನಾಲ್ಸ್ ಇವೆ, ಅಥವಾ ನದಿ ಮೂಲಗಳಿವೆ ಆ ಮೂಲಗಳಿಂದ ಹೆಚ್ಚು ನೀರನ್ನು ಪಡೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ಅಂತಹ 130 ಯೋಜನೆಗಳನ್ನು, ಅದು ಕೃಷ್ಣಾ ಮತ್ತು ಕಾವೇರಿ ನದಿ ಮೂಲಕಗಳಿರಬಹುದು ಅಥವಾ ತುಂಗಭದ್ರ ನದಿ ಮೂಲಗಳಿರಬಹುದು ಹೇಮಾವತಿ ಕಾಲುವೆಗಳ ಮೂಲಕ ಕೊಡುವಂತಹ ಯೋಜನೆಗಳು ಇರಬಹುದು. ಈ ಯೋಜನೆ-ಗಳನ್ನೆಲ್ಲಾ ತೆಗೆದುಕೊಂಡು ಇಂಥ 130 ಯೋಜನೆಗಳನ್ನು ಮಾಡುವ ದೃಷ್ಟಿಯಲ್ಲಿ ಕಾರ್ಯಕ್ರಮ-ವನ್ನು ಹಾಕಿಕೊಂಡಿದ್ದೇವೆ. ರಾಜ್ಯದಲ್ಲಿ ಸುಮಾರು 205 ಯೋಜನೆಗಳಲ್ಲಿ 83 ಅಂತಹ ಪಟ್ಟಣಗಳಿವೆ. ಇವತ್ತು ಬರೀ ಗ್ರೌಂಡ್‌ವಾಟರ್ ಅಂದರೆ, ಬೋರ್‌ವೆಲ್ ಮೂಲಕ ತೆಗೆದುಕೊಳ್ಳುವಂತಹದ್ದು ಮಾತ್ರ ಸಾಧ್ಯವಾಗದೆ ಉಳಿದಂತಹ 125 ಯೋಜನೆಗಳನ್ನು ನದಿ, ಕೆನಾಲ್ ಬೇರೆ ಬೇರೆ ರೀತಿಯಲ್ಲಿ ತೆಗೆದುಕೊಳ್ಳುವಂತಹ ಯೋಜನೆಗಳನ್ನು ನಾವು ರೂಪಿಸಿದ್ದೇವೆ. ಇದರಲ್ಲೂ ಸಹ ವಿಶೇಷವಾಗಿ ಈ 83 ಯೋಜನೆಗಳನ್ನು, ಗ್ರೌಂಡ್‌ವಾಟರ್ ಕೆಳಗೆ ಹೋಗುತ್ತಿದೆ. ಬೋರ್‌ವೆಲ್ ವಾಟರ್ 400-500 ಅಡಿ ಕೆಳಗೆ ಹೋಗುತ್ತಿದೆ. ಅಲ್ಲಿಯೂ ವಿಶೇಷವಾಗಿ ಬಹಳ ದೂರದಿಂದ ಚಾಮರಾಜನಗರಕ್ಕೆ ನೀರು ತಂದಿರತಕ್ಕ ಕಾರ್ಯವಿರಬಹುದು. ಗುಂಡ್ಲುಪೇಟೆಗೆ ನೀರು ತರುವಂತಹ ಕಾರ್ಯವಿರಬಹುದು. ಬೇರೆ ಬೇರೆ ರೀತಿಯಿಂದ ಕಬಿನಿ, ಹಾರಂಗಿ, ಬೇರೆ ಬೇರೆ ಮೂಲಗಳಿಂದ ನೀರು ತರತಕ್ಕ ಯೋಜನೆ-ಗಳು ಇರಬಹುದು. ಎಷ್ಟೇ ದೂರವಾದರೂ 40 ಕಿಲೋಮೀಟರ್ ದೂರವಾದರೂ ಆ ಮೂಲಕ ನೀರನ್ನು ತಂದು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಹೇಳಿ, ಯಾವ ಯಾವುದು ಅಂತಹ ಯೋಜನೆಗಳಿಗೆ ಶಿವಮೊಗ್ಗ ಇರಬಹುದು, ಚಾಮರಾಜನಗರ ಇರಬಹುದು, ಈ ರಾಜ್ಯದಲ್ಲಿ ಅಂತಹ ಹತ್ತಾರು ಯೋಜನೆಗಳಿಗೆ, ಅಂತಹ ಯೋಜನೆಗಳು ಇವತ್ತು ಏನು ಸ್ಥಗಿತವಾಗಿವೆ ಅದರ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ನಾವೆಲ್ಲಾ ಮಾತನಾಡಿದ್ದೇವೆ. ಅದರಲ್ಲೂ ಕಮಿಟಿ ರಿಪೋರ್ಟ್ ಸಹ ಬಂದಿದೆ. ಇನ್ನು ಎಸ್ಕಲೇಷನ್ ಆಗಿ ಆದ್ದರಿಂದ ಅವರಿಗೆ ಹಣವನ್ನು ತುಂಬಿಕೊಡಬೇಕೆಂದು ಹೇಳಿ-ದ್ದಾರೆ. ಈಗಾಗಲೇ 6 ಕೋಟಿ ರೂ.ಗಳನ್ನು ತುಂಬಿ ಆ ಕೆಲಸವನ್ನು ಮಾಡಿಕೊಡುವಂತಹ ಕಾರ್ಯವನ್ನು, ಅದು ಶಿವಮೊಗ್ಗವಿರಬಹುದು ಚಾಮರಾಜನಗರವಿರಬಹುದು ಇನ್ನು ಅಂತಹ 16 ಪ್ರದೇಶಗಳು ಇವತ್ತು ಆಗುವಂತಹದ್ದು ಆ ಕೆಲಸವಾಗಿದೆ. 83 ಗ್ರೌಂಡ್ ವಾಟರ್ ಸ್ಕೀಮ್‌ಗಳನ್ನು

ತೆಗೆದುಕೊಳ್ಳುವಂತಹದ್ದು ಅದರಲ್ಲಿ ಸುಮಾರು 47 ಅಂತಹ ಪ್ರದೇಶಗಳಲ್ಲಿ ಬೇರೆ ಬೇರೆ ಸೋರ್ಸ್-ನಿಂದ ತೆಗೆದುಕೊಳ್ಳುವಂತಹ ಯೋಜನೆಗಳನ್ನು ತಿಪಟೂರು ಇರಬಹುದು, ಅರಸೀಕೆರೆ ಇರಬಹುದು, ಈಚನೂರಿಗೆ ಹೇಮಾವತಿ ನಾಲೆಯಿಂದ ನೀರನ್ನು ತೆಗೆದುಕೊಳ್ಳುವಂತಹದ್ದು, ಇರಬಹುದು. ಕಡೂ-ರಿನ ಯೋಜನೆಯನ್ನು ಸೇರಿಸಿದ್ದೇವೆ. 19 ಯೋಜನೆಗಳಲ್ಲಿ ಅದು ಇದೆ. ಅದನ್ನು ಮಾಡಿಕೊಡುತ್ತೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:- ಮಾನ್ಯ ಅಧ್ಯಕ್ಷರೆ, ಅಲ್ಲಿ ವೇದಾ ನದಿ ಒಣಗಿ ಹೋಗಿ ಕುಡಿಯುವ ನೀರಿಗೆ ಎಷ್ಟು ತೊಂದರೆಯಿದೆ ಅಂದರೆ ಒಂದು ಕೊಡಕ್ಕೆ 3 ರೂಪಾಯಿ ಕೊಟ್ಟು ಕೊಂಡುಕೊಳ್ಳುವಂತಹ ಪರಿಸ್ಥಿತಿ ಇದೆ. ಆದಷ್ಟು ಬೇಗ ಅರ್ಬನ್ ವಾಟರ್‌ಸಪ್ಲೈಯಿಂದ ಮಿನಿ ವಾಟರ್‌ಸಪ್ಲೈ ಯೋಜನೆಗಳನ್ನು ಮಾಡಿಸಿದರೆ ಸ್ವಲ್ಪ ಕುಡಿಯುವ ನೀರಿನ ಸಮಸ್ಯೆ ಸುಧಾರಿಸ-ಬೇಕೆಂದು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು:- ಇಲ್ಲಿ ನಡೆಯುತ್ತಿದೆ ಅಂದರೆ ಬೇಡಿಕೆಗಳ ಮೇಲಿನ ಚರ್ಚೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ನಾನು ಪ್ರೊಸಿಜರ್ ಹೇಳಬೇಕಲ್ಲಾ, ಮರೆತು ಹೋಗಿದೆ. ಟ್ರೈನಿಂಗ್ ಆಗಿ ಬಹಳ ದಿವಸಗಳಾಯಿತು. ಮಂತ್ರಿಗಳ ಉತ್ತರ ಪೂರ್ಣವಾದ ಮೇಲೆ ಆಮೇಲೆ ತಾವು ಸ್ಪಷ್ಟೀಕರಣ ಕೇಳುವಾಗ ಮಾತನಾಡಬಹುದು.

11.40 ಎ.ಎಂ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಇವತ್ತು ತಿಪಟೂರು, ಅರಸೀಕೆರೆ, ಮತ್ತು ಚನ್ನಪಟ್ಟಣಕ್ಕೆ ಕಾವೇರಿ ನದಿಯಿಂದ ನೀರು ತರುವಂಥಾದ್ದು ರಾಮನಗರಕ್ಕೆ ನೀರು ತರುವಂಥಾದ್ದು ಮಳವಳ್ಳಿಗೆ ನೀರು ತರುವಂಥಾದ್ದು, ಮತ್ತು ನರಗುಂದ, ಶಿಗ್ಗಾಂವ್‌ಗೆ, ಸವಣೂರು, ಬ್ಯಾಡಗಿ, ಚಿಕ್ಕೋಡಿ, ನಿಪ್ಪಾಣಿ, ಹುಕ್ಕೇರಿ, ಸಂಕೇಶ್ವರ, ಹಳಿಯಾಳ, ಕುಮಟಾ, ಹೊನ್ನಾವರ, ಆಳಂದ, ಗಂಗಾವತಿ, ಕೊಪ್ಪಳ, ಮಾನ್ವಿ, ಸಿಂಧನೂರು, ಇಂಡಿ, ಇಳಕಲ್, ಮತ್ತು ಹುನಗುಂದ ಮುಂತಾದ ಕಡೆಗಳಲ್ಲೂ ಇರತಕ್ಕಂಥ ಯೋಜನೆಗಳಿಂದ ನೀರು ತರಬೇಕು ಎಂದು ಹೇಳಿ, ಸರ್ಫೇಸ್ ವಾಟರ್ ಏನಿದೆ, ನದಿ, ಮತ್ತು ಕೆನಾಲ್ ಮೂಲಕ ತರುವಂಥಾದ್ದು, ಈ ಯೋಜನೆಗಳನ್ನು ಇವತ್ತು ನಾವು ಹಾಕಿಕೊಂಡಿದ್ದೇವೆ. ಆ ದೃಷ್ಟಿಯಲ್ಲಿ ಸ್ಥಳೀಯ ಸಂಸ್ಥೆಗಳ ಪರಿಸ್ಥಿತಿ ಆರ್ಥಿಕವಾಗಿ ಚೆನ್ನಾಗಿಲ್ಲ. ಮಾನ್ಯ ಡಿ.ಆರ್. ಪಾಟೀಲ್ ಅವರು ಹೇಳಿದರು. ಇವತ್ತು ನಾವು ಏಕರೂಪದ ನೀರಿನ ದರ ತರಬೇಕಾಗುತ್ತದೆ ಎಂದು. ಇವತ್ತಿನ ಆರ್ಥಿಕ ಪರಿಸ್ಥಿತಿಯಲ್ಲಿ ಹಾಲಿ ಇರತಕ್ಕಂಥ ಮಾದರಿ ಎಂದರೆ, ನಗರಪಾಲಿಕೆ-ಯವರು ಕೊಡತಕ್ಕಂಥ 70 ಭಾಗ ಜೀವವಿಮಾ ನಿಗಮದವರು ಕೊಡುತ್ತಿದ್ದರೆ, ಸರ್ಕಾರದಿಂದ ನಾವು ಐದು ಭಾಗ ಕೊಡುತ್ತಿದ್ದೆವು. ಇನ್ನು ಉಳಿದಂಥ ಭಾಗ ಹಣವನ್ನು ಸ್ಥಳೀಯ ಸಂಸ್ಥೆಗಳು ತುಂಬ-ಬೇಕಾಗಿತ್ತು. ಇದು ತುಂಬುವುದಕ್ಕೆ ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಸುಮಾರು 130 ಕೋಟಿ ರೂಪಾಯಿ ಬರಬೇಕಾಗಿದೆ ಇಂತಹ ಸಂಸ್ಥೆಗಳಿಂದ. ಜೊತೆಗೆ ನಗರಸಭೆಗಳಲ್ಲಿ 70 ಭಾಗ ಜೀವವಿಮಾ ನಿಗಮದಿಂದ ನಾವು ಹಣ ಪಡೆದರೆ, ಫಂಡಿಂಗ್ ಫ್ಯಾಕ್ಟರ್ ಎಂದು ಅವರ ಕಡೆಯಿಂದ ಹತ್ತು ಭಾಗ

ಸರ್ಕಾರ ಹಣ ತುಂಬುತ್ತಾ ಇತ್ತು, ನಗರ ಸಭೆಗಳಿಗೆ 20 ಭಾಗದಷ್ಟು ಹಣವನ್ನು ಇವತ್ತು ನಾವು ಸ್ಥಳೀಯ ಸಂಸ್ಥೆಗಳಿಗೆ ಪಾಲನ್ನು ಕೊಡುವಂಥಾದ್ದು ಇವತ್ತು ಇರುವಂಥ ನೀತಿ. ಪುರಸಭೆಗಳಿಗೆ 70, 15 ಮತ್ತು 10, ಆರ್ಥಿಕ ಶಕ್ತಿ ಇಲ್ಲವೆನ್ನುವುದು ನಮಗೆಲ್ಲಾ ಗೊತ್ತಿದೆ. ಮಾನ್ಯ ಮಿರಾಜುದ್ದೀನ್ ಪಟೇಲರು ಮಾತನಾಡುವಾಗ ತಿಳಿಸುತ್ತಾರೆ. ಅವುಗಳಿಗೆ ಶಕ್ತಿ ಇಲ್ಲದೇ ಇರುವುದರಿಂದ, ಇವತ್ತು ಆ ಹದಿನೈದು ಭಾಗವನ್ನೂ ತುಂಬುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ, ಹೊಸ ಒಂದು ಆರ್ಥಿಕ ಮಾದರಿ ಪದ್ಧತಿಯನ್ನು ಮಾಡಿದ್ದೇವೆ. ಅದು ಮಹಾರಾಷ್ಟ್ರ, ತಮಿಳುನಾಡು ಇವರನ್ನೆಲ್ಲಾ ನೋಡಿ, ಇವತ್ತು ಏಕರೂಪದ ನೀರಿನ ದರ ತರುವುದರ ಜೊತೆಗೆ ಎಲ್ಲಿ 20 ರಿಂದ 30 ಸಾವಿರ ಜನಸಂಖ್ಯೆ ಇದೆ ಆ ಪುರಸಭೆಯವರು ಇದನ್ನು ಕಟ್ಟಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಸರ್ಕಾರವೇ ಉಚಿತವಾಗಿಯೆ ಅವರಿಗೆ ತುಂಬಿಕೊಡುವಂಥ ಕಾರ್ಯ ಮಾಡುತ್ತಿದೆ ಅಂದರೆ 20 ಸಾವಿರದಿಂದ 30 ಸಾವಿರದವರೆಗೆ ಜನ-ಸಂಖ್ಯೆ ಏನಿದೆ, ಅವರು ವಂತಿಗೆಯನ್ನು ಏನೂ ಕಟ್ಟಬೇಕಾಗಿಲ್ಲ. ಅದನ್ನು ಮಾಡುವಂಥಾದ್ದು ಮತ್ತು ಎಲ್ಲಿ 70 ಸಾವಿರಕ್ಕಿಂತ ಮೇಲ್ಭಾಗ ಇದೆ, ಅದು ಹಿಂದೆ ಇದ್ದಂಥ 20 ಭಾಗ ಅಲ್ಲ. ಕೇವಲ ಹತ್ತು ಭಾಗ ಕಟ್ಟಿದರೆ ಸಾಕು ಎಂದು ಇಳಿಸಲಾಗಿದೆ. ಜೊತೆಗೆ ಜನಸಂಖ್ಯೆ 30 ಸಾವಿರದಿಂದ 75 ಸಾವಿರ ಇರುವ-ವರಿಗೂ ಮಾತ್ರ ಹತ್ತು ಭಾಗವನ್ನು ಅವರು ವಂತಿಗೆಯನ್ನು ಯೋಜನೆಗೆ ಕೊಡುವಂಥಾದ್ದು. ಇದನ್ನು ನಾವು ಅಷ್ಟು ಕಡಿಮೆ ಇಳಿಸಿದ್ದೇವೆ. ಈಗ ಹಾಲಿ ಇರುವ ಪರಿಸ್ಥಿತಿಯನ್ನು ಹಾಗೂ ಇದರ ಜೊತೆಗೆ ಕಡಿಮೆಯಾಗಿರುವುದನ್ನೂ ಸಹ ನಾವು ತಿಳಿಸಿದ್ದೇನೆ. ಈ ದೃಷ್ಟಿಯಲ್ಲಿ ಇವತ್ತು ಏಕರೂಪದ ನೀರಿನ ದರವನ್ನು ತರುವಂಥಾದ್ದು, ಇವತ್ತು ಪುರಸಭೆಗಳಿಗೆ 20 ರೂಪಾಯಿ ತೆಗೆದುಕೊಳ್ಳುವುದು, ಕೆಲವು ಕಡೆ 2 ರೂಪಾಯಿ ತೆಗೆದುಕೊಳ್ಳಲು 6 ರೂಪಾಯಿ ತೆಗೆದುಕೊಳ್ಳುತ್ತಾರೆ, 8 ರೂಪಾಯಿ ತೆಗೆದು-ಕೊಳ್ಳುತ್ತಾರೆ, ಹತ್ತು ರೂಪಾಯಿ ತೆಗೆದುಕೊಳ್ಳುತ್ತಾರೆ. ಆದರೆ ಅದು ಮೈನ್‌ಟೆನೆನ್ಸ್‌ಗೂ ಸಾಕಾಗುವು-ದಿಲ್ಲ. ಅನೇಕ ಕಡೆ ಅವರು ಎಲೆಕ್ಟ್ರಿಕ್ ಚಾರ್ಜ್ ಕಟ್ಟುವುದಕ್ಕೆ ಆಗುವುದಿಲ್ಲ, ವಾಟರ್‌ಮನ್ ವ್ಯವಸ್ಥೆ-ಯನ್ನು ಮಾಡಿಕೊಳ್ಳುವುದಕ್ಕೆ ಅವರಿಗೆ ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ನಾವು ಏನಾದರೂ ಈ ದರವನ್ನು ಇಟ್ಟರೆ ಅದಕ್ಕೆ ವಿದ್ಯುಚ್ಛಕ್ತಿ ಚಾರ್ಜ್‌ನ್ನು ಕಟ್ಟಿಕೊಳ್ಳುವಂಥ ವ್ಯವಸ್ಥೆ, ಜೊತೆಗೆ ಅದನ್ನು ನಿರ್ವಹಿಸುವಂಥವರಿಗೆ ಸಂಬಳ ಕೊಡುವುದಕ್ಕೆ ಆಗುವ ದೃಷ್ಟಿಯಿಂದ ಇವತ್ತು ನಗರಸಭೆಗಳಿಗೆ 25 ರೂಪಾಯಿ, ಮತ್ತು ಪುರಸಭೆಗಳಿಗೆ 20 ರೂಪಾಯಿ ಹಾಗೂ ಮಹಾನಗರಪಾಲಿಕೆಗೆ 30 ರೂಪಾಯಿ, ಅಂದರೆ, ಒಂದು ದಿನಕ್ಕೆ ಒಂದು ರೂಪಾಯಿ ಕೊಡುವ ವ್ಯವಸ್ಥೆಯನ್ನು ಇದರಲ್ಲಿ ಮಾಡಿಕೊಂಡಾಗ ಕುಡಿಯುವ ನೀರಿಗೆ ನಾವು ಬೇರೆ ಕಡೆಯಿಂದ ಹಣ ತರುವಂಥ ವ್ಯವಸ್ಥೆಯಾಗುತ್ತದೆ. ಇಲ್ಲದೇ ಹೋದರೆ ಬರೇ ಹುಡ್ಕೋ ಮತ್ತು ಎಲ್.ಐ.ಸಿ.ಯಿಂದ ನಾವು ಹಣ ಪಡೆದು ಈ ಎಲ್ಲಾ ಯೋಜನೆ-ಗಳನ್ನು ಮಾಡುತ್ತೇವೆ ಎಂದು ಹೇಳಿದರೆ ಅದು ಕಷ್ಟವಾಗುತ್ತದೆ. ಇವತ್ತು ನಮ್ಮ ಕೈಯಲ್ಲಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಆಗಲಿ ಅಥವಾ ವರ್ಲ್ಡ್ ಬ್ಯಾಂಕ್‌ನಿಂದ ಹಣ ಪಡೆಯುವುದಕ್ಕೆ ಆಗಲಿ, ಅವರ ಒಂದು ಕಂಡೀಷನ್ ಏನಿದೆ ಎಂದರೆ, ತಾವು ನೀರಿನ ದರ ಹಾಕಬೇಕಾಗುತ್ತದೆ. ಉಚಿತವಾಗಿ ನೀರು ಕೊಟ್ಟರೆ ನಾವು ನಿಮಗೆ ಹಣ ಕೊಡುವುದಿಲ್ಲ ಎಂದು ಕಂಡಿಷನ್ ಹಾಕುತ್ತಾರೆ. ಆ ದೃಷ್ಟಿ-

ಯಿಂದ ನಾವು ಇವತ್ತು ಏಕರೂಪದ ದರವನ್ನು ಪುರಸಭೆ, ನಗರಸಭೆ ಹಾಗೂ ಮಹಾನಗರಪಾಲಿಕೆ-ಗಳಿಗೆ ಅವರು ನಿರ್ವಹಿಸಲಿಕ್ಕೆಯಾದರೂ ವಿಧಿಸಿದರೆ, ಅವರಿಗೆ ಹಣ ಬರಲಿಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಆ ಕಾರ್ಯವನ್ನು ನಾವು ಮಾಡಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸಿ, ಇವತ್ತು ನಾವು ಮೈನ್‌ಟೆನೆನ್ಸ್ ಮಾಡುತ್ತಾ ಇರತಕ್ಕಂಥಾದ್ದು ರಾಜ್ಯದಲ್ಲಿ, ಇವತ್ತು ಏಳು ಯೋಜನೆ-ಗಳನ್ನು, ಕನ್‌ಷ್ಯೂಮರ್ ಪಾಯಿಂಟ್‌ವರೆಗೆ, ತೆಗೆದುಕೊಂಡು ಬಂದು ಕೊಡುವಂಥಾದ್ದನ್ನು, ಅಂತಹ ಏಳು ಕೆಲಸಗಳನ್ನು ಅಂದರೆ ಸ್ಕೀಮ್ಸ್‌ನ್ನು ನಾವು ನಮ್ಮ ಮಂಡಲಿಯಿಂದ ಮಾಡುತ್ತಾ ಇದ್ದೇವೆ. ನಮಗೆ 1995-96ರಲ್ಲಿ ಬಾಕಿ ಬರಬೇಕಾದಂಥ ಹಣ, ಕೊಡದೇ ಇರುವಂಥಾದ್ದು ಇವತ್ತು ಹತ್ತು ಕೋಟಿ ರೂಪಾಯಿ ಇದೆ. ಬರೇ ಏಳು ಅಂತಹ ಪಟ್ಟಣಗಳಿಗೆ ಕೊಡುವಂಥಾದ್ದು ಜೊತೆಗೆ ಇನ್ನೂ ಏಳು ಯೋಜನೆಗಗಳು, ಬಲ್ಕ್ ವಾಟರ್‌ಸಪ್ಲೈ ಎಂದು ಒಟ್ಟಿಗೆ ನೀರು ಕೊಡುವುದು. ಹುಬ್ಬಳಿ-ಧಾರವಾಡ ಅಂತಹ ಕಡೆ ಕೊಡುವಂಥಾದ್ದು ಯೋಜನೆಗಳಿಗೆ ಇವತ್ತು ನಮಗೆ ಬಾಕಿ ಬರಬೇಕಾ-ದಂಥಾದ್ದು 8 ಕೋಟಿ ಇದೆ. ಇದನ್ನೆಲ್ಲಾ ಏಕೆ ಅಂಕಿಅಂಶಗಳನ್ನು ನಾನು ಹೇಳುತ್ತಿದ್ದೇನೆ ಎಂದರೆ, ಅನೇಕ ಸದಸ್ಯರಿಗೆ ಕೆಲಸ ಆಗುತ್ತಿಲ್ಲ, ನೀರು ಸರಬರಾಜು ಆಗುತ್ತಿಲ್ಲ, ಯೋಜನೆಗಳು ಹಾಗೆಯೇ ನಿಂತಿವೆ, ನಮ್ಮ ಪಾಲಿನ ಬಂಡವಾಳವನ್ನು ನಾವು ಕೊಡಬೇಕಾಗುತ್ತದೆ, ಇಲ್ಲಿ ಹೇಳಬೇಕಾದರೆ ಇವತ್ತು 30 ಕೋಟಿ ಇದ್ದದ್ದು ಮಂಡಳಿಗೆ 50 ಕೋಟಿ ಆಯಿತು. ಆರ್ಥಿಕ ಬಲ ಜಾಸ್ತಿಯಾಗಬೇಕೆಂದು ವಿಷಯ ಸಮಿತಿಗಳಲ್ಲಿ ಸೂಚಿಸಿದ್ದಾರೆ. ತಾವು ಜಾಸ್ತಿ ಮಾಡಿಕೊಳ್ಳಿ ಎಂದು ಅವರು ಹೇಳಿದ್ದಾರೆ. ಇವತ್ತು ನಾವು 80 ಕೋಟಿಗೆ ಹೋಗಿದ್ದೇನೆ. ಈ ವರ್ಷದ ಆರ್ಥಿಕ ಪತ್ರದಲ್ಲಿ ವಿಶೇಷವಾಗಿ 80 ಕೋಟಿಯನ್ನು ಇವತ್ತು ಮೀಸಲಾಗಿ ಇಟ್ಟಿರುವಂಥಾದ್ದು. ಅದರ ಜೋತೆಗೆ ಕಾಂಟ್ರಿಬ್ಯೂಷನ್ ವರ್ಕ್ಸ್ ಎಂದು ಹೇಳಿ ಅದು ಎರಡು ಕೋಟಿ ಬಾಕಿ ಎಂದರೆ, ಸುಮಾರು 20 ಕೋಟಿಯಲ್ಲಿ 7-7 ಹದಿ-ನಾಲ್ಕು ಮತ್ತು ಈ ಕಾಂಟ್ರಿಬ್ಯೂಷನ್ ವರ್ಕ್ಸ್‌ನಲ್ಲಿ ಬಾಕಿ ಬರಬೇಕಾದದ್ದೇ 20 ಕೋಟಿ ಇದೆ. ಈ ದೃಷ್ಟಿಯಿಂದ ಇವತ್ತು ಇಷ್ಟು ದೊಡ್ಡ ಯೋಜನೆಗಳಿಗೆ ಸಾಕಷ್ಟು ಹಣ ತೊಡಗಿಸುವಂಥಾದ್ದು ಕಷ್ಟ-ವಾಗಿರುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸಬೇಕಾಗುತ್ತದೆ. ಜೊತೆಗೆ ವಿಶೇಷವಾಗಿ ಇಲ್ಲಿ ನಮ್ಮ ಪಾಟೀಲರು ಮಾತನಾಡಿದರು. ಬಿಜಾಪುರ ಇರಬಹುದು, ಶಿವಮೊಗ್ಗದ ಬಗ್ಗೆ ಮಾತನಾಡಿದಂಥ ಸದಸ್ಯರು ಇರಬಹುದು, ಇಡೀ ರಾಜ್ಯದಲ್ಲಿ ದೊಡ್ಡ ದೊಡ್ಡ ಯೋಜನೆಗಳು ಇರತಕ್ಕಂಥಾದ್ದು, ಇವತ್ತು ಸುಮಾರು 163 ಕೋಟಿ ರೂಪಾಯಿಗಳ ಯೋಜನೆಗಳನ್ನು ನಾವು ಕಾರ್ಯಗತ ಮಾಡುತ್ತಿದ್ದೇವೆ. ಮಂಗಳೂರಿಗೆ ಸಮಗ್ರವಾಗಿ ಒಳಚರಂಡಿ ವ್ಯವಸ್ಥೆ ಮಾಡಬೇಕೆಂದು ಟಾಟಾರವರಿಗೆ ಕನ್ಸಲ್ಟೇಷನ್‌ಗೆ ಕೊಟ್ಟು ಅದರ ರೂಪಾರೇಷೆಗಳನ್ನು ಮಾಡುತ್ತಿದ್ದಾರೆ. ಅದರ ಜೊತೆಗೆ ವಿಶೇಷವಾಗಿ ಇವತ್ತು ಪ್ರತಿ-ಯೊಂದು ಜಿಲ್ಲಾ ಕೇಂದ್ರಗಳೂ, ನಗರ ಪ್ರದೇಶ ಮತ್ತು ಪಟ್ಟಣ ಪ್ರದೇಶಗಳ ಗಡಿಯನ್ನು, ವ್ಯಾಪ್ತಿ-ಯನ್ನು ಜಾಸ್ತಿ ಮಾಡಿದ್ದೇವೆ. ಅನೇಕ ಹೊಸ ಹಳ್ಳಿಗಳು ಸೇರುತ್ತಾ ಇವೆ. ಆ ಹಳ್ಳಿಗಳಿಗೆ ನೀರು ಕೊಡ ಬೇಕು ಎನ್ನುವ ಬೇಡಿಕೆ ನಮ್ಮ ಮುಂದೆ ಇದೆ. ಇವತ್ತು ಅನೇಕ ಹಳ್ಳಿಗಳನ್ನು ಪಟ್ಟಣಗಳಿಗೆ ಸೇರಿಸಿ ಕೊಂಡಿದ್ದೇವೆ. ಅದಕ್ಕೂ ನೀರು ಒದಗಿಸಬೇಕು ಎಂಬ ದೃಷ್ಟಿಯಲ್ಲಿ ಮಾನ್ಯ ಸದಸ್ಯರುಗಳು

ಕೇಳಿರುವಂಥಾದ್ದು, ಇದರಲ್ಲಿ ವಿಶೇಷವಾಗಿ ಗುಲ್ಬರ್ಗಾ ಒಂದು ಸಿಟಿಯ ವಾಟರ್ ವರ್ಕ್ಸ್‌ಗೆ 28 ಕೋಟಿ ರೂಪಾಯಿಗಳನ್ನು ನಾವು ಖರ್ಚುಮಾಡಿದ್ದೇವೆ. ಅದೇ ರೀತಿ ಬಿಜಾಪುರ ವಾಟರ್ ವರ್ಕ್ಸ್‌ಗೆ 35 ಕೋಟಿ ರೂಪಾಯಿ ಯೋಜನೆಯಾಗಿ ಈಗಾಗಲೇ ಸುಮಾರು 24-25 ಕೋಟಿ ರೂಪಾಯಿ-ಗಳನ್ನು ಅಲ್ಲಿ ನೀರನ್ನು ಒದಗಿಸುವ ದೃಷ್ಟಿಯಿಂದ ಖರ್ಚುಮಾಡಿದ್ದೇವೆ. ಮಾನ್ಯ ಈಶ್ವರಪ್ಪನವರಿಗೆ ಗೊತ್ತಿದೆ, ಶಿವಮೊಗ್ಗದಲ್ಲಿ ಇವತ್ತು 12 ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿ ಕಾರ್ಯ-ಗತ ಮಾಡುತ್ತಿದ್ದೇವೆ. ಅದೇ ರೀತಿ ಹುಬ್ಬಳಿ–ಧಾರವಾಡಕ್ಕೆ 12 ಕೋಟಿ 34 ಲಕ್ಷ ರೂಪಾಯಿಗಳ ಯೋಜನೆಯನ್ನು ಮಾಡುತ್ತಿದ್ದೇವೆ. ಜೊತೆಗೆ ಎರಡನೇ ಸ್ಟೇಜ್ ಎಂದು ಆರೂವರೆ ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡುತ್ತಿದ್ದೇವೆ. ಬೆಳಗಾಮ್ ಸಿಟಿಗೆ 39.50 ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿ ಸುಮಾರು 12 ಕೋಟಿ ರೂಪಾಯಿ ಖರ್ಚುಮಾಡಿದ್ದೇವೆ. ಮೈಸೂರು ಸಿಟಿ ಬಗ್ಗೆ ಮಾನ್ಯ ಸದಸ್ಯರಾದ ಪ್ರವಾರ್ ಮತ್ತು ರಾಮದಾಸ್‌ರವರು ಮಾತನಾಡಿದರು. ಇವತ್ತು ಅಲ್ಲಿ 11.30 ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿದ್ದೇವೆ. ತುಮಕೂರು ಸಿಟಿಗೆ ಹೇಮಾವತಿ ನೀರು ತರಬೇಕೆಂದು ಹೇಳಿ ಆ ಕಾರ್ಯವನ್ನು ಮಾಡಿ, ಆ ಕೆನಾಲ್‌ನಿಂದ ನೀರು ತಂದು, ಬರುಗಡನಹಳ್ಳಿ ಬಳಿ ಅಡ್ಡಹಾಕಿದ್ದಾರೆ, ಇದು ಪತ್ರಿಕೆಯಲ್ಲಿ ಬಂದಿದೆ. ಅಲ್ಲಲ್ಲಿ ಅಡ್ಡ ಹಾಕಿ ಬೇರೆ ಬೇರೆ ಕಡೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ತಡವಾಗಿದೆ, 72 ಕಿಲೋಮೀಟರ್ ಬಂದಿದೆ, ಇನ್ನೊಂದು 50 ಕಿಲೋಮೀಟರ್ ಬರುವುದನ್ನು ಜನ, ರೈತರೇ ಅಡ್ಡಗಟ್ಟಿ ತೊಂದರೆ ಮಾಡಿ ಬೇರೆ ಬೇರೆ ಕಡೆಗೆ ನೀರನ್ನು ಉಪಯೋಗಿಸುತ್ತಿದ್ದಾರೆ ಎಂದು ಹೇಳಿ ಇವತ್ತೂ ಪತ್ರಿಕೆಯಲ್ಲಿ ಫೋಟೊ ಸಮೇತ ಬಂದಿದೆ. ಬಳ್ಳಾರಿ ನಗರಕ್ಕೆ ಸುಮಾರು 18 ಕೋಟಿ ರೂಪಾಯಿಗಳ ಯೋಜನೆ ಇದೆ. ಜೊತೆಗೆ ದಾವಣಗೆರೆಗೆ ಹೊಸದಾಗಿ ಅಲ್ಲಿ ಯೋಜನೆಗಳನ್ನು ಮಾಡುವಂಥಾದ್ದು, ಇದೆಲ್ಲಾ ಸೇರಿಸಿ-ಕೊಂಡರೆ ಇವತ್ತು ದೊಡ್ಡ ದೊಡ್ಡ ಪಟ್ಟಣಗಳಲ್ಲೇ ಸುಮಾರು 163 ಕೋಟಿ ರೂಪಾಯಿಗಳ ಕೆಲಸ ಕಾರ್ಯಗಳನ್ನು ಇವತ್ತು ನಾವು ಮಾಡುತ್ತಾ ಇದ್ದೇವೆ. ಇವತ್ತು ಮಂಡಳಿಯಲ್ಲಿ ಹಾಲಿ ಕೆಲಸಗಳನ್ನು ಬೇಗ ಮುಗಿಸಿ ಅವರ ವಶಕ್ಕೆ ಕೊಡಿ ಎಂದು ಅನೇಕ ಸದಸ್ಯರ ವಾದ ಇದೆ. ಅಂತಹ ಸುಮಾರು 87 ನೀರು ಸರಬರಾಜು ಯೋಜನೆಗಳನ್ನು ತೆಗೆದುಕೊಂಡು ಆ ಎಲ್ಲ ಕಾರ್ಯಕ್ರಮಗಳನ್ನು ಮಾಡುತ್ತಾ ಇದ್ದೇವೆ. ಅದರಲ್ಲಿ 11 ಒಳಚರಂಡಿ ಸೇರಿದರೆ 98 ಕೆಲಸಗಳನ್ನು ನಾವು ಇವತ್ತು ಕೈಗೆತ್ತಿಕೊಂಡಿರ-ತಕ್ಕಂಥಾದ್ದು. ಅದರಲ್ಲಿ 24 ಯೋಜನೆಗಳನ್ನು ಈ ಸಾರಿ ಚಾಲ್ತಿಗೊಳಿಸಲಾಗುತ್ತದೆ. ಮತ್ತು 32 ನೀರು ಸರಬರಾಜು ಯೋಜನೆಗಳನ್ನು ಪೂರ್ತಿ ರೀತಿಯಿಂದ ಮುಗಿಸಿ ಆ ಸ್ಥಳೀಯ ಸಂಸ್ಥೆಗಳಿಗೆ ಕೊಡುತ್ತೇವೆ. ಇನ್ನು ಮುಂದೆ ನಾವು ಮೈನ್‌ಟೇನ್ ಮಾಡುವುದಕ್ಕೆ ಸಾಧ್ಯವಿಲ್ಲ. ಆ ಸ್ಥಳೀಯ ಸಂಸ್ಥೆಗಳಿಗೆ ಮೈನ್-ಟೇನ್ ಮಾಡಿಕೊಳ್ಳುವ ವ್ಯವಸ್ಥೆ ಮಾಡಿಕೊಡಬೇಕು ಎಂದು ಈಗಾಗಲೇ ಹಿಂದೆ ಇದ್ದಂಥ ಸರ್ಕಾರ ಕೂಡ ತೀರ್ಮಾನವನ್ನು ತೆಗೆದುಕೊಂಡಿದೆ. ಇವತ್ತು ನಾವು ಕೂಡ ಅದೇ ತೀರ್ಮಾನವನ್ನು ತೆಗೆದು-ಕೊಂಡಿದ್ದೇವೆ. ನಾವು ಅದನ್ನು ಮೈನ್‌ಟೇನ್ ಮಾಡುವುದು ಕಷ್ಟವಾಗುತ್ತದೆ, ಪುರಸಭೆಗಳು, ನಗರ ಸಭೆಗಳು ಇವತ್ತು ಆ ಮಹಾನಗರ ಪಾಲಿಕೆಗಳು ಅದನ್ನು ಮೈನ್‌ಟೇನ್ ಮಾಡಿಕೊಳ್ಳುವ ದೃಷ್ಟಿಯಿಂದ

ಇವತ್ತು ಈ ವರ್ಷದಲ್ಲಿ 32 ನೀರು ಸರಬರಾಜು ಯೋಜನೆಗಳನ್ನು ಪೂರ್ತಿ ರೀತಿಯಲ್ಲಿ ಮುಗಿಸಿ ಈಗ ನಡೆಯುತ್ತಿರತಕ್ಕಂಥ 98 ಯೋಜನೆಗಳಲ್ಲಿ ಅದನ್ನು ಅವರಿಗೆ ವಹಿಸಲಾಗುವುದು. 24 ಯೋಜನೆಗಳನ್ನು ಚಾಲ್ತಿಗೊಳಿಸಿ ಇವತ್ತು ಒಟ್ಟು ಇನ್ನು 2-3 ವರ್ಷಗಳಲ್ಲಿ ಉಳಿದಿರತಕ್ಕಂಥ ಎಲ್ಲಾ ಯೋಜನೆಗಳನ್ನು ಕಾರ್ಯಗತಮಾಡಿ 2 ಸಾವಿರ ವರ್ಷ ಅಥವಾ 1998-99ಕ್ಕೆ ಮುಗಿಸಿಕೊಡು-ವಂಥ ಕಾರ್ಯವನ್ನು ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಮಾಡಿಕೊಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ನಾನು ತಿಳಿಸಲು ಇಚ್ಛೆಪಡುತ್ತೇನೆ. ಇದರ ಜೊತೆಗೆ ಇವತ್ತು ನಮ್ಮ ಪ್ರಧಾನಿಗಳಾಗಿದ್ದಂಥವರು ಅವರು ಮುಖ್ಯಮಂತ್ರಿಗಳಾಗಿದ್ದಾಗ, 29 ಹೊಸ ಯೋಜನೆಗಳನ್ನು, ಈಗಿರುವುದರ ಜೊತೆಗೆ ತೆಗೆದುಕೊಳ್ಳುವ ಒಂದು ಕಾರ್ಯಕ್ರಮವನ್ನು ಮಾಡಿ ಅದಕ್ಕೆ 86 ಕೋಟಿ ರೂಪಾಯಿಗಳ ವೆಚ್ಚದಲ್ಲಿ ತಾತ್ವಿಕವಾಗಿ ಒಂದು ಮಂಜೂರಾತಿಯನ್ನು ಕೊಟ್ಟಿದ್ದಾರೆ. ಹಾಗೆ ಕೊಟ್ಟಿರತಕ್ಕಂಥ 29 ಯೋಜನೆಗಳಿಗೆ ನಾವು ಈಗ 96-97ರಲ್ಲಿ ಸುಮಾರು 27 ಲಕ್ಷ ರೂಪಾಯಿಗಳನ್ನು ಮುಂಗಡಪತ್ರದಲ್ಲಿ ಇಟ್ಟಿದ್ದೇನೆ. ಅದು ಏನೇನೂ ಸಾಕಾಗುವುದಿಲ್ಲ. ಅದು ಬರೀ ಟೋಕನ್ ಗ್ರಾಂಟ್ ಎಂದು ನಾವು ಇಟ್ಟಿರತಕ್ಕಂಥಾದ್ದು. ಅದನ್ನು ಹೊಸ ಆರ್ಥಿಕ ಪದ್ಧತಿಯಲ್ಲಿ ಸಚಿವಸಂಪುಟದ ಅನುಮೋದನೆ ಪಡೆದು ಬೇರೆ ವಿವಿಧ ಹಣಕಾಸಿನ ಮೂಲಗಳಿಂದ ಆ ಯೋಜನೆಗಳನ್ನು ತೆಗೆದುಕೊಳ್ಳುತ್ತೇವೆ. ಕರ್ನಾಟಕ ರಾಜ್ಯಕ್ಕೆ ವಿಶೇಷ-ವಾಗಿ, ಏಷ್ಯಾ ಡೆವಲಪ್‌ಮೆಂಟ್ ಬ್ಯಾಂಕಿನಿಂದ 132 ಕೋಟಿ ರೂಪಾಯಿ ಮಂಜೂರಾತಿಯಾಗಿದೆ. ಈ ಕೆಳಕಂಡ ಯೋಜನೆಗಳಿಗೆ ಆಗ್ಮೆಂಟೇಷನ್ ಏನು ಹೊಸದಾಗಿ, ಮೈಸೂರು ನೀರು ಸರಬರಾಜು ಯೋಜನೆ, ಮತ್ತು ಔಟರ್‌ರಿಂಗ್ ರೋಡ್ ಇವೆಲ್ಲವನ್ನು ತೆಗೆದುಕೊಂಡು ಮಾಡುವಂಥ ಕಾರ್ಯಕ್ಕೆ ಸುಮಾರು 31 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದ್ದಾರೆ. ಜೊತೆಗೆ ಮೈಸೂರು ಒಳಚರಂಡಿ ವ್ಯವಸ್ಥೆಗೆ 47 ಕೋಟಿ ರೂಪಾಯಿ, ತುಮಕೂರು ನೀರು ಸರಬರಾಜು ಯೋಜನೆಗೆ 134 ಲಕ್ಷ ಇದರಲ್ಲಿಯೇ ಸೇರಿದೆ. ಆ ಪಕ್ಷದಲ್ಲಿಯೇ ಕೆಲಸ ತೆಗೆದುಕೊಳ್ಳುತ್ತೇವೆ. ವಿಶೇಷವಾಗಿ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಕೊಟ್ಟಿರತಕ್ಕ ಮಂಜೂರಾತಿ. ಜೊತೆಗೆ, ತುಮಕೂರು ಒಳಚರಂಡಿಗೆ 21 ಕೋಟಿ ರೂಪಾಯಿಗಳನ್ನು ತೊಡಗಿಸಿದ್ದೇವೆ. ರಾಮನಗರ ಒಳಚರಂಡಿಗೆ 5 ಕೋಟಿ 95 ಲಕ್ಷ ರೂಪಾಯಿ, ಚನ್ನಪಟ್ಟಣ ನೀರು ಸರಬರಾಜಿಗೆ ಸಂಬಂಧಪಟ್ಟಂತೆ, ಕಾವೇರಿ ನೀರನ್ನು ತ್ವರುವ ಸಲುವಾಗಿ 24 ಕೋಟಿ ರೂಪಾಯಿ. ಹೀಗೆ 132 ಕೋಟಿಗಳ ಹಣವನ್ನು ವಿಶೇಷವಾಗಿ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಇವತ್ತು ಮಂಜೂರಾತಿ ಸಿಕ್ಕಿದೆ. ಇದರ ಬಗ್ಗೆ ವಿನ್ಯಾಸ, ನಕ್ಷೆ ಎಲ್ಲಾ ಸಿದ್ಧ ಮಾಡುತ್ತಿದ್ದೇವೆ, ಇನ್ನು 5-6 ತಿಂಗಳಲ್ಲಿ ಈ ಕಾರ್ಯವನ್ನು ತೆಗೆದುಕೊಳ್ಳುತ್ತಿದ್ದೇವೆ. ಇದರ ಜೊತೆಗೆ, ಇನ್ನೂ ವಿಶೇಷವಾಗಿ ಹೇಳಬೇಕಾದರೆ, ನಮ್ಮ ರಾಜ್ಯದಲ್ಲಿ ಈ 205 ಪಟ್ಟಣಗಳು ಎಂದು ನಾವೇನು ಗುರುತಿಸಿದ್ದೇವೆ, ಅದರ ಜೊತೆಗೆ ಪ್ರಪ್ರಥಮನಾಗಿ ಒಂದು ಮಾಸ್ಟರ್ ಪ್ಲಾನ್ ಮಾಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಇದುವರೆಗೂ ನಮ್ಮಲ್ಲಿ ಮಾಸ್ಟರ್ ಪ್ಲಾನ್ ಇರಲಿಲ್ಲ. ನಮ್ಮ ಮಂಡಳಿಯಲ್ಲಿ, ಇಡೀ ರಾಜ್ಯದಲ್ಲಿ ಸಮಗ್ರವಾದ ಮಾಸ್ಟರ್ ಪ್ಲಾನ್ ಮಾಡಿ, ವರ್ಲ್ಡ್ ಬ್ಯಾಂಕ್ ಮತ್ತು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳ ಮೂಲಕ 1300 ಕೋಟಿ ರೂಪಾಯಿಗಳ ಹಣವನ್ನು ತಂದು,

ಇದಕ್ಕೆ ನಾವು ನಿರೀಕ್ಷೆ ಮಾಡಿದ ರೀತಿಯಲ್ಲಿ ಪ್ರಜಾಸಂಖ್ಯೆ 2000 ವರ್ಷ 2010 ವರ್ಷ, ಒಂದು ಪ್ರೊಜೆಕ್ಟೆಡ್ 15-20 ವರ್ಷಗಳ ಅಂದಾಜು ಇಟ್ಟುಕೊಂಡು ಆಯಾ ಜನಸಂಖ್ಯೆ ಜಾಸ್ತಿಯಾಗುವ ದೃಷ್ಟಿಯಲ್ಲಿ 2ನೇ ಹಂತ, 3ನೇ ಹಂತದಲ್ಲಿ ನೀರನ್ನು ಕೊಡುವಂಥ ಕಾರ್ಯವನ್ನು ಮಾಡುವ ದೃಷ್ಟಿ-ಯಲ್ಲಿ, ಇವತ್ತು ವಿಶೇಷವಾಗಿ 19 ನಗರಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಇದಕ್ಕೆ 400 ಕೋಟಿ ರೂಪಾಯಿಗಳ ಹಣವನ್ನು ತರುವಂಥ ಕಾರ್ಯವನ್ನು ನಾವು ಮಾಡುತ್ತಿದ್ದೇವೆ. ಇದರ ಜೊತೆಗೆ, ಯಾವುದು ಜನಸಂಖ್ಯೆ 50 ಸಾವಿರ, ಒಂದು ಲಕ್ಷ ಮೇಲಿದೆ, ಅದಕ್ಕೆ ಸುಮಾರು 40 ನಗರಗಳನ್ನು ಗುರುತಿಸಿ ಈ 1200 ಕೋಟಿಗಳಲ್ಲಿ ಇವತ್ತು ಪ್ರಧಾನಿಗಳು ನಮ್ಮವರೇ ಇರುವುದರಿಂದ, ಅವರ ಹತ್ತಿರ ಮಾತನಾಡಿ, ಈ ಹಣವನ್ನು ಕೊಡುವಂಥ ಕಾರ್ಯವನ್ನು ಮಾಡುತ್ತಿದ್ದೇವೆ. ಜೊತೆಗೆ ಸ್ಥಳೀಯ ಸಂಸ್ಥೆಗಳ ಬಗ್ಗೆ ನಾನು ಈಗಾಗಲೇ ತಿಳಿಸಿದ್ದೇನೆ. ಅವರಿಗೆ ಕೊಡುವಂಥ, 20 ಸಾವಿರ, 30 ಸಾವಿರ ಜನಸಂಖ್ಯೆಯವರೆಗೆ ಉಚಿತವಾಗಿ ನೀರು ಕೊಡುವ ಕಾರ್ಯ, ಜೊತೆಗೆ ಏಕರೂಪ ನೀರಿನ ಪದ್ಧತಿ, ಮತ್ತು ಇನ್ನೊಂದು ನಮ್ಮ ಈ ಮಂಡಳಿಯಲ್ಲಿ ವಿಶೇಷ ಘಟಕ ಯೋಜನೆ ಇದೆ. ಎಸ್.ಸಿ.ಪಿ. ಯೋಜನೆ, ಮಾನ್ಯ ಖರ್ಗೆಯವರಿಗೆ ಗೊತ್ತಿದೆ. ಈ ಎಸ್.ಸಿ.ಪಿ. ಯೋಜನೆಯಲ್ಲಿ ಇವತ್ತು ಎಲ್ಲಿ 51 ಭಾಗಕ್ಕಿಂತ ಹೆಚ್ಚು ಪರಿಶಿಷ್ಟ ವರ್ಗದವರು ವಾಸ ಮಾಡುವಂಥ ಬಡಾವಣೆಗಳು ಇವೆ. ಅಲ್ಲಿ, ಅವರಿಗೆ ನೀರನ್ನು ಕೊಡುವಂಥ ಕಾರ್ಯ, ಕಿರು ನೀರು ಯೋಜನೆಗಳನ್ನು ಕೊಡುವಂಥ ಕಾರ್ಯ, ಈ ದೃಷ್ಟಿಯಲ್ಲಿ ಅಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಅದಕ್ಕೆ ಮೀಸಲಾಗಿಟ್ಟ ಸುಮಾರು 8 ಕೋಟಿ ರೂಪಾಯಿಗಳ ಹಣವನ್ನು ವಿಶೇಷವಾಗಿ ಪಟ್ಟಣಗಳಲ್ಲಿರತಕ್ಕ ಅಂತಹ ಕಾಲೋನಿಗಳನ್ನು ಆಯ್ಕೆ ಮಾಡಿಕೊಂಡು ಅಭಿವೃದ್ಧಿ ಮಾಡುವಂಥ ಕಾರ್ಯವನ್ನೂ ಸಹ ನಾವು ಮಾಡುತ್ತೇವೆನ್ನು-ವುದನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಮುಖ್ಯವಾಗಿ, ಮೊನ್ನೆ ನಮ್ಮ ಹುಡ್ಕೋ ಡೈರಕ್ಟರ್‌ರವರು ಇಲ್ಲಿಗೆ ಬಂದಿದ್ದರು. ಹುಡ್ಕೋದಿಂದ ನಾವು ಪಡೆಯುವಂಥ ನೆರವು, ಹಣ ಬಹಳ ಕಡಿಮೆ. ಫಂಡಿಂಗ್ ಪ್ಯಾಟ್ರನ್ ಸಂಸ್ಥೆಯಿಂದ ನಾವು ಪಡೆಯುವಂಥ ಹಣ. ಆ ದೃಷ್ಟಿಯಲ್ಲಿ ಅವರು ಒಂದು ವಿಶೇಷವಾಗಿ ತಿಳಿಸಿದ್ದಾರೆ. ತಮಗೆ ಯಾವರೀತಿ ವಸತಿಗಾಗಿ ಹಣವನ್ನು ಇಂತಿಷ್ಟು ಎಂದು ಖಾಯಂ ಆಗಿ ಕೊಡುತ್ತೇವೆ. ಅದೇ ರೀತಿ ಇನ್ನು ನಮ್ಮ ಮಂಡಳಿಗೂ ಸಹ ಸುಮಾರು 30-35 ಕೋಟಿ ಹಣ-ವನ್ನು ಸಾಲದ ರೂಪದಲ್ಲಿ ಪ್ರತಿ ವರ್ಷ ಕೊಡುತ್ತೇವೆ, ಎಂಬುದಾಗಿ ಒಪ್ಪಿಕೊಂಡಿದ್ದಾರೆ. ಈ ರೀತಿ ಆಗಿರತಕ್ಕಂಥಾದ್ದು, ಇದು ಪ್ರಥಮ. ಇದರ ಸಭೆ ನಡೆದಂಥಾದ್ದು 2-8-96 ಮಾನ್ಯ ಪ್ರಧಾನಿಗಳು ಅಲ್ಲಿಂದ ಹುಡ್ಕೋರವರನ್ನು ಕಳುಹಿಸಿದ್ದರು. ಇಲ್ಲಿನ ವಸತಿ ಮತ್ತು ನೀರಿನ ವ್ಯವಸ್ಥೆಗೆ ವಿಶೇಷವಾಗಿ ಕರ್ನಾಟಕ ನೀರು ಅಭಿವೃದ್ಧಿ ಒಳಚರಂಡಿ ಮಂಡಳಿಗೆ ತಾವು ಹೆಚ್ಚು ಹಣ ಕೊಡಬೇಕು ಎಂದು ನಾವು ಪಡೆಯುತ್ತಾ ಇದ್ದಂಥಾದ್ದು ಬಹಳ ಕಡಿಮೆ ಹಣ. ಸುಮಾರು 8-10 ಕೋಟಿ ರೂಪಾಯಿಗಳನ್ನು ಅವರಿಂದ ಪಡೆಯುತ್ತಿದ್ದೆವು. ಜೀವವಿಮಾ ನಿಗಮದವರು ಹೆಚ್ಚಾಗಿ ಹಣವನ್ನು ಕೊಡುತ್ತಿದ್ದರು. ಆ ದೃಷ್ಟಿಯಿಂದ ನಮ್ಮ ಯೋಜನೆಗಳನ್ನು ಸಮಯಕ್ಕೆ ಸರಿಯಾಗಿ ಮುಗಿಸುವಂಥಾದ್ದು, ಹಣಕಾಸಿನ ದೃಷ್ಟಿಯಿಂದ ಸಾಧ್ಯವಾಗುತ್ತಾ ಇರಲಿಲ್ಲ. ಆ ದೃಷ್ಟಿಯಿಂದ ಬಹಳ ತಡವಾಗುತ್ತದೆಂದು, ಅವರು

ಬಂದು ವಸತಿ ಸಚಿವರಾದ ರೇವಣ್ಣನವರ ಕೊಠಡಿಯಲ್ಲಿ ಸೇರಿ, 2-8-96ರಲ್ಲಿ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಇನ್ನು ಮುಂದೆ ಡೆಡಿಕೇಟೆಡ್ ಅಮೌಂಟ್ ನಮಗೆ ಕೊಡುವಂಥಾದ್ದು. ವಸತಿಗೆ ಕೊಟ್ಟ ರೀತಿಯಲ್ಲಿ 30 ರಿಂದ 35 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ನಿಮಗೆ ಕೊಡುತ್ತೇವೆಂದು ಅವರು ತಿಳಿಸಿದ್ದಾರೆ. ಆದ್ದರಿಂದ ನಾನು ಹೇಳಿದಂಥ ಅನೇಕ ಯೋಜನೆಗಳು, ತಡವಾಗಿರತಕ್ಕ ಯೋಜನೆಗಳು, ಕಾರ್ಯಗತವಾಗದೇ ಇರತಕ್ಕ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಉತ್ತಮ ಅವಕಾಶವಾಗಿದೆ ಎಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಗಮನಕ್ಕೆ ತಿಳಿಯಬಯಸು-ತ್ತೇನೆ. ಆದ್ದರಿಂದ, ನಾವು ಈ ಕಾರ್ಯಕ್ರಮಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಎಲ್.ಐ.ಸಿ. ಮೂಲಕವಾಗಲೀ ಅಥವಾ ಹೂಡ್ಕೋ ಆಗಲೀ, ಬೇರೆ ಸಂಸ್ಥೆಗಳಿಂದ ಹಣವನ್ನು ಪಡೆದು, ಅತಿ ಬೇಗ ನಮ್ಮ ಅಂದಾಜಿಗೆ ಮುಗಿಸುವಂಥ ಕಾರ್ಯವನ್ನು ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಜೊತೆಗೆ ವಿಷಯ ಸಮಿತಿ ಸದಸ್ಯರಾಗಿ ಮಾನ್ಯ ಶಾಸಕ ಮಿತ್ರರು ಸದಸ್ಯರಿದ್ದಾರೆ. ಅವರು ತಿಳಿಸಿರತಕ್ಕ ರೀತಿಯಲ್ಲಿ, ನೀವು ಬಜೆಟ್ ಅಲೋಕೇಷನ್ ಜಾಸ್ತಿ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ನಾನಾ ರೀತಿಯ ಒತ್ತಡದಿಂದ ಈ ಕೆಲಸಗಳನ್ನು ತೆಗೆದುಕೊಂಡಿದೆ. ಇದು ಕುಡಿಯುವ ನೀರಿನ ಕಾರ್ಯ ಆದ್ದರಿಂದ, ಇದನ್ನು ತೆಗೆದುಕೊಂಡಿದ್ದೇವೆ. ಆ ದೃಷ್ಟಿಯಿಂದ ಈ ಸಾರಿ ಬಜೆಟ್‌ನಲ್ಲಿ, ನಮ್ಮ ಅಧಿಕಾರಿ-ಗಳು, ನಾವು ಪ್ರಯತ್ನ ಮಾಡಿ ಸುಮಾರು 80 ಕೋಟಿ ರೂಪಾಯಿಗಳ ಹಣವನ್ನು ಇಟ್ಟುಕೊಂಡಿ-ದ್ದೇವೆ. 145 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂಥ ವ್ಯವಸ್ಥೆಯನ್ನು ಈ ವರ್ಷದಲ್ಲಿ, 1996-97ಕ್ಕೆ ನಾವು ಮಾಡಿಕೊಂಡು, ನಾನು ತಿಳಿಸಿದ ರೀತಿಯಲ್ಲಿ, ಆ ಕೆಲಸಗಳು ಮುಗಿಯ-ಬೇಕೆಂದು ಮಾಡಿಕೊಂಡಿರತಕ್ಕಂಥಾದ್ದು. ಇದರ ಜೊತೆಗೆ, ವಾಟರ್ ಟ್ಯಾಕ್ಸ್, ರಿಸೋರ್ಸ್ಸ್ ಜಾಸ್ತಿ ಮಾಡಿಕೊಂಡು, ನೀರಿನ ಹಣವನ್ನು ಹಾಕಿ ಎಂದು ನಮಗೆ ಹೇಳಿದ್ದಾರೆ. ಅಂದರೆ, ನೀರಿನ ದರವನ್ನು ಹಾಕಿ, ಹಾಗೆಯೇ ಉಚಿತವಾಗಿ ಕೊಡುವುದು ಬೇಡವೆಂದು, ಸದನದ ಸಮಿತಿಯವರು ಶಿಫಾರಸ್ ಮಾಡಿದ್ದಾರೆ. ಇವತ್ತು ಡೈವರ್ಷನ್ ಆಫ್ ಫಂಡ್ಸ್ ಏನಿದೆ, ಒಂದೊಂದು ಯೋಜನೆಗಳ ಹಣವನ್ನು ಬೇರೆ ಬೇರೆ ಕಡೆ ತೆಗೆದುಕೊಂಡು ಹೋಗುತ್ತೀರಿ. ಆ ಹಣವನ್ನು ಅಲ್ಲಿಯೇ ಉಪಯೋಗಿಸಬೇಕು ಬೇರೆ ಕಡೆಗೆ ತೆಗೆದುಕೊಂಡು ಹೋಗಬೇಡಿ ಎಂದು ಡೈವರ್ಷನ್ ಆಫ್ ಫಂಡ್ಸ್ ಮಾಡಬೇಡಿ ಎಂದು ಹೇಳಿದ್ದಾರೆ. ಜೊತೆಗೆ, ಸ್ಕೀಮನ್ನು ಟೈಮ್‌ಬೌಂಡ್ ಪ್ರೋಗ್ರಾಂ ಇಟ್ಟುಕೊಂಡು ಮಾಡಬೇಕು. ಎಸ್ಕಲೇಷನ್ ಆಗುವುದಕ್ಕೆ ಅವಕಾಶ ಮಾಡಬಾರದು ಎಂದು ಹೇಳಿದ್ದಾರೆ. ಇದನ್ನೆಲ್ಲಾ ಗಮನ-ದಲ್ಲಿಟ್ಟುಕೊಂಡು, ಇವತ್ತೇನು ಸದನದ ಸಮಿತಿ ಸದಸ್ಯರು ಶಿಫಾರಸ್ ಮಾಡಿ ಕಳುಹಿಸಿದ್ದೀರಿ, ಅದನ್ನು ಆದಷ್ಟು ಬೇಗ ಮಾಡುತ್ತೇವೆ. ಅದರಲ್ಲಿ ಹೇಳುವ ಹಾಗೆ ಬಹಳ ಲೋಪದೋಷಗಳಿವೆ. ಅದನ್ನು ನೋಡಿದ್ದೇನೆ. ಕ್ವಾಲಿಟಿ ಆಫ್ ಮೆಟೀರಿಯಲ್ಸ್ ಯೂಸ್ ಮಾಡುವಂಥಾದ್ದು, ಹಾಗೆಯೇ ಲೀಕೇಜಸ್ ಇದೆಯೆಂದು ಮಾನ್ಯ ಹುಬ್ಬಳ್ಳಿ ಧಾರವಾಡದವರು ಹೇಳುವಂಥಾದ್ದು, ಪೈಪ್‌ಲೈನ್ ಸಿಸ್ಟಂನಲ್ಲಿ ವ್ಯತ್ಯಾಸವಿದೆಯೆಂದು ಹೇಳುವುದು. ಇವೆಲ್ಲಾ ಲೋಪದೋಷಗಳು ಇದೆ. ಇದನ್ನೆಲ್ಲಾ ಸರಿಪಡಿಸ-ಬೇಕಾಗಿದೆ. ಇದರಲ್ಲಿ ಉಪಯೋಗಿಸುವಂಥ ಮೆಟೀರಿಯಲ್ಸ್ ಏನಿದೆ, ಸಬ್‌ಸ್ಟಾಂಡರ್ಡ್

ಇರುವುದನ್ನು ತೆಗೆದುಕೊಳ್ಳುತ್ತಾರೆ. ಅದನ್ನು ಪರೀಕ್ಷೆ ಮಾಡಿ, ಐ.ಎಸ್.ಐ. ಸ್ಟಾಂಡರ್ಡ್ ಇರಬೇಕು, ಉತ್ತಮವಾದ ಮೆಟೀರಿಯಲ್ಸ್ ಉಪಯೋಗಿಸತಕ್ಕ ಕಾರ್ಯ ಮಾಡಬೇಕು. ಪಂಪ್ಸ್ ಇರುವಂತಾದ್ದು ಇರಬಹುದು, ಕಿರ್ಲೋಸ್ಕರ್ ಪಂಪ್ ಎಂದು ಕೊಟ್ಟಿದ್ದಾರೆ. ಬೇರೆ ಪಂಪ್ಸನ್ನು ಕಿರ್ಲೋಸ್ಕರ್ ಎಂದು ಸ್ಟಾಂಪಿಂಗ್ ಮಾಡಿ ಕೊಡತಕ್ಕ ವ್ಯವಸ್ಥೆಯೂ ಇಲ್ಲಿ ಇದೆ. ಈ ರೀತಿ ಬೇಕಾದಷ್ಟು ಆಗಿದೆ. ಮತ್ತು ಸಬ್‌ಸ್ಟಾಂಡರ್ಡ್ ಮೆಟೀರಿಯಲ್ಸ್ ಬೇಕಾದಷ್ಟು ಕೊಂಡುಕೊಂಡು ಇರತಕ್ಕಂಥಾದ್ದು ಇದೆ. ಇವು-ಗಳ ಬಗ್ಗೆ ಸಿ.ಓ.ಡಿ. ವಿಚಾರಣೆ ನಡೆಯುತ್ತಾ ಇದೆ. ಅನೇಕರ ಮೇಲೆ ಕ್ರಮ ಜರುಗಿಸಿದ್ದೇವೆ. ಇಂತಹ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕು, ಈ ರೀತಿಯ ಅನ್ಯಾಯ ಮಾಡಿದ್ದಾರೆ. ಗುಲ್ಬರ್ಗದಲ್ಲಿ ಆಗಿರತಕ್ಕಂತಾದ್ದು ಮಾನ್ಯ ಖರ್ಗೆಯವರಿಗೆ ಗೊತ್ತಿದೆ. ಅಲ್ಲಿ ವಾಟರ್ ವರ್ಕ್ಸ್‌ನಲ್ಲಿ ಏನೇನು ಅಕ್ರಮ-ಗಳಾಗಿವೆ, ಅದರ ಬಗ್ಗೆಯೂ ವಿಚಾರಣೆ ನಡೆಯುತ್ತಾ ಇದೆ. ಎಕ್ಸಿಕ್ಯುಟಿವ್ ಇಂಜಿನಿಯರ್ ಅವರ ಮೇಲೆ ಕ್ರಮ ತೆಗೆದುಕೊಂಡು, ಲೋಕಾಯುಕ್ತಕ್ಕೂ ಕಳುಹಿಸಿದ್ದೇವೆ. ಹೀಗೆ ನಾನಾ ರೀತಿಯಲ್ಲಿ ಈ ಇಲಾಖೆಯನ್ನು ಪುಲ್ ಮಾಡಿ ಮೇಲೆ ತರಬೇಕಾಗಿದೆ. ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕಳೆದ ಎರಡು ತಿಂಗಳಲ್ಲಿ, ನಾನು ಅಧಿಕಾರ ವಹಿಸಿಕೊಂಡ ಮೇಲೆ, ಸಾಕಷ್ಟು ಈ ಬಗ್ಗೆ ವಿಷಯಗಳನ್ನು ತಿಳಿದಿದ್ದೇನೆ. ಎಲ್ಲೆಲ್ಲಿ ಈ ರೀತಿ ತೊಂದರೆ ಇದೆ, ಅವುಗಳನ್ನು ಸರಿಪಡಿಸುವ ದೃಷ್ಟಿಯಲ್ಲಿ ಕಾರ್ಯಕ್ರಮ ಹಾಕಿದ್ದೇನೆ. ಈ ಬಗ್ಗೆ ಸಾಕಷ್ಟು ವಿಷಯಗಳನ್ನು ಮಾನ್ಯ ಸದಸ್ಯರಿಗೆ ತಿಳಿಸಿ-ದ್ದೇನೆ. ಮಾನ್ಯ ಲಕ್ಷ್ಮಯ್ಯನವರಿಗೆ ಹೇಳಬೇಕೆಂದರೆ ಚಿಕ್ಕಮಗಳೂರು ಯೋಜನೆಯನ್ನು ಈಗ ಸೇರಿ-ಸಿದ್ದೇವೆ. 19 ಯೋಜನೆಗಳಲ್ಲಿ, ತಮ್ಮದೂ ಇದೆ. 400 ಕೋಟಿ ರೂಪಾಯಿಗಳಲ್ಲಿ ಅದು ಸೇರಿದೆ. ಯಗಚಿ ಮೂಲದಿಂದ, ಬೇಲೂರು ಹತ್ತಿರ ಇರತಕ್ಕ ಯಗಚಿಗೆ ಬ್ಯಾರೇಜ್ ಕಟ್ಟಿ, ಅಲ್ಲಿ ನೀರು ಕೊಡುವಂಥ ಕಾರ್ಯವನ್ನು ಚಿಕ್ಕಮಗಳೂರಿಗೆ ಮಾಡಿಕೊಡುತ್ತೇವೆ. ಶಾಶ್ವತವಾಗಿ ಅವರ ಮಗನೇ ಅಲ್ಲಿಯ ಅಧ್ಯಕ್ಷರು. ಆದ್ದರಿಂದ, ಅವರಿಗೆ ಆಸಕ್ತಿ ಇದೆ. ಆದ್ದರಿಂದ, ತಾವು ಕಟ್ಟುವಂಥ ಹಣ ಏನಿದೆ, ಆ ಭಾಗವನ್ನು ತಾವು ಕಟ್ಟಿ, ನಾವು ಕಾರ್ಯವನ್ನು ಮಾಡುತ್ತೇವೆ. ಮಾಂಜರಾದಿಂದ ನೀರನ್ನು ಬೀದರ್‌ಗೆ ತರಬೇಕೆಂಬ ಆಸೆ ನಮ್ಮ ಶಾಸಕರಾದ ಹಷ್ಮಿಯವರಿಗೆ ಇದೆ. ಕಡೂರಿಗೆ ನದಿ ಮೂಲದಿಂದ ನೀರು ತರುವ ಕಾರ್ಯ ಮಾಡಬೇಕು. ನಮ್ಮ ಕೃಷ್ಣಮೂರ್ತಿಯವರು, ಬಹಳ ತೊಂದರೆ ಇದೆ, ತಾತ್ಕಾಲಿಕವಾಗಿ ಬೋರ್‌ವೆಲ್ಸ್ ಹಾಕಿ, ಕಿರು ನೀರು ಸರಬರಾಜು ಯೋಜನೆಯ-ನ್ನಾದರೂ ಕಾರ್ಯಗತ ಮಾಡಿ ಕೊಡಿ ಎಂದು ಹೇಳಿದ್ದಾರೆ. ಅದೂ ಮಾಡುತ್ತೇವೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ:- ಮಾನ್ಯ ಅಧ್ಯಕ್ಷರೇ, ಚಿಕ್ಕೋಡಿಯಲ್ಲಿ ಮೊನ್ನೆ 5ನೇ ತಾರೀಖು ಬಸವನ ಸರ್ಕಲ್‌ನಲ್ಲಿ ಮಹಿಳೆಯರೆಲ್ಲರೂ ಧರಣಿ ಮಾಡಿದರು. ಸುಮಾರು 3 ಗಂಟೆಗಳ ಕಾಲ ರಸ್ತೆ ರೋಕೋ ಆಂದೋಲನ ಮಾಡಿದರು. ಸುಮಾರು 15 ದಿವಸಗಳಿಂದ ಚಿಕ್ಕೋಡಿ ಪಟ್ಟಣಕ್ಕೆ ನೀರು ಬರುತ್ತಿಲ್ಲ. ತಾವು ದಯವಿಟ್ಟು ಈ ತಿಂಗಳ ಒಳಗಾಗಿ ಖುದ್ದಾಗಿ ಭೇಟಿ ಕೊಟ್ಟು ಸ್ಥಳ ಪರಿಶೀಲನೆ ಮಾಡಬೇಕು. ಅಲ್ಲಿ ಪೈಪ್ ಲೈನ್ ಸಹ ಸರಿಯಾಗಿ ಹಾಕಿಲ್ಲ. ಮತ್ತು ಹೊಸ ಸಬ್‌ಮರ್ಸಿಬಲ್ ಮೋಟಾರ್ ಕೊಟ್ಟಿದ್ದರೂ ಅದೂ ಸುಟ್ಟು ಹೋಗಿದೆ. ತಾವು ದಯವಿಟ್ಟು ಚಿಕ್ಕೋಡಿಗೆ ಯಾವಾಗ ಭೇಟಿ ಕೊಡುತ್ತೀರಿ? ಮತ್ತು ಆ ಸ್ಕೀಮ್‌ನ್ನು ಯಾವಾಗ ಮಾಡಿಕೊಡುತ್ತೀರಿ?

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಆಮೇಲೆ ಒಟ್ಟಿಗೆ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಹೇಳುತ್ತೇನೆ.

ಶ್ರೀ ಕಲ್ಲಪ್ಪ ನಾಗಪ್ಪ ಗದ್ದಿ:- ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಮಾನ್ಯ ಮಂತ್ರಿಗಳು ನಗರಗಳಿಗೆ ಇಷ್ಟು ಹಣ ಇಟ್ಟಿದ್ದೇವೆ, ಪಟ್ಟಣಗಳಿಗೆ ಇಷ್ಟು ಹಣ ಇಟ್ಟದ್ದೇವೆಂದು ಹೇಳಿದರು. ಆದರೆ ನವಲಗುಂದಕ್ಕೆ ಇಷ್ಟು ಹಣ ಇಟ್ಟಿದ್ದೇವೆಂದು ಒಂದು ಶಬ್ದ ಕೂಡ ಹೇಳಲಿಲ್ಲ. ನವಲಗುಂದದ ಯೋಜನೆ ಈಗಾಗಲೇ ಮಂಜೂರಾತಿ ಪಡೆದಂತಹ ಯೋಜನೆ. ಈ ಯೋಜನೆಗೆ 1993ರಲ್ಲಿ ಮಂಜೂರಾತಿ ಆಗಿ ನವಲಗುಂದ ಮತ್ತು ಅಣ್ಣಿಗೇರಿಯಲ್ಲಿ ಸುಮಾರು 20-25 ಸಾವಿರ ಜನ ಇರುವಂತಹ ಒಂದು ಪಟ್ಟಣವಾಗಿದ್ದು ಅಲ್ಲಿ ಕೇವಲ ನಾಲ್ಕು ಬೋರ್‌ವೆಲ್‌ಗಳು ಮಾತ್ರ ಇವೆ. ಕುಡಿಯುವ ನೀರಿಗೆ ಬಹಳ ತೊಂದರೆ ಆಗಿದೆ. ಆದ್ದರಿಂದ ಆ ಬಗ್ಗೆ ಮಾನ್ಯ ಮಂತ್ರಿಗಳು ದಯಮಾಡಿ ಉತ್ತರ ಕೊಡಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಗದ್ದಿಯವರು ಎತ್ತಿರುವ ಪ್ರಶ್ನೆ ನವಲಗುಂದದಿಂದ ಅಣ್ಣಿಗೇರಿ ಮತ್ತು ಇನ್ನೊಂದು ಗ್ರಾಮ. ಅದಕ್ಕೆ ನೀರು ತರುವಂತಹ ಒಂದು ರಿಸರ್ವಾಯರ್ ಹಾಕಬೇಕು. ಆ ರಿಸರ್ವಾಯರ್‌ನಲ್ಲಿ ನೀರನ್ನು ಶೇಖರಿಸಿ ಆ ಮೂಲಕ ಅಣ್ಣಿಗೇರಿಗೆ ನೀರು ಕೊಡುವುದು. ಆ ಕೆರೆಗೆ ನೀವು ಜಮೀನು ಕೊಡಿಸುತ್ತೇವೆಂದು ಹೇಳಿದ್ದಿರಿ. ಉಚಿತವಾಗಿ 100 ಎಕರೆ ಜಮೀನು ಕೊಡಿಸುತ್ತೇವೆಂದು ತಿಳಿಸಿದ್ದರು. ಇತ್ತೀಚೆಗೆ ಅವರು ಹೇಳಿದರು ಒಂದು ಎಕರೆ ಜಮೀನು 40-50 ಸಾವಿರ ರೂಪಾಯಿ ಬೆಲೆ ಆಗಿದೆ. ಹಿಂದೆ ನಾವು ಒಪ್ಪಿಕೊಂಡಿದ್ದೆವು. ಆದರೆ ಈಗ ಜಮೀನು ಕೊಡುವುದಕ್ಕೆ ಆಗುವುದಿಲ್ಲ ಎಂದು 40-50 ಲಕ್ಷ ರೂಪಾಯಿ ಕೊಡುತ್ತೇವೆಂದು ನಾವು ಏನು ನಿಮಗೆ ಅಂಡರ್‌ಟೇಕಿಂಗ್ ಕೊಟ್ಟಿದ್ದೆವು. ಆ ಹಣ ಸಹ ನಾವು ಕೊಡುವುದಕ್ಕೆ ಆಗುವುದಿಲ್ಲ; ಸಂಪೂರ್ಣ ಹಣ ಸರ್ಕಾರವೇ ಭರಿಸಬೇಕು ಎಂದು ಹೇಳಿರುವುದರಿಂದ ಇದರ ಜೊತೆಗೆ 20-30 ಸಾವಿರ ಜನಸಂಖ್ಯೆಯ ಒಳಗೆ ಆ ಪಟ್ಟಣ ಬರುವುದರಿಂದ ನೂರಕ್ಕೆ ನೂರರಷ್ಟು ನಾವೇ ಭರಿಸುತ್ತೇವೆ ಸ್ವಲ್ಪ ಇರಿ, ಜನಸಂಖ್ಯೆ ಸುಮಾರು 30 ಸಾವಿರಕ್ಕೆ ಒಳಗೆ ಇದ್ದರೆ ಯೋಜನೆಯ ಹಣವನ್ನು ಸಂಪೂರ್ಣವಾಗಿ ನಾವೇ ಭರಿಸಬೇಕಾಗುತ್ತದೆ.

ಶ್ರೀ ಕಲ್ಲಪ್ಪ ನಾಗಪ್ಪ ಗದ್ದಿ:- ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ 4 ಬೋರ್‌ವೆಲ್‌ಗಳು ಇವೆ. 25 ಸಾವಿರ ಜನಸಂಖ್ಯೆ ಇರತಕ್ಕಂಥ ಅಣ್ಣಿಗೇರಿ ನಗರಕ್ಕೆ 3-4 ದಿವಸಕ್ಕೆ ಒಂದು ಸಾರಿ ನೀರು ಕೊಡುತ್ತಾರೆ. ನವಲಗುಂದ ಅಣ್ಣಿಗೇರಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆ 1993ರಲ್ಲಿಯೇ ಮಂಜೂರಾಗಿದೆ. ಆ ಯೋಜನೆಯನ್ನು ತೀವ್ರಗತಿಯಲ್ಲಿ ಪ್ರಾರಂಭ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆ ವಿಷಯವನ್ನು ಮಾನ್ಯ ವೈಜ್ಯನಾಥ ಪಾಟೀಲರು ಮಂತ್ರಿಗಳಾಗಿದ್ದಾಗಲೂ ಸಹ ವಿನಂತಿ ಮಾಡಿದ್ದೆವು. ಆದರೆ ಇದುವರೆಗೂ ಯಾವುದೇ ಎಸ್ಟಿಮೇಟ್ ಆಗಿಲ್ಲ, ಪ್ಲಾನ್ ಆಗಿಲ್ಲ. ಆದ್ದರಿಂದ ಕೂಡಲೇ ಆ ಯೋಜನೆಯನ್ನು ಪ್ರಾರಂಭ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಉತ್ತರ ಹೇಳಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಗದ್ದಿಯವರು ಈ ಬಗ್ಗೆ ಮಾತನಾಡಿದ್ದಾರೆ. ನವಲಗುಂದ ಮತ್ತು ಅಣ್ಣಿಗೇರೆ ಯೋಜನೆಗೆ ನೀರು ಶೇಖರಣೆ ಮಾಡಲು ಒಂದು ರಿಸರ್ವಾಯರ್ ಬೇಕು. ಅದಕ್ಕೆ ಜಮೀನು ಸ್ವಾಧೀನ ಮಾಡಿ ನಾವು ಜಮೀನು ಕೊಡುತ್ತೇವೆ 50 ಲಕ್ಷ ಹಣ ತುಂಬಿ ಕೊಡುತ್ತೇವೆ ಎಂದು ಅವರು ಆಗ ಒಂದು ಅಂಡರ್‌ಟೇಕಿಂಗ್ಸ್ ಕೊಟ್ಟರು. ಅದನ್ನು ಅವರು ಇದುವರೆಗೂ ಕಾರ್ಯಗತ ಮಾಡಿಲ್ಲ. ನಾನು ಅವರನ್ನು ಕರೆದು ಮಾತನಾಡಿದಾಗ ಅಲ್ಲಿ ಜಮೀನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಸುಮಾರು 50 ಸಾವಿರ ರೂಪಾಯಿಗಳವರೆಗೂ ಬೆಲೆ ಇದೆ. ನಾವು 100 ಎಕರೆ ಜಮೀನು ಕೊಡಬೇಕಾದರೆ 50 ಲಕ್ಷ ರೂಪಾಯಿಗಳು ಆಗುತ್ತದೆ ಆದ್ದರಿಂದ ನಮ್ಮ ಹತ್ತಿರ ಅಷ್ಟು ಹಣ ಇಲ್ಲ ಎಂದು ಹೇಳಿದರು. ಆಮೇಲೆ ಮಾನ್ಯ ಎಸ್.ಎಸ್. ಪಾಟೀಲರು ಅವರು ಏನೋ ಆಗ ಒಪ್ಪಿಕೊಂಡಿದ್ದಾರೆ, ಆರ್ಥಿಕವಾಗಿ ಆ ಪುರಸಭೆಗೆ ಕೊಡುವುದಕ್ಕೆ ಸಾಧ್ಯವಿಲ್ಲ ಅವರಿಗೆ ಆ ಶಕ್ತಿ ಇಲ್ಲ, ತಾವು ಸರ್ಕಾರದಿಂದ ಸಂಪೂರ್ಣವಾಗಿ ಹಣ ತುಂಬಿಸಿಕೊಡಿ ಎಂದು ಹೇಳಿದ್ದಾರೆ. ಇವತ್ತು ನಾವು ತೆಗೆದುಕೊಂಡಿರತಕ್ಕಂಥ ಆರ್ಥಿಕ ಹೊಸ ಮಾದರಿಯಲ್ಲಿ ಆ ನಗರ 20-30 ಸಾವಿರ ಜನಸಂಖ್ಯೆಯ ಒಳಗೆ ಬರುವುದಾದರೆ ಇಲ್ಲಿ ನಾನು ಒಂದು ವಿಶೇಷವಾದ ಮಾತನ್ನು ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರ ಒಂದು ಹೊಸ ನೀತಿಯನ್ನು ಮಾಡುತ್ತಿದೆ 9ನೇ ಪಂಚವಾರ್ಷಿಕ ಯೋಜನೆಯಲ್ಲಿ, ಈ ಪೈಪ್ಡ್ ವಾಟರ್ ಸಪ್ಲೈಗೆ ಸುಮಾರು 50 ಭಾಗ ಕೇಂದ್ರ ಸಹಾಯಧನ ನಮಗೆ ಇನ್ನು ಮುಂದೆ ಸಿಗುತ್ತದೆ. ಇನ್ನು 50 ಭಾಗ ರಾಜ್ಯ ಸರ್ಕಾರ ಕೊಡುತ್ತದೆ. ಆ ದೃಷ್ಟಿಯಲ್ಲಿ ಆ ಯೋಜನೆಗಳೆಲ್ಲಾ ಕಾರ್ಯಗತವಾಗುತ್ತವೆ. ನೀವೇ ಅದನ್ನು ಒಪ್ಪಿಕೊಂಡಿರತಕ್ಕಂಥಾದ್ದು ಅದು ನಿಮ್ಮ ಕೈಯಲ್ಲಿ ಸಾಧ್ಯವಿಲ್ಲ. ತುರ್ತಾಗಿ ಬೋರ್‌ವೆಲ್ಸ್ ಹಾಕಿ ಮಾಡಿಕೊಡುವಂತಹ ಕಾರ್ಯ ಮಾಡುತ್ತೇವೆ.

ಶ್ರೀ ಕಲ್ಲಪ್ಪ ನಾಗಪ್ಪ ಗದ್ದಿ:- ಮಾನ್ಯ ಅಧ್ಯಕ್ಷರೇ, 100 ಎಕರೆ ಜಮೀನು ಖರೀದಿ ಮಾಡುವಂತಹ ಸಾಮರ್ಥ್ಯ ಅವರಿಗೆ ಇಲ್ಲ. ತನ್ನ ನೌಕರರಿಗೆ ಸಂಬಳ ಕೊಡುವಂಥ ಸಾಮರ್ಥ್ಯ ಇಲ್ಲದ ಮುನಿಸಿಪಾಲಿಟಿಗಳು ಅವು.

ಶ್ರೀ ಬಿ.ಎನ್. ನಾಗೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಹೇಳಿದ್ದುದು ನಿಮಗೆ ಅರ್ಥವಾಗಲಿಲ್ಲ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ವಿಷಯದಲ್ಲಿ ನಾನು ಈಗಾಗಲೇ ಸಾಕಷ್ಟು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಸದಸ್ಯರು ಕ್ಲಾರಿಫಿಕೇಶನ್ ಕೇಳುವಾಗ ನಾನು ಅದಕ್ಕೆ ಸಂಬಂಧಪಟ್ಟ ಉತ್ತರವನ್ನು ಕೊಡುತ್ತೇನೆ. ಯೋಜನಾ ಇಲಾಖೆ ಸಹ ನನಗೆ ಬರುತ್ತದೆ. ಈ ನಗರಗಳು ಯೋಜನಾ ಬದ್ಧವಾಗಿ ಬೆಳೆಯಬೇಕೆನ್ನುವ ಉದ್ದೇಶದಿಂದ 1903ರಲ್ಲಿ ಅಂದಿನ ಮಹಾರಾಜರ ಕಾಲದಲ್ಲಿ ಯೋಜನಾ ಬದ್ಧವಾದ ಬೆಳವಣಿಗೆ ಆಗುವ ದೃಷ್ಟಿಯಲ್ಲಿ ಇಡೀ ರಾಷ್ಟ್ರದಲ್ಲಿ ವಿಶೇಷವಾಗಿ ಮೈಸೂರನ್ನು ಆಯ್ಕೆ ಮಾಡಿಕೊಂಡಂಥಾದ್ದು. ಮೈಸೂರು ನಗರವನ್ನು ಬೆಳವಣಿಗೆ ಮಾಡಬೇಕೆನ್ನುವ ದೃಷ್ಟಿಯಲ್ಲಿ ಈ ಯೋಜನೆ 1903ರಲ್ಲಿ ಆದಂಥಾದ್ದು. ಆಗ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಎಂದು ಇತ್ತು. ಆದಾದ ನಂತರ ಬೆಂಗಳೂರಿನಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್

ಬೋರ್ಡ್, ನಗರ ಯೋಜನಾ ಮಂಡಲಿಗಳು ಪ್ರಾರಂಭವಾದಂಥಾದ್ದು, ಇದಾದ ನಂತರ 1956 ರಲ್ಲಿ ಬಾಂಬೆ ಕರ್ನಾಟಕ ಹೈದ್ರಾಬಾದ್ ಕರ್ನಾಟಕ ಎಲ್ಲಾ ಒಟ್ಟಿಗೆ ಸೇರಿ ಆದ ನಂತರ ಒಟ್ಟಾರೆ ನಗರ ಪ್ರದೇಶಗಳನ್ನು 1959ನೇ ಇಸವಿಯಲ್ಲಿ ಕರ್ನಾಟಕ ನಗರ ಯೋಜನಾ ಇಲಾಖೆಯನ್ನು ಸ್ಥಾಪನೆ ಮಾಡಿ 1965ನೇ ಇಸವಿಯಲ್ಲಿ ಒಂದು ಯೋಜನಾ ಕಾಯ್ದೆಯನ್ನು ರಚನೆ ಮಾಡಿ, ಇದನ್ನು ಜಾರಿಗೆ ಕೊಟ್ಟಿರತಕ್ಕಂಥ ಒಂದು ವಿಷಯ. ಈ ನಗರಗಳು ಬೆಳೆಯುವ ದೃಷ್ಟಿಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಹೊರತು ಪಡಿಸಿ ಸುಮಾರು 20 ಜಿಲ್ಲಾ ಕೇಂದ್ರಗಳು ಏನು ಇವೆ ಅಲ್ಲಿ ಅಭಿವೃದ್ಧಿ ಪ್ರಾಧಿಕಾರಗಳು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟೀಸ್, ಎಂದು ಮಾಡಿ ಬಿ.ಡಿ.ಎ. ಮಾದರಿ-ಯಲ್ಲಿ, ರೈತರಿಂದ ಅಥವಾ ಬೇರೆಯವರಿಂದ ಸ್ವಾಧೀನ ಪಡಿಸಿಕೊಂಡಂಥ ಜಮೀನನ್ನು ಒಂದು ಯೋಜನಾ ಬದ್ಧವಾಗಿ ಬೆಳೆಯುವಂತಹ ವ್ಯವಸ್ಥೆ ಮಾಡಿದೆ. ಅಲ್ಲಿ ಶಾಲೆಗಳಿಗೆ ಉಪಯೋಗ ಇರ-ತಕ್ಕಂಥಾದ್ದು ಸಾರ್ವಜನಿಕರಿಗೆ ಉಪಯೋಗ ಇರುವಂಥಾದ್ದು, ರಸ್ತೆ ಸೌಕರ್ಯ, ನಮ್ಮ ಮೈಸೂರು ಮೂಢಾದಲ್ಲಿ ಆದಂತೆ ನಮ್ಮ ಬೆಂಗಳೂರು ಮೂಢದಲ್ಲಿ ಅದಂತೆ, ಅಥವಾ ಬೇರೆ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟೀಸ್‌ಗಳಲ್ಲಿ ಯೋಗ್ಯವಾದ ರೀತಿಯಲ್ಲಿ, ಬಡಾವಣೆಗಳು ಬೆಳೆಯಬೇಕು ಎಂದು ಹೇಳಿ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟೀಸ್ ಎಂದು ಮಾಡಿರತಕ್ಕಂಥಾದ್ದು ಆಗಿದೆ. ಒಂದು ಲಕ್ಷ ಜನಸಂಖ್ಯೆ ಮೇಲೆ ಇರತಕ್ಕಂಥ ಪ್ರದೇಶಗಳನ್ನು ಕಾರ್ಪೊರೇಷನ್ ಅಥವಾ ನಗರಸಭೆ ವ್ಯಾಪ್ತಿಯಲ್ಲಿದ್ದವು. ಆದಾದ ನಂತರ ಒಂದು ಯೋಜನೆಯನ್ನು ರೂಪಿಸಿ ಓ.ಡಿ.ಪಿ. ಎಂದು ಮಾಡಿ ಒಂಧು ನಕ್ಷೆಯನ್ನು ಮಾಡಿ, ಮಾಸ್ಟರ್ ಪ್ಲಾನ್ ಮಾಡುವಂಥಾದ್ದು, ಆ ಪಟ್ಟಣಕ್ಕೆ, ಅದರ ಒಳಗೆ ಸಿ.ಡಿ.ಪಿ. ಎಂದು ಹೇಳಿ ಎಲ್ಲೆಲ್ಲಿ ಯಾವ್ಯಾವುದು ಇರಬೇಕು ವಸತಿ ಯಾವ ರೀತಿ ಇರಬೇಕು, ಅಥವಾ ಕಮರ್ಷಿಯಲ್ ಜೋನ್ ಯಾವ ರೀತಿ ಇರಬೇಕು ಶಾಲೆಗಳಿಗೆ ಹೇಗೆ ಇರಬೇಕು, ಕೈಗಾರಿಕಾ ಪ್ರದೇಶಗಳು ಹೇಗೆ ಇರಬೇಕು, ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಪ್ರದೇಶಗಳು ಹೇಗೆ ಇರಬೇಕು ಎಂಬುದನ್ನು ಗುರುತಿಸಿ ಆ ಒಂದು ಮಾಸ್ಟರ್ ಪ್ಲಾನ್ ಒಳಗೆ ಬರುವಂತಹ ಯೋಜನೆಗಳನ್ನು ಇದ-ರಲ್ಲಿ ತಂದು ಯೋಜನಾ ಬದ್ಧವಾಗಿ ಬೆಳೆಯುವಂಥ ವ್ಯವಸ್ಥೆ ಇದರಲ್ಲಿ ಆಗಿರತಕ್ಕಂಥಾದ್ದು, ಮಾನ್ಯ ಯಡಿಯೂರಪ್ಪನವರಿಗೆ ಗೊತ್ತಿದೆ. ಮಾನ್ಯ ವಾಟಾಳ್ ನಾಗರಾಜ್ ಅವರಿಗೂ ಗೊತ್ತಿದೆ. ಬೆಂಗಳೂರು ಯದ್ವಾತದ್ವಾ ಬೆಳೆಯುತ್ತಿದೆ. ಖಾಸಗಿಯವರು ಬಂದು ಬಹಳ ಲೇ ಔಟ್ಸ್ ಮಾಡುತ್ತಿದ್ದಾರೆ.

12.10 ಪಿ.ಎಂ.

ನನ್ನ ಅನುಭವದಲ್ಲಿ ಸಿ.ಡಿ.ಪಿ ಮತ್ತು ಓ.ಡಿ.ಪಿ ಕಾನ್‌ಸೆಪ್ಟ್ ಪ್ರಕಾರ ಮಾಸ್ಟರ್ ಪ್ಲಾನ್ ಹಾಕಿಕೊಂಡು ನಗರವನ್ನು ಯೋಜನಾ ಬದ್ಧವಾಗಿ ಬೆಳೆಸದೆ ಖಾಸಗಿಯವರಿಗೆ ಜಮೀನುಗಳನ್ನು ಕೊಟ್ಟು ಬೇಕಾ-ಬಿಟ್ಟಿಯಾಗಿ ನಗರವನ್ನು ಬೆಳೆಯುವುದಕ್ಕೆ ಬಿಟ್ಟರೆ ಅದು ಯೋಜನಾ ಬದ್ಧವಾದ ಬೆಳವಣಿಗೆಯಾಗು-ವುದಿಲ್ಲ. ಈ ರೀತಿ ಯೋಜನಾ ಬದ್ಧವಲ್ಲದ ಲೇ ಔಟ್‌ಗಳಿಗೆ ನೀರಿನ ಸೌಕರ್ಯ, ವಿದ್ಯುಚ್ಛಕ್ತಿ ಸೌಕರ್ಯ, ಸಾರಿಗೆ ಸೌಕರ್ಯಗಳನ್ನು ಕೊಡುವುದಕ್ಕಾಗುವುದಿಲ್ಲ. ಶಿವಮೊಗ್ಗದಲ್ಲಿ ಕಲ್ಲಹಳ್ಳಿ ಲೇ-ಔಟನ್ನು ಯೋಜನಾಬದ್ಧವಾಗಿ ಮಾಡಲಾಗಿದೆ. ಆ ಅಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರದಿಂದ ಹಣವನ್ನು

ಕೊಟ್ಟಿಲ್ಲ. ನಿವೇಶನಗಳು ಬೇಕೆಂದು ಸಾರ್ವಜನಿಕರು ಕಟ್ಟಿರುವ ಹಣದಲ್ಲೇ ಯೋಜನಾ ಬದ್ಧವಾಗಿ ಈ ಲೇ ಔಟ್ ಮಾಡಲಾಗಿದೆ. ಈ ರೀತಿ ಉತ್ತಮವಾದ ಲೇ ಔಟ್ ಮಾಡುವಂಥ ಅನೇಕ ಅಭಿವೃದ್ಧಿ ಮಂಡಳಿಗಳು ನಮ್ಮ ರಾಜ್ಯದಲ್ಲಿ ಇವೆ. ನಮ್ಮ ರಾಜ್ಯದಲ್ಲಿ ಒಂದು ಲಕ್ಷಕ್ಕೂ ಮೇಲ್ಪಟ್ಟ ಜನಸಂಖ್ಯೆ ಇರುವ 21 ಪಟ್ಟಣಗಳಿವೆ, 50 ಸಾವಿರದಿಂದ 1 ಲಕ್ಷ ಜನಸಂಖ್ಯೆ ಇರುವ ಪಟ್ಟಣಗಳು 17 ಇವೆ, ಈ 38 ಪಟ್ಟಣಗಳಲ್ಲಿ ಟೌನ್ ಪ್ಲಾನಿಂಗ್ ಅಥಾರಿಟಿಯನ್ನು ಮಾಡಿರುವ ಹಾಗೆ 30 ಸಾವಿರದಿಂದ 50 ಸಾವಿರ ಜನಸಂಖ್ಯೆ ಇರುವ ಪಟ್ಟಣಗಳಲ್ಲೂ ಟೌನ್ ಪ್ಲಾನಿಂಗ್ ಅಥಾರಿಟಿಯನ್ನು ತೆರೆದಾಗ ಯೋಜನಾ ಬದ್ಧವಾಗಿ ಪಟ್ಟಣಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಪುರಸಭೆಗಳವರೂ ಪಟ್ಟಣ ಗಳು ಯೋಜನಾ ಬದ್ಧವಾಗಿ ಬೆಳೆಯುವುದಕ್ಕಾಗಿ ಪ್ಲಾನ್ ಅಪ್ರೂವ್ ಮಾಡತಕ್ಕಂಥ ಅಧಿಕಾರವನ್ನು ಹೊಂದಿದ್ದಾರೆ. ಇನ್ನೊಂದು ಮುಖ್ಯವಾದ ವಿಷಯವನ್ನು ಸದನದ ಗಮನಕ್ಕೆ ತರುವುದಾದರೆ, ಲ್ಯಾಂಡ್ ಕನ್‌ವರ್ಷನ್ ವಿಷಯದಲ್ಲಿ ನಮ್ಮ ಇಲಾಖೆ ಮೇಲೆ ಬಹಳ ಒತ್ತಡ ಬರುತ್ತಿವೆ. ಲ್ಯಾಂಡ್ ಪರಿವರ್ತನೆ ವಿಷಯವನ್ನು ನೋಡುವುದೇ ಹೆಚ್ಚಿನ ಕೆಲಸವಾಗಿಬಿಟ್ಟಿದೆ. ಈ ಜಮೀನನ್ನು ರೆಸಿಡೆನ್-ಷಿಯಲ್ ಪರ್ಪಸ್‌ಗೆ ಕನ್‌ವರ್ಷನ್ ಮಾಡಿಕೊಡಿ, ಇದನ್ನು ಇಂಡಸ್ಟ್ರೀಯಲ್ ಏರಿಯಾವನ್ನಾಗಿ ಕನ್‌ವರ್ಷನ್ ಮಾಡಿಕೊಡಿ, ಇದಿಷ್ಟು ಜಾಗ ಮಾತ್ರ ನೋಟಿಫೈ ಮಾಡಬೇಡಿ, ಉದ್ಯಾನವನ ಜಾಗವನ್ನು ಬೇರೆ ಕಡೆ ಹಾಕಿ ಅಲ್ಲಿ ವಸತಿಗಾಗಿ ಕನ್‌ವರ್ಷನ್ ಮಾಡಿ, ಹಸಿರು ವಲಯದಲ್ಲಿರುವ ಜಾಗವನ್ನು ಕನ್‌ವರ್ಷನ್ ಮಾಡಿಕೊಡಿ ಎಂದು ನಮಗೆ ಬಹಳ ಒತ್ತಡ ಬರುತ್ತದೆ. ಇದೇ ರೀತಿಯ ಒತ್ತಡ ಮೈಸೂರಿನಲ್ಲಿ ಬರುವುದಕ್ಕೂ ಪ್ರಾರಂಭವಾಗಿದೆ. ಇದಕ್ಕೆಲ್ಲಾ ಕಾರಣವೇನೆಂದರೆ, ಸರ್ಕಾರದ ಪ್ರಾಧಿಕಾರದವರು ಲೇ ಔಟ್‌ಗಳನ್ನು ಮಾಡಿಕೊಳ್ಳುವುದಕ್ಕೆ ಖಾಸಗಿಯವರ ಜಮೀನುಗಳನ್ನು ಅಕ್ವೈರ್ ಮಾಡಿಕೊಳ್ಳುವಂಥ ಸಂದರ್ಭದಲ್ಲಿ ಸರ್ಕಾರವು ಹೆಚ್ಚಿನ ಹಣವನ್ನು ಕೊಡುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಇಂಥಾ ಸಂದರ್ಭಗಳಲ್ಲಿ ಭೂ ಮಾಲಿಕರು ಕೋರ್ಟ್‌ಗಳಿಗೆ ಹೋಗಿ ಸ್ಟೇ ಆರ್ಡರ್ ತೆಗೆದುಕೊಂಡು ಬಂದು ಕೆಲಸಗಳನ್ನು ಸ್ಥಗಿತ ಮಾಡುತ್ತಾರೆ. ಆಗ ಖಾಸಗಿಯವರು ಹೆಚ್ಚಿನ ಹಣವನ್ನು ಕೊಡುತ್ತೇವೆಂದು ಭೂ ಮಾಲಿಕರುಗಳಿಗೆ ಹೇಳಿ ಜಮೀನನ್ನು ಪಡೆದು ಲೇ ಔಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಿವೇಶನ ಪಡೆಯಲು ಬಯಸುವ ವ್ಯಕ್ತಿಗಳು ಹೇಗಾದರೂ ಒಂದು ಸೈಟ್ ಸಿಕ್ಕಿದರೆ ಸಾಕೆಂದು ಖಾಸಗಿ ಲೇ ಔಟ್ ಮಾಡುವುದರಿಂದ ಸೈಟು ಪಡೆಯಲು ಹಣ ಕಟ್ಟುತ್ತಾರೆ. ಈ ಹಿಂದೆ ಬೆಂಗಳೂರು ನಗರದಲ್ಲಿ ಸರ್ಕಾರದವರು ಅಕ್ವಿಸಿಷನ್ ಮಾಡಿಕೊಂಡ ಜಮೀನಿಗೆ ಒಂದು ಎಕರೆಗೆ 5 ಸಾವಿರ ರೂಪಾಯಿಗಳನ್ನು ಕೊಟ್ಟಿರಬಹುದು. ಅದೇ ಜಾಗದಲ್ಲಿ, ಅಂದರೆ ಕೋರಮಂಗಲ ಮತ್ತು ಬಿನ್ನಮಂಗಲ ಲೇ ಔಟ್‌ನಲ್ಲಿ ಒಂದು ಸೈಟಿಗೆ ಒಂದು ಕೋಟಿ ರೂಪಾಯಿ ಬೆಲೆ ಬಾಳುತ್ತದೆ. ಆ ಲೇ ಔಟ್‌ಗಳಲ್ಲಿ ನಮ್ಮ ಕಡೆ ಜನ ಒಬ್ಬರೂ ಇಲ್ಲ. ಎಲ್ಲಾ ಬೇರೆ ರಾಜ್ಯಗಳಿಂದ ಬಂದಂಥ ಜನರೇ ಇದ್ದಾರೆ. ಬೇರೆಯವರಿಗೆ ಅಂದರೆ ನಮ್ಮ ಬಿ.ಡಿ.ಎ.ನಲ್ಲಿ ಎಲ್ಲಾ ಕೆಲಸ ಆಗಿಬಿಡುತ್ತದೆ, ಬ್ಯಾಂಕ್ ಲೋನ್ ಸಿಗುತ್ತದೆ, ಪ್ಲಾನ್ ಅಪ್ರೂವ್ ಆಗುತ್ತದೆ, ಎಲ್ಲಾ ಕೆಲಸವನ್ನು ಮಾಡಿಕೊಡುತ್ತಾರೆ. ನಮ್ಮವರಿಗೆ ದೂರ ಇರಿ ಎಂದು ಹೇಳುತ್ತಾರೆ, ಇದು ಏಕೆ ಎಂದು ಎಲ್ಲರಿಗೂ

ಗೊತ್ತಿದೆ. ಒಟ್ಟಾರೆ ನಿವೇಶನ ಅಭಿವೃದ್ಧಿ ಪ್ರಾಧಿಕಾರಗಳು ಚೆನ್ನಾಗಿ ಕೆಲಸ ಮಾಡುತ್ತಿವೆ, ಶಾಸಕರುಗಳು ಕೂಡ ಅದರಲ್ಲಿ ಸದಸ್ಯರಾಗಿರುತ್ತಾರೆ. ಆಮೇಲೆ, ರಾಜ್ಯದ ಇತರೆ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಕುಡಿಯುವ ನೀರು ಸರಬರಾಜು ಮಾಡುತ್ತಿರುವ ಬೋರ್‌ವಲ್‌ಗಳ ಸಂಖ್ಯೆ ಮತ್ತು ಅವುಗಳಿಗೆ ಅಳವಡಿಸವಲಾಗಿರುವ ಪಂಪ್‌ಸೆಟ್ಟುಗಳ ಸಂಖ್ಯೆ ಬಗ್ಗೆ ಮಾನ್ಯ ಸದಸ್ಯರುಗಳು ಅಂಕಿ ಅಂಶಗಳನ್ನು ಕೇಳಿದ್ದಾರೆ. ಅದರಂತೆ ನಮ್ಮ ರಾಜ್ಯದಲ್ಲಿ ಒಟ್ಟು 15,153 ಬೋರ್‌ವೆಲ್‌ಗಳಿದ್ದು ಅದರಲ್ಲಿ 12,540 ಬೋರ್‌ವೆಲ್‌ಗಳಿಗೆ ಹ್ಯಾಂಡ್ ಪಂಪ್‌ಗಳನ್ನು ಅಳವಡಿಸಿ ಕುಡಿಯುವ ನೀರನ್ನು ಕೊಡಲಾಗುತ್ತಿದೆ, ಉಳಿದ 3,613 ಬೋರ್‌ವೆಲ್‌ಗಳಿಗೆ ಎಲೆಕ್ಟ್ರಿಕ್ ಪಂಪ್ ಸೆಟ್ಟುಗಳನ್ನು ಕೊರೆಸಿ ರಾಜ್ಯದ ಜನತೆಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಇನ್ನೂ ಹೆಚ್ಚಿಗೆ ಬೋರ್‌ವೆಲ್‌ಗಳನ್ನು ಹಾಕಿಸಿ ರಾಜ್ಯದ ಯಾವ ಹಳ್ಳಿಯಲ್ಲೂ ಕುಡಿಯುವ ನೀರಿನ ಸಮಸ್ಯೆ ಇರದ ಹಾಗೆ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಲಾಗುತ್ತಿದೆ. ಕುಡಿಯುವ ನೀರಿನ ಪೈಪುಗಳು ಮತ್ತು ಒಳಚರಂಡಿ ಪೈಪುಗಳು ಒಂದಕ್ಕೊಂದು ಸೇರಿಕೊಂಡು ನೀರು ಕಲುಷಿತವಾಗಿ ಇಂಥಾ ನೀರು ಕುಡಿಯುವ ಜನರಿಗೆ ಗ್ಯಾಸ್ಟ್ರೋಎಂಟ್ರೈಟೀಸ್ ಮತ್ತು ಮಲೇರಿಯಾ ರೋಗಗಳು ಬರುವುದಕ್ಕೆ ಕಾರಣವಾಗಿದೆಯೆಂದು ಸಿಂಧನೂರು ಕ್ಷೇತ್ರದ ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಗಮನಹರಿಸಿ ಕ್ರಮ ತೆಗೆದುಕೊಳ್ಳಲಾಗುತ್ತದೆ. ಇನ್ನು ಯು.ಜಿ.ಡಿ., ಸ್ಕೀಮ್ ಅಂಡರ್ ಗ್ರೌಂಡ್ ಡ್ರೈನೇಜ್ ಸಿಸ್ಟಮ್‌ನ್ನು ಎಲ್ಲಾ ಕಡೆ ಮಾಡಬೇಕೆಂದು ನಮ್ಮ ಆಸೆ ಇದೆ. ಆದರೆ, ನಮಗೆ ಸಿಗತಕ್ಕಂಥ ನೀರಿನ ಪ್ರಮಾಣಕ್ಕೆ ಹೋಲಿಸಿದರೆ ಎಲ್ಲಾ ಕಡೆ ಯೂ.ಜಿ.ಡಿ. ಸ್ಕೀಮನ್ನು ತರುವುದಕ್ಕೆ ಸಾಧ್ಯವಿಲ್ಲ. ಎಷ್ಟು ಅಗತ್ಯವೋ ಅಷ್ಟು ನೀರು ಡ್ರೈನೇಜ್‌ನಲ್ಲಿ ಹರಿದರೆ ಮಾತ್ರ ಅದು ಸಕ್ಸಸ್ ಆಗುತ್ತಿದೆ ಇಲ್ಲವೆಂದರೆ ಪಿಂಗಾಣಿ ಪೈಪುಗಳಲ್ಲಿ ಎಲ್ಲೆಂದರಲ್ಲಿ ಬ್ಲಾಕ್ ಆಗಿ ಮಾನ್ಯ ಸದಸ್ಯರಾದ ರಾಜಣ್ಣನವರು ಹೇಳಿದ ಹಾಗೆ ಕ್ಲೀನ್ ಸಿಟಿ ಆಗುವ ಬದಲು ಟಾಯ್ಲೆಟ್ ಸಿಟಿಯಾಗುತ್ತದೆ. ಮಂಗಳೂರಿನಲ್ಲಿ, ಉಡುಪಿಯಲ್ಲಿ, ಕಾರವಾರದಲ್ಲಿ, ತುಮಕೂರಿನಲ್ಲಿ ಯು.ಜಿ.ಡಿ. ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಈಗ ಹಾಸನದಲ್ಲಿ ಈ ಕಾರ್ಯ-ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಯು.ಜಿ.ಡಿ. ಕೆಲಸ ಮಾಡಲು ಪುರ ಸಭೆಗಳು ಮೂರನೇ ಒಂದು ಭಾಗದಷ್ಟು ಹಣವನ್ನು ಕಟ್ಟಬೇಕೆಂದು ಮಾಡಿರುವುದರಿಂದ ಪುರಸಭೆಗಳು ಅಷ್ಟು ಹಣವನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲವಾದ್ದರಿಂದ ಯು.ಜಿ.ಡಿ. ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ, ಇದರ ಬಗ್ಗೆ ಕೇಂದ್ರ ಸರ್ಕಾರದೊಡನೆ ಚರ್ಚೆ ಮಾಡಿ ಕಡಿಮೆ ಪ್ರಮಾಣದಲ್ಲಿ ಪುರಸಭೆಗಳು ಹಣ ಕೊಟ್ಟರೂ ಆ ಕೆಲಸವನ್ನು ಮಾಡಲು ಸಹಾಯಕವಾಗುವಂತೆ ಧನ ಸಹಾಯವನ್ನು ಬಿಡುಗಡೆ ಮಾಡಬೇಕೆಂದು ರಾಜ್ಯ ಸರ್ಕಾರ ಒತ್ತಾಯ ಮಾಡುತ್ತಿದೆ. ನನ್ನ ಇಲಾಖೆ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿರುವ ವಿಷಯಗಳ ಬಗ್ಗೆ ಬಹುತೇಕ ನಾನು ಉತ್ತರ ಕೊಟ್ಟಿದ್ದೇನೆ. ಕುಡಿಯುವ ನೀರಿನ ವಿಷಯದಲ್ಲಿ ಮಾನ್ಯ ಸದಸ್ಯರುಗಳ ಕ್ಷೇತ್ರದಲ್ಲಿ ಸಮಸ್ಯೆಗಳಿದ್ದರೆ ಅವುಗಳನ್ನು ನಾನು ಖುದ್ದಾಗಿ ವಿಚಾರಮಾಡಿ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿ ನನ್ನ ಬೇಡಿಕೆ ಸಂಖ್ಯೆ 31ಕ್ಕೆ ಎಲ್ಲಾ ಮಾನ್ಯ ಸದಸ್ಯರುಗಳು ಸಹಕಾರ ಮತ್ತು

ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಈ ಸಂದರ್ಭದಲ್ಲಿ ಕ್ಲಾರಿಫಿಕೇಷನ್ ಕೇಳಲು ಬಹಳ ಮಾನ್ಯ ಸದಸ್ಯರುಗಳು ಎದ್ದು ನಿಂತರು)

ಅಧ್ಯಕ್ಷರು:- ಈ ಬೇಡಿಕೆಗಳ ಮೇಲೆ ಮಾತನಾಡಿದಂಥ ಸದಸ್ಯರುಗಳಲ್ಲಿ ಅರ್ಧಕ್ಕಿಂಥ ಹೆಚ್ಚು ಜನ ಸ್ಪಷ್ಟೀಕರಣ ಕೇಳಲು ಕೈ ಎತ್ತಿದ್ದೀರಿ. ನನ್ನ ಸ್ವಭಾವದ ಪ್ರಕಾರ ಯಾವ ಮಾನ್ಯ ಸದಸ್ಯರಿಗೂ ಅವಕಾಶ ಕೊಡುವುದಿಲ್ಲವೆಂದು ನಿರಾಕರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವು ಯಾರೆಲ್ಲಾ ಸ್ಪಷ್ಟೀಕರಣ ಕೇಳಬೇಕೆಂದು ಇದ್ದೀರಿ ಅವರುಗಳಿಗೆಲ್ಲಾ ಒಂದು ಊಟದ ವ್ಯವಸ್ಥೆಯನ್ನು ಮಾಡಿ ನಿಮ್ಮ ಎಲ್ಲಾ ಪ್ರಶ್ನೆಗಳಿಗೆ ಸ್ವತಃ ಉತ್ತರ ಕೊಡಬೇಕೆಂದು ಮಾನ್ಯ ಮಂತ್ರಿಯವರಿಗೆ ಸೂಚನೆ ಕೊಡುತ್ತೇನೆ. ಈಗ ಹಾಜರು ಇರತಕ್ಕಂಥ ಸದಸ್ಯರುಗಳಲ್ಲಿ ಅರ್ಧಕ್ಕಿಂಥ ಹೆಚ್ಚು ಜನರು ಸ್ಪಷ್ಟೀಕರಣ ಕೇಳಲು ಕೈ ಎತ್ತಿರುವುದರಿಂದ ಎಲ್ಲರಿಗೂ ಅವಕಾಶ ಕೊಡಲು ಸಾಧ್ಯವಾಗುವುದಿಲ್ಲವಾದ್ದರಿಂದ, ನಾನು ಈ ದಿವಸ ನನ್ನ ಕೈಯನ್ನು ಎತ್ತಿ ಈ ಒಂದು ದಿವಸ ಮಾತ್ರ ಸ್ಪಷ್ಟೀಕರಣ ಕೇಳದಂತೆ ಸಹಕರಿಸಬೇಕೆಂದು ಕೇಳುತ್ತೇನೆ. ಯಾವ ಬೇಡಿಕೆ ಮೇಲೂ ಈ ಪ್ರಮಾಣದಲ್ಲಿ ಸದಸ್ಯರು ಸ್ಪಷ್ಟೀಕರಣ ಕೇಳಲು ಅಪೇಕ್ಷೆಪಟ್ಟಿದ್ದನ್ನು ನಾನು ನೋಡಲಿಲ್ಲ. ಮಂತ್ರಿಗಳು ಆ ಖಾತೆಯನ್ನು ವಹಿಸಿಕೊಂಡ ದಿನದಿಂದಲೂ ನೋಡುತ್ತಿದ್ದೇನೆ, ಬಹಳ ಜವಾಬ್ದಾರಿಯಿಂದ, ಜಾಗ್ರತೆಯಿಂದ ಉತ್ತರ ಕೊಡುತ್ತಿದ್ದಾರೆ. ಆದ್ದರಿಂದ, ಇವತ್ತು ಒಂದು ದಿನ ಸಹಕರಿಸಿ. ಈಗ ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ನಾನು ಅವಕಾಶ ಕೊಡುತ್ತೇನೆ. ಆದರೆ ಯಾರೂ ಒಂದು ಪ್ರಶ್ನೆಗಿಂತ ಹೆಚ್ಚು ಕೇಳುವ ಹಾಗಿಲ್ಲ. ಭಾಷಣ ಮಾಡಬಾರದು. ಮೊದಲು ಹಿಂದಿನ ಬೆಂಚ್‌ನಿಂದ ಪ್ರಾರಂಭ ಮಾಡಿಕೊಂಡು ಕೊನೆಯಲ್ಲಿ ಮೊದಲ ಬೆಂಚಿಗೆ ಬರುತ್ತೇನೆ. ಯಾರೆಲ್ಲಾ ಕೈ ಎತ್ತಿದ್ದೀರಿ ಎಲ್ಲರಿಗೂ ಒಂದೊಂದು ಅವಕಾಶ ಕೊಡುತ್ತೇನೆ. ನಾನು ಪಕ್ಷ ಪಂಗಡ ನೋಡದೆ ಎಲ್ಲರಿಗೂ ಅವಕಾಶ ಕೊಡುತ್ತೇನೆ. ದಯಮಾಡಿ ಬೇಗನೆ ಮುಗಿಸಿ. ಮಾನ್ಯ ಸಚಿವರು ಎಲ್ಲವನ್ನೂ ನೋಟ್ ಮಾಡಿಕೊಂಡು ಒಮ್ಮೆಗೆ ಉತ್ತರವನ್ನು ಕೊಡಿ.

ಶ್ರೀ ಬಿ. ನಂಜಾಮರಿ (ತಿಪಟೂರು):- ನಮ್ಮ ತಿಪಟೂರಿಗೆ ಹೇಮಾವತಿ ಜಲಾಶಯದಿಂದ ನೀರು ತಂದು ಕೊಡುತ್ತೇವೆಂದು ಹೇಳಿ 1992ರಲ್ಲಿ ಕೆಲಸವನ್ನು ಪ್ರಾರಂಭ ಮಾಡಿದರು. 1994 ರೊಳಗಾಗಿ ನೀರು ಒದಗಿಸಿಕೊಡುತ್ತೇವೆಂದು ಎಲ್ಲಾ ಮಂತ್ರಿಗಳು ಬಂದು ಭಾಷಣ ಮಾಡಿ ಹೋದರು. 1994ರ ಅಕ್ಟೋಬರ್‌ನಲ್ಲಿ ಏನು ಕೆಲಸ ನಡೆಯುತ್ತಾ ಇತ್ತು ಅದು ಕೂಡ ನಿಂತು ಹೋಗಿದೆ. ಇವತ್ತಿಗೂ ತಿಪಟೂರಿಗೆ ನೀರನ್ನು ಒದಗಿಸಿಲ್ಲ. 1994ರ ಅಕ್ಟೋಬರ್‌ನಲ್ಲಿ ನಿಲ್ಲಿಸಿದ ಕೆಲಸವು ಇದುವರೆಗೆ ಪ್ರಾರಂಭವಾಗಿಲ್ಲ. ಪೈಪ್‌ಲೈನ್ ಆಗಿದೆ. ಕೆಲವು ಸದಸ್ಯರುಗಳು ಮಾತನಾಡುವಾಗ 2-3 ದಿವಸಗಳಿಗೊಮ್ಮೆ ನೀರು ಕೊಡುತ್ತಿದ್ದಾರೆ ಎಂದು ಹೇಳಿದ್ದಾರೆ. ಆದರೆ ನಮ್ಮ ತಿಪಟೂರಿನಲ್ಲಿ 15 ದಿವಸಗಳಿಗೊಮ್ಮೆಯೂ ನೀರು ಕೊಡುತ್ತಾ ಇಲ್ಲ, ಬೇಕಾದರೆ ಸಚಿವರು ಅವರ ಮಿತ್ರ ಜನರನ್ನು ವಿಚಾರಿಸಿಕೊಳ್ಳಿ. ನಮ್ಮಲ್ಲಿ 50 ರಿಂದ 60 ಸಾವಿರ ಜನರು ವಾಸವಾಗಿದ್ದಾರೆ. ನೀರಿನ

ಮಾರಾಟಗಾರರಿಂದ ನೀರನ್ನು ಕೊಂಡುಕೊಂಡು ಕುಡಿಯುತ್ತಾ ಇದ್ದಾರೆ. ಆದುದರಿಂದ ತುರ್ತಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಐ.ಎಂ. ಜಯರಾಮ ಶೆಟ್ಟಿ (ಬೈಂದೂರು):- ಬೈಂದೂರು ಪುರಸಭೆಗೆ ಕುಡಿಯುವ ನೀರಿನ ವ್ಯವಸ್ಥೆಯಾಗಿ ಹೆಚ್ಚು ಕಡಿಮೆ 70 ಲಕ್ಷ ರೂ.ಗಳ ಖರ್ಚನ್ನು ಮಾಡಿ ಇವೊತ್ತಿಗೂ ನೀರು ಬಾರದೆ ಜನರಿಗೆ ಕುಡಿಯುವ ನೀರಿನ ಅಭಾವವಾಗಿ ನಾನು ಮೂರು ಡಿ.ಓ. ಲೆಟರ್ ಬರೆದರೂ ಅದಕ್ಕೆ ಉತ್ತರವಿಲ್ಲದೆ ಜನರಿಗೆ ಬೇಸಿಗೆಯಲ್ಲಿ ಬಹಳ ತೊಂದರೆಯಾಯಿತು. ಬರೆದ ಪತ್ರಗಳಿಗೆ ಉತ್ತರವಿಲ್ಲದೆ ನಿಮ್ಮ ಅಧಿಕಾರಿಗಳು ಇಷ್ಟು ಬೇಜವಾಬ್ದಾರಿಯಿಂದ ವರ್ತನೆ ತೋರಿಸುತ್ತಿದ್ದಾರೆ. ಅದರಲ್ಲಿಯೂ ಪುರ ಸಭೆಯನ್ನು ಬರಖಾಸ್ತ್‌ಗೊಳಿಸಿ ಅದನ್ನು ಇದು ತನಕವೂ ಟೌನ್‌ಪಂಚಾಯತ್ ಎಂದು ಮಾರ್ಪಾಟು ಕೂಡ ಮಾಡಿಲ್ಲ. ಈ ವಿಷಯವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಎಸ್. ಶಿವಣ್ಣ (ತುಮಕೂರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಬೇಡಿಕೆಗಳ ಮೇಲೆ ಉತ್ತರಿಸಿದ್ದಕ್ಕೆ ಅಭಿನಂದಿಸುತ್ತಾ ಇದ್ದೇನೆ. ನನ್ನ ಕ್ಷೇತ್ರದ ಭುವನಳ್ಳಿ ಕೆರೆಗೆ ತುಮಕೂರು ಕ್ಷೇತ್ರ-ದಿಂದ ನೀರು ಬಿಡುತ್ತೇವೆಂದು ಹೇಳಿದ್ದರು. ಆದರೆ ಇಲ್ಲಿಯವರೆಗೂ ನೀರು ಬಿಡಲಿಲ್ಲ. ಕೊಳಚೆ ನಿರ್ಮೂಲನ ಮಂಡಳಿಯಿಂದ ಮಾಡಿಕೊಡುತ್ತೇವೆಂದು ಹೇಳಿದ್ದರು, ಅದೂ ಆಗಿಲ್ಲ. ನಾವು ಈಗ ನೀರನ್ನು ಕೊಂಡು ಕುಡಿಯುತ್ತಿದ್ದೇವೆ. ಅದಕ್ಕೆ ಮಾನ್ಯ ಸಚಿವರು ನಿಖರವಾಗಿ ನಮಗೆ ಕುಡಿಯುವ ನೀರನ್ನು ಯಾವಾಗ ಕೊಡುತ್ತೇವೆಂದು ಹೇಳಬೇಕು. ಇಲ್ಲವಾದರೆ ನಾವು ಸ್ವರ್ಗಕ್ಕೆ ಹೋಗಬೇಕಾ-ಗುತ್ತದೆ.

ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ):- ಮೈಸೂರು ನಗರಕ್ಕೆ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ವತಿಯಿಂದ 35ಕೋಟಿ ರೂ.ಗಳ ವೆಚ್ಚದಿಂದ ರಿಂಗ್‌ರೋಡ್ ಮುಂತಾಗಿ ಮಾಡಿದ್ದಾರೆ. ಮೇಳಾಪುರ ಯೋಜನೆಗೆ ಏಷಿಯನ್ ಬ್ಯಾಂಕ್ ವತಿಯಿಂದ ಬರತಕ್ಕಂಥ ಹಣದಲ್ಲಿ ಏಕೆ ಅಳವಡಿಸಿಕೊಂಡಿಲ್ಲ? ಎರಡನೆಯದಾಗಿ, ಮೈಸೂರು ನಗರದಲ್ಲಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಮಾನ್ಯ ಸಚಿವರು ಹೇಳಿದ ಹಾಗೆ ಮೂಡಾ ಪ್ರದೇಶದಲ್ಲಿ 2-3 ಎಕರೆಗಳಲ್ಲಿ ಗುಡಿ-ಸಲುಗಳನ್ನು ಹಾಕಿಕೊಂಡು ಇದ್ದವರನ್ನು ತೆಗೆಯಲು ಸಂಬಂಧಪಟ್ಟ ಅಧಿಕಾರಿಗಳು ಮುಂದೆ ಬರುತ್ತಾ ಇಲ್ಲ. ಇದು ಏತಕ್ಕೆ ಎಂಬ ಬಗ್ಗೆ ದಯಮಾಡಿ ಉತ್ತರ ಕೊಡಬೇಕು.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಸಚಿವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಯಾವುದೇ ತುಮಕೂರಿನ ಯೋಜನೆಗೆ ಸಂಬಂಧಪಟ್ಟ ಯೋಜನೆಗಳಿಗೆ ಏಷಿಯನ್ ಬ್ಯಾಂಕ್‌ನ ಹೆಸರನ್ನು ಹೇಳುತ್ತಾರೆ. ಹಾಗಾದರೆ ಏಷಿಯನ್ ಡೆವಲಪ್‌ಮೆಂಟ್ ಯೋಜನೆಯಲ್ಲಿ ಇದು ಸೇರಿದ್ದರೆ ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಎಷ್ಟು ಹಣ ತೊಡಗಿಸಿದ್ದೀರಿ? ಎಷ್ಟು ಹಣ ಮಂಜೂರಾಗಿದೆ? ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ಹೇಳಬೇಕು. ನಮ್ಮಲ್ಲಿ ಸೊಳ್ಳೆ ಕಾಟ ತುಂಬಾ ಜಾಸ್ತಿಯಾಗಿದೆ. ಯಾರೂ ಕೂಡ ಬದುಕಲು ಸಾಧ್ಯವಾಗದ

ಪರಿಸ್ಥಿತಿಯು ಇರುವುದರಿಂದ ಒಳಚರಂಡಿ ವ್ಯವಸ್ಥೆ ಮಾಡಲು ನೀವು ಯಾವಾಗ ಕೆಲಸ ಪ್ರಾರಂಭ ಮಾಡುತ್ತೀರಿ? ಅದನ್ನು ಏ.ಡಿ.ಬಿ. ಪ್ಲಾನ್‌ನಲ್ಲಿ ತೆಗೆದುಕೊಳ್ಳುತ್ತೀರಾ? ತುಮಕೂರಿಗೆ ಒಂದು ಸೆಟ-ಲೈಟ್‌ಟೌನ್‌ನ್ನು ಮಾಡಬೇಕೆಂದು ಈಗಾಗಲೇ ತೀರ್ಮಾನವಾಗಿದೆ. ಅದನ್ನು ಯಾವ ಯೋಜನೆ-ಯಲ್ಲಿ ತೆಗೆದು ಕೊಳ್ಳುತ್ತೀರಿ? ಅದಕ್ಕೆ ನೀರನ್ನು ಒದಗಿಸಲು ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬ ವಿಷಯಗಳಿಗೆ ಉತ್ತರಿಸಬೇಕಾಗಿ ಅರಿಕೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾವ್):- ಶಿಗ್ಗಾವ್, ಸವಣೂರು, ಬಂಕಾಪುರ ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆಯು ಮಂಜೂರಾಗಿದೆ. 1991ರಲ್ಲಿಯೇ ಮಂಜೂರಾ-ಗಿದೆ. ಈ ಬಗ್ಗೆ ಈಗಾಗಲೇ 6 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ಕೂಡಲೇ ಅಲ್ಲಿನ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಪರಿಷ್ಕೃತ ಅಂದಾಜು ಪಟ್ಟಿಗೆ ಮಂಜೂ-ರಾತಿಯನ್ನು ಪಡೆಯಬೇಕೆಂದು ಕಳೆದ ಎರಡು ವರ್ಷಗಳಲ್ಲಿ ಕೆಲಸವು ಹಾಗೆಯೇ ನಿಂತಿದೆ. ಆದುದರಿಂದ ಅಂದಾಜು ಪಟ್ಟಿಗೆ ಆದಷ್ಟು ಬೇಗನೆ ಮಂಜೂರಾತಿಯನ್ನು ದೊರಕಿಸಿಕೊಟ್ಟು ಮುಂದೆ ಉಳಿದಂಥ ಜಾಕ್‌ವೆಲ್ ಕೆಲಸ, ಜಲವಿದ್ಯುತ್‌ಗಾರ, ಪೈಪ್‌ಲೈನ್‌ಗಳ ಕೆಲಸವನ್ನು ಕೂಡಲೇ ಪ್ರಾರಂಭಿಸಬೇಕೆಂದು ಸಚಿವರಲ್ಲಿ ಅರಿಕೆ.

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ):- ವಿರಾಜಪೇಟೆ ನಗರಕ್ಕೆ ಸರಬರಾಜು ಮಾಡು ವಂಥ ಕುಡಿಯುವ ನೀರಿನ ವ್ಯವಸ್ಥೆಯು ಸಮಗ್ರ ರೀತಿಯಲ್ಲಿ ಇಲ್ಲದೆ ನೀರು ಅಲ್ಲಿಯ ಜನರಿಗೆ ಸಾಕಾಗುತ್ತಾ ಇಲ್ಲ. ಸರಕಾರಕ್ಕೆ ಈಗಾಗಲೇ ಒಂದು ಅಹವಾಲನ್ನು ನಾನು ಕೊಟ್ಟಿದ್ದೇನೆ. ವಿರಾಜ ಪೇಟೆಗೆ ಕಾವೇರಿ ನದಿ ನೀರನ್ನು ಸರಬರಾಜು ಮಾಡಲು ಕೇಳಿಕೊಂಡಿದ್ದೇನೆ. ಇದರ ಬಗ್ಗೆ ಸರಕಾರವು ತುರ್ತು ಗಮನ ಹರಿಸಿ ಆದಷ್ಟು ಬೇಗ ಆ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು):- ಏ.ಡಿ.ಬಿ.ಯವರಿಂದ ತೆಗೆದುಕೊಳ್ಳುವಂಥ 132 ಕೋಟಿ ಸಹಾಯಧನದಲ್ಲಿ ಮಂಗಳೂರು ಮಹಾನಗರಪಾಲಿಕೆಯನ್ನು ಸೇರಿಸಿಲ್ಲ. ದಯಮಾಡಿ ಸೇರಿಸಿಕೊಳ್ಳಿ. 40 ಪ್ರತಿಶತ ಮಂಗಳೂರು ಮಹಾನಗರಪಾಲಿಕೆಯ ಕ್ಷೇತ್ರದಲ್ಲಿ ನೀರು ಬರುತ್ತಾ ಇಲ್ಲ. ಅದೇ ರೀತಿಯಲ್ಲಿ ಅಲ್ಲಿನ ಒಳಚರಂಡಿ ಯೋಜನೆಯು ಸ್ಫೋಟಗೊಂಡಿದೆ. ಆದ್ದರಿಂದ ತತ್‌ಕ್ಷಣ ಅದನ್ನು ಸೇರಿಸಬೇಕೆಂದು ಒತ್ತಾಯ ಮಾಡುವುದರ ಜೊತೆಗೆ ಅಂಡರ್‌ಗ್ರೌಂಡ್ ಡ್ರೈನೇಜ್‌ನ ತ್ಯಾಜ್ಯ ಏನಿದೆ ಅದರಿಂದ ವಿದ್ಯುತ್ ಉತ್ಪಾದನೆ ಹಾಗೂ ಗೊಬ್ಬರವನ್ನು ತಯಾರು ಮಾಡುವಂಥ ವಿಶೇಷ ಯೋಜನೆಗಳ ಬಗ್ಗೆ ತಾವು ಉಲ್ಲೇಖ ಮಾಡಿಲ್ಲ. ಅದೇ ರೀತಿಯಲ್ಲಿ ಮಹಾನಗರ ಪಾಲಿಕೆಯಿಂದ ಕೆ.ಯು.ಡಬ್ಲ್ಯು.ಎಸ್. ಬೋರ್ಡ್‌ಗೆ ಬರುವಂಥ 20 ಕೋಟಿ ಬಾಕಿಗಳು ಯಾವುವು ಇವೆ, ಅದನ್ನು ಸರಕಾರದ ಕಡೆಯಿಂದ ಮನ್ನಾ ಮಾಡಿಸುವಂಥಾದ್ದು ಕಾರ್ಯಕ್ರಮವನ್ನು ಸರಕಾರದ ಕಡೆಯಿಂದ ಹಾಕಿಕೊಳ್ಳಬೇಕೆಂದು ಹೇಳಿ ಕೊನೆಯದಾಗಿ, ನಗರಾಭಿವೃದ್ಧಿ ಪ್ರಾಧಿಕಾರದ ಕಡೆಯಿಂದ ಅನಧಿಕೃತ

ಕಟ್ಟಡ ಮತ್ತು ಕಟ್ಟಡ ಉಲ್ಲಂಘನೆ ಬಗ್ಗೆ ಕಟ್ಟುನಿಟ್ಟಿನ ನಿಯಂತ್ರಣಗೊಳಿಸುವ ಒಂದು ಕಾರ್ಯಕ್ರಮ-ವನ್ನು ಹಾಕಿಕೊಳ್ಳಬೇಕು ಹಾಗೂ ಅದರ ವ್ಯಾಪ್ತಿಯಲ್ಲಿ ಬರುವಂಥ ಬೃಹತ್ ಉದ್ದಿಮೆಗಳಿಂದ ಬಂದರು ಪ್ರದೇಶದಿಂದ ಅಭಿವೃದ್ಧಿ ಶುಲ್ಕವನ್ನು ಸಂಗ್ರಹಿಸುವ ಒಂದು ಕಾರ್ಯಕ್ರಮವನ್ನು ತಾವುಗಳು ಹಾಕಿಕೊಂಡರೆ ಟ್ಯಾಕ್ಸ್ ಇಲ್ಲದೆ ನಾನ್‌ಟ್ಯಾಕ್ಸ್ ರೂಪದಲ್ಲಿ ನಾವು ಆದಾಯವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂಬ ಸಲಹೆಯನ್ನು ಕೊಡಬಯಸುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ):- ಕೊಡಗಿನ ಸೋಮವಾರಪೇಟೆಯ ಕುಶಾಲನಗರದಲ್ಲಿ ಕುಡಿಯುವ ನೀರಿನ ಅಭಾವವು ಬಹಳಷ್ಟು ಇದೆ. ಆದ್ದರಿಂದ ಕಳೆದ ಎರಡು ವರ್ಷಗಳ ಹಿಂದೆ ಒಂದು ಅಂದಾಜು ಪಟ್ಟಿಯನ್ನು ಕೂಡ ತಮ್ಮ ಕಚೇರಿಗೆ ತಲುಪಿಸಿದ್ದಾರೆ. ಆದರೂ ಇಲ್ಲಿಯ ತನಕ ಅದು ಮಂಜೂರಾಗಿರುವುದಿಲ್ಲ. ಅದನ್ನು ಆದಷ್ಟು ಬೇಗ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಏತಕ್ಕೆಂದರೆ ಕಾವೇರಿ ನೀರಿನ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆ, ಗಲಾಟೆ, ಗೊಂದಲಗಳು ಆಗುತ್ತಾ ಇರುತ್ತದೆ. ಆದರೆ ಕಾವೇರಿ ಪ್ರದೇಶದ ಜನರಿಗೆ ಕುಡಿಯುವ ನೀರಿಲ್ಲ ಅಂದರೆ ಒಂದು ವಿಪ-ರ್ಯಾಸವಾದಂತೆ ಆಗುತ್ತದೆಯಾದ ಕಾರಣ ಆ ಕ್ಷೇತ್ರಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಶೋಕ್ ಎಸ್. ಕಾಟವೆ (ಹುಬ್ಬಳ್ಳಿ):- ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ಎರಡನೇ ಯೋಜನೆಯ ಓವರ್‌ಹೆಡ್ ಟ್ಯಾಂಕ್‌ನ ಕೆಲಸವು ಸ್ವಲ್ಪ ಉಳಿದಿದೆ. ಅದನ್ನು ಆದಷ್ಟು ಬೇಗನೆ ಮಾಡಿ ಮುಗಿಸಬೇಕು. ಹಾಗೆಯೇ ಮೂರನೇ ಯೋಜನೆ-ಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ):- ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಧಾರವಾಡ ಮಹಾನಗರದಲ್ಲಿ ಶೇಕಡ 60ಕ್ಕಿಂತ ಯು.ಜಿ.ಡಿ. ಸಿಸ್ಟಂ ಇಲ್ಲ. ಇದರಿಂದಾಗಿ ಬಹಳ ತೊಂದರೆ-ಯಾಗುತ್ತದೆ. ಹಿಂದೆ ಒಮ್ಮೆ 350ಕೋಟಿ ರೂ.ಗಳ ಒಂದು ಯೋಜನೆಯನ್ನು ತಯಾರು ಮಾಡಿ-ದ್ದರು. ಹಿಂದಿನ ನಗರಾಭಿವೃದ್ಧಿ ಸಚಿವರು ಸದನದಲ್ಲಿ ಆಶ್ವಾಸನೆಯನ್ನೂ ಕೂಡ ಕೊಟ್ಟಿದ್ದರು. ಆ 350 ಕೋಟಿ ರೂ.ಗಳ ಬಗ್ಗೆ ವಿಶ್ವ ಬ್ಯಾಂಕ್‌ನ ನೆರವನ್ನು ಪಡೆದುಕೊಂಡು ಯೋಜನೆಯನ್ನು ಕಾರ್ಯಗತ ಗೊಳಿಸುತ್ತೇವೆಂದು ಹೇಳಿದ್ದರು. ಆ ಯೋಜನೆಯು ಯಾವ ಹಂತದಲ್ಲಿದೆ ಮತ್ತು ಯಾವಾಗ ಅದನ್ನು ಚಾಲನೆಗೆ ಕೊಡುತ್ತೀರಿ ಎಂಬುದನ್ನು ದಯಮಾಡಿ ಮಾನ್ಯ ಸಚಿವರು ಹೇಳ ಬೇಕೆಂದು ಅರಿಕೆ.

ಶ್ರೀ ಡಿ.ಆರ್. ಪಾಟೀಲ್ (ಗದಗ):- ಮಾನ್ಯ ಅಧ್ಯಕ್ಷರೇ, ಗದಗ–ಬೆಟಗೇರಿ ನಗರಕ್ಕೆ ಕುಡಿಯುವ ನೀರಿನ ಯೋಜನೆಯು ತುಂಗಾಭದ್ರಾ ನದಿ ಮೂಲದಿಂದ ಪ್ರಾರಂಭವಾಗಿದೆ. ಆದರೂ ಪ್ರತಿದಿನ ಕುಡಿಯುವ ನೀರನ್ನು ಸರಬರಾಜು ಮಾಡಲು ಸಾಧ್ಯವಾಗುತ್ತಾ ಇಲ್ಲ. ಅದಕ್ಕೆ ಇನ್ನೂ ಐದು ಕೋಟಿ ರೂ.ಗಳನ್ನು ಖರ್ಚು ಮಾಡಿ ಏಳೆಂಟು ಕಡೆಗಳಲ್ಲಿ ಓವರ್‌ಹೆಡ್ ಟ್ಯಾಂಕ್ಸ್ ನಿರ್ಮಾಣ-ವಾಗಬೇಕು. ಅಂತೆಯೇ ಕೊಳವೆ ಬದಲಾವಣೆಯಾಗಬೇಕೆಂಬ ಒಂದು ಅಂದಾಜನ್ನು ತಯಾರು

ಮಾಡಿ ತಮಗೆ ಕಳುಹಿಸಿಕೊಟ್ಟಿದ್ದಾರೆ. ಅದನ್ನು ತಾವುಗಳು ತೀವ್ರವಾಗಿ ಮಂಜೂರು ಮಾಡಿ ದಿನ-ನಿತ್ಯವೂ ನೀರು ಪೂರೈಕೆಯ ಒಂದು ವ್ಯವಸ್ಥೆ ಮಾಡಬೇಕು. ಅದನ್ನು ತೀವ್ರವಾಗಿ ನೀವು ಮಾಡಿದರೆ ಮುನಿಸಿಪಾಲಿಟಿಯಿಂದ ಬೇಗ ಹಣ ಕಟ್ಟಿಸಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಯೋಜನಾವೆಚ್ಚ ಮತ್ತೆ ಹೆಚ್ಚಾಗಿ ನಗರಗಳಿಗೆ ಬಹಳ ಹೊರೆಯಾಗುತ್ತದೆ. ಈ ಎರಡೂ ಕೆಲಸಗಳನ್ನು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಟಿ. ಪಾಟೀಲ್ (ಬೀಳಗಿ):- ಅಧ್ಯಕ್ಷರೇ, ಬೀಳಗಿ ತಾಲ್ಲೂಕು ಕೇಂದ್ರ ಸ್ಥಳ-ವಾಗಿದ್ದು ಸ್ವಾತಂತ್ರ್ಯ ಸಿಕ್ಕ 40 ವರ್ಷದ ನಂತರವೂ ಒಳಚರಂಡಿ ವ್ಯವಸ್ಥೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇಲ್ಲದ ತಾಲ್ಲೂಕು ಆಗಿದೆ. 1995ರಲ್ಲಿ ಸದನದಲ್ಲಿ ನಗರಾಭಿವೃದ್ಧಿ ಸಚಿವರನ್ನು ಈ ಬಗ್ಗೆ ನಾನೇ ಕೇಳಿದಾಗ ಇದು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಬರುತ್ತದೆ ಎಂದರು. ಆದ್ದರಿಂದ ನಾನು ನಂತರ ಎಸ್ಟಿಮೇಟ್ಸ್ ಮಾಡಿಸಿ ಗ್ರಾಮೀಣಾಭಿವೃದ್ಧಿಗೆ ಮಂಜೂರಾತಿಗೆ ಕಳಿಸಿದಾಗ ಇದು ಮತ್ತೆ ಟೌನ್ ಪಂಚಾಯಿತಿಗೆ ಪರಿವರ್ತನೆಯಾಗಿದೆ. ದಯಮಾಡಿ ತಾಲ್ಲೂಕು ಕೇಂದ್ರವಾದ ಬೀಳಗಿಗೆ ಒಳಚರಂಡಿ ಹಾಗೂ ಖಾಯಂ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ನಗರಾಭಿವೃದ್ಧಿ ಸಚಿವರನ್ನು ಕೇಳಿ ಕೊಳ್ಳುತ್ತೇನೆ. ಇನ್ನೊಂದು ಏಷ್ಯಾ ಅಭಿವೃದ್ಧಿ ಬ್ಯಾಂಕಿನ 131 ಕೋಟಿಯಿಂದ ತುಮಕೂರು, ರಾಮ-ನಗರ, ಮೈಸೂರು, ಚನ್ನಪಟ್ಟಣ, ಬೆಂಗಳೂರು ಬಿಟ್ಟರೆ ಉತ್ತರ ಕರ್ನಾಟಕದ ಒಂದೂ ನಗರ ಸೇರಿಲ್ಲ, ಈ ತಾರತಮ್ಯ ಏಕೆ?

ಶ್ರೀ ಕೆ. ವಿರೂಪಾಕ್ಷಪ್ಪ:- ಅಧ್ಯಕ್ಷರೇ, ನಮ್ಮಲ್ಲಿ ಕುಡಿಯುವ ನೀರಿನ ತೊಂದರೆ ಎಷ್ಟಿದೆ ಎಂಬ ಬಗ್ಗೆ ನಿನ್ನೆ ನಾನು ಸದನದಲ್ಲಿ ಹೇಳಿದ್ದೇನೆ. ಕುಡಿಯುವ ನೀರಿನ ಯೋಜನೆ 6 ವರ್ಷಗಳ ಹಿಂದೆ ಸಿಂಧನೂರಿನಲ್ಲಿ ಪ್ರಾರಂಭವಾಯಿತು. ಹಿಂದಿನ ಪೌರಾಡಳಿತ ಸಚಿವರು ಮಾರ್ಚ್ 96ರೊಳಗೆ ಸಿಂಧನೂರಿನ ಜನರಿಗೆ ಕುಡಿಯುವ ನೀರನ್ನು ಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಅಲ್ಲಿಂದ ಇಲ್ಲಿಯವರೆಗೆ ಕೆಲಸ ಪ್ರಾರಂಭ ಕೂಡ ಆಗಿಲ್ಲ, ಹಾಗೆಯೇ ನಿಂತಿದೆ. ಆದ ಕಾರಣ ಆ ಯೋಜನೆ-ಯನ್ನು ಎಷ್ಟು ತೀವ್ರ ಮುಗಿಸುತ್ತೀರೋ, ಅಷ್ಟು ಒಳ್ಳೆಯದು. ಏಕೆಂದರೆ ನಿನ್ನೆ ನಾನು ಹೇಳಿದಂತೆ ಒಳ್ಳೆಯ ಕುಡಿಯುವ ನೀರು ಒದಗಿಸದಿದ್ದರಿಂದ ವಾಂತಿ, ಭೇದಿ ಪ್ರಾರಂಭವಾಗಿ 18-20 ಜನ ಸಾವನ್ನಪ್ಪಿದ್ದಾರೆ. ಆದ್ದರಿಂದ ತೀವ್ರವಾಗಿ ಈ ಯೋಜನೆಯನ್ನು ಮುಗಿಸಿಕೊಡಬೇಕೆಂದು ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಅಧ್ಯಕ್ಷರೇ, ಕುಂದಾಪುರ ಪುರಸಭೆಯಲ್ಲಿ ಕುಡಿಯುವ ನೀರಿನ ಕೊರತೆ ಇದೆ. ಪುರಸಭೆ ವ್ಯಾಪ್ತಿಯಲ್ಲಿ ಸಿಹಿನೀರಿನ ಹೊಳೆ ಹರಿಯುತ್ತಿದ್ದರೂ ಅದನ್ನು ಶುದ್ಧೀಕರಿಸಿ ಕುಡಿಯುವ ನೀರಿಗೆ ಪರಿವರ್ತಿಸಬೇಕು. ಪುರಸಭೆಯ ಮೂಲಭೂತ ಬೇಡಿಕೆ ಏನೆಂದರೆ ಒಳಚರಂಡಿ. ನೀವು ಹೇಳುತ್ತೀರಿ 100 ಲೀಟರ್ ನೀರು ಹರಿಯಬೇಕೆಂದು. ಆ ನೀರು ಎಲ್ಲಿಗೆ ಹೋಗಬೇಕು? ಆದ್ದರಿಂದ ಎಲ್ಲಾ ಪುರಸಭೆಗಳಿಗೆ ವಿಶೇಷವಾಗಿ ಕುಂದಾಪುರಕ್ಕೆ ಒಳಚರಂಡಿ

ವ್ಯವಸ್ಥೆಯನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಗಂಗೊಳ್ಳಿಯನ್ನು ಅಧಿಸೂಚಿತ ಪ್ರದೇಶವೆಂದು ಘೋಷಿಸಿದ್ದೀರಿ. ಅಲ್ಲಿ ಚುನಾವಣೆಯನ್ನೂ ನಡೆಸದೆ ಪಂಚಾಯಿತಿ ವ್ಯವಸ್ಥೆಗೂ ತರದೆ ಅದನ್ನು ತ್ರಿಶಂಕು ಸ್ಥಿತಿಗೆ ತಂದಿದ್ದೀರಿ. ಅದನ್ನು ಹೇಗೆ ಸರಿಪಡಿಸುತ್ತೀರಿ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ):- ಅಧ್ಯಕ್ಷರೇ, ಬಾದಾಮಿ ಪಟ್ಟಣಕ್ಕೆ ಕುಡಿಯುವ ನೀರಿನ ತೊಂದರೆ ಬಹಳ ಇದೆ. ಅಲ್ಲಿ ಶಾಶ್ವತ ಕುಡಿಯುವ ನೀರಿನ ಯೋಜನೆಗಾಗಿ 3.40 ಕೋಟಿ ಅಂದಾಜಿನಲ್ಲಿ ರಾಜ್ಯ ಜಲಮಂಡಳಿಯವರು ಆಡಳಿತ ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ಅದರಲ್ಲಿ ರಾಜ್ಯ ಸರ್ಕಾರದ ಅನುದಾನ 2.3 ಕೋಟಿ, ಕೇಂದ್ರದ್ದು 1.36 ಕೋಟಿ ಅರ್ಥ ಇಲಾಖೆ 25-6-96ರಲ್ಲಿ ತಮ್ಮ ಇಲಾಖೆಗೆ ಕಳುಹಿಸಿಕೊಟ್ಟಿದೆ. ಇದಕ್ಕೆ ತೀವ್ರ ಮಂಜೂರಾತಿ ನೀಡಿ ಪ್ರೀತಿ ವಿಶ್ವಾಸ ತೋರುತ್ತೀರೆಂದು ನಾನು ಭಾವಿಸಿದ್ದೇನೆ.

ಶ್ರೀ ಡಿ. ನಾರಾಯಣದಾಸ್ (ಹರಪನಹಳ್ಳಿ):- ಅಧ್ಯಕ್ಷರೇ, ಹರಪನಹಳ್ಳಿ ಟೌನ್ ಮುನಿಸಿ-ಪಾಲಿಟಿ ಜನಸಂಖ್ಯೆ 35 ಸಾವಿರ. 30 ಸಾವಿರ ಜನ ಸಂಖ್ಯೆ ಇದ್ದರೆ ಅವು 10 ಪರ್ಸೆಂಟ್ ಕಟ್ಟುವ ಹಾಗಿಲ್ಲವೆಂದಿರಿ; ಇದು 35 ಸಾವಿರ ಇರುವುದರಿಂದ ಆ ವ್ಯಾಪ್ತಿಗೆ ಬರುವುದಿಲ್ಲ. ತುಂಗಭದ್ರ ನದಿ-ಯಿಂದ ಹರಪನಹಳ್ಳಿಗೆ ನೀರು ತರಲು 11 ಕೋಟಿ ಎಸ್ಟಿಮೇಟ್ ಮಾಡಿದ್ದಾರೆ. ಆದರೆ ಒಂದು ಕೋಟಿ ಚಿಲ್ಲರೆ ಕಟ್ಟಲು ಮುನಿಸಿಪಾಲಿಟಿಯವರು ಆ ತಾಲ್ಲೂಕು ಮಾರಿದರೂ ಆಗುವುದಿಲ್ಲ. ಆದ್ದರಿಂದ 35 ಸಾವಿರ ಇರುವುದನ್ನು 50 ಸಾವಿರಕ್ಕೆ ಏರಿಸಿದರೆ 10 ಪರ್ಸೆಂಟ್ ಕಟ್ಟಲು ಬರುವುದಿಲ್ಲ. 30ರಿಂದ 40 ಸಾವಿರ ಜನಸಂಖ್ಯೆ ಇರುವ ಊರುಗಳಿಗೆ ಅದಕ್ಕಾಗಿ 10 ಪರ್ಸೆಂಟನ್ನು ಇನ್‌ಸಿಸ್ಟ್ ಮಾಡಬಾರದು. ಆ ರೀತಿ ಇನ್‌ಸಿಸ್ಟ್ ಮಾಡಿದರೆ ಕುಡಿಯುವ ನೀರಿನ ಯೋಜನೆಗಳೇ ಆಗುವುದಿಲ್ಲ. ಪಕ್ಕದಲ್ಲೇ ತುಂಗಭದ್ರ ನದಿ ಹರಿಯುತ್ತದೆ ಅಲ್ಲಿಂದ ನೀರು ತರಲು ಅನುಕೂಲವಾಗುತ್ತದೆ. 10 ಪರ್ಸೆಂಟ್ ಕಟ್ಟಬೇಕೆಂದಿರುವುದನ್ನು ತಾವು ವೇವ್ ಮಾಡಬೇಕು. ಇಲ್ಲದಿದ್ದರೆ ಆಗುವುದೇ ಇಲ್ಲ. ಈಗಾಗಲೇ 11 ಕೋಟಿಗೆ ಎಸ್ಟಿಮೇಟ್ಸ್ ಕಳುಹಿಸಿದ್ದೇವೆ. ಅದನ್ನು ಮಾಡಬೇಕು. ಆಮೇಲೆ ಟೌನ್ ಪಂಚಾಯಿತಿ ವ್ಯಾಪ್ತಿ ಯಲ್ಲಿ ಎಕರೆಗೆ 45-50 ಸಾವಿರವೇನೋ ಮಾಡಿದ್ದೀರಿ. ಆದರೆ ಆ ಬೆಲೆಗೆ ಯಾರೂ ಅಲ್ಲಿ ಭೂಮಿ-ಯನ್ನು ಕೊಡುವುದಿಲ್ಲ. ಮೊನ್ನೆ 1.25 ಲಕ್ಷಕ್ಕೆ ಒಂದು ಎಕರೆ ಮಾರಾಟವಾಯಿತು. ಇದನ್ನು ಜಾಸ್ತಿ ಮಾಡಿದರೆ ಮಾತ್ರ ಟೌನ್ ಮುನಿಸಿಪಾಲಿಟಿ ಏರಿಯಾದಲ್ಲಿ ಸೈಟ್ಸ್ ಮಾಡಿ ಜನರಿಗೆ ಹಂಚಲು ಆಗುವುದು. ಇಲ್ಲದಿದ್ದರೆ ಸಾಧ್ಯವೇ ಇಲ್ಲ. ಇದನ್ನು ಒಂದು ಲಕ್ಷ ಎಕರೆಗೆ ಆದರೂ ಮಾಡಿದರೆ ನಾವು ಸೈಟ್ ಹಂಚಲು ಬರುತ್ತದೆ. ಇದರ ಬಗ್ಗೆ ತಾವು ಉತ್ತರ ಹೇಳಬೇಕು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಸದಲಗ):- ಅಧ್ಯಕ್ಷರೇ, ನಮ್ಮದು ದುರಂತ ಕಥೆ. 1991ರಲ್ಲಿ ಈ ಯೋಜನೆ 2.17 ಕೋಟಿಗೆ ಮಂಜೂರಾಗಿತ್ತು. ಪೈಪ್‌ಲೈನ್ ಯೋಜನೆ ಪೂರ್ತಿ ಆಗಿದೆ. ಸಬ್-ಮರ್ಸಿಬಲ್ ಪಂಪನ್ನೂ ಕೂರಿಸಿದ್ದಾರೆ. ಆದರೆ 16 ಕಿಮೀ ಪೈಪ್ ಸಂಪೂರ್ಣ ಲೀಕೇಜಿದೆ. ಮೊನ್ನೆ 5ರಂದು ಚಿಕ್ಕೋಡಿ ಪಟ್ಟಣದ ಹೆಣ್ಣು ಮಕ್ಕಳು ಮೂರು ತಾಸು ಬಸವ ಸರ್ಕಲ್‌ನಲ್ಲಿ ಸತ್ಯಾಗ್ರಹ

ಮಾಡಿದರು, ಅವರಿಗೆ ಅಧಿಕಾರಿಗಳ ಮೇಲೆ ವಿಶ್ವಾಸ ಹೋಗಿದೆ. ಬೆಳಗಾಂ ಇ.ಇ. ಮತ್ತು ಚಿಕ್ಕೋಡಿ ಎ.ಇ.ಇ. ಮೇಲೆ ವಿಶ್ವಾಸ ಇಲ್ಲ. ಈ ಹೊಸ ಪೈಪ್‌ಲೈನ್ ಏಕೆ ಲೀಕೇಜಾಗುತ್ತಿದೆ ಎಂದು ತಿಳಿಯ ಬಯಸಲು ಅವರು ಕೇಳುತ್ತಿದ್ದಾರೆ. ನಾನು ಸಚಿವರಲ್ಲಿ ವಿನಂತಿಸುತ್ತೇನೆ: ತಾವೇ ಖುದ್ದು ಚಿಕ್ಕೋಡಿಗೆ ಭೇಟಿ ಕೊಟ್ಟು ಶಾಸಕರು ಪುರಸಭೆ ಅಧ್ಯಕ್ಷರ ಜೊತೆ ಮೀಟಿಂಗ್ ಮಾಡಿ ಈ ತಿಂಗಳ ಒಳಗೆ ಅಲ್ಲಿ ಯಾವ್ಯಾವ ಅಧಿಕಾರಿಗಳು ದುಡ್ಡು ತಿಂದುಹಾಕಿದ್ದಾರೆ ಎಂಬ ಬಗ್ಗೆ ವಿಚಾರಣೆ ಮಾಡಿ ಪ್ರತಿ ದಿನ ಕುಡಿಯುವ ನೀರು ಒದಗಿಸುವ ಕೆಲಸ ಮಾಡಬೇಕೆಂದು ಸಚಿವರಲ್ಲಿ ಬೇಡಿಕೊಳ್ಳುತ್ತೇನೆ.

ಶ್ರೀ ಶಾಮನೂರು ಶಿವಶಂಕರಪ್ಪ (ದಾವಣಗೆರೆ):- ಅಧ್ಯಕ್ಷರೇ, ಸಚಿವರು ಉತ್ತರದಲ್ಲಿ ಚೆನ್ನಾಗಿ ಹೇಳಿದ್ದಾರೆ, ಸದಸ್ಯರು ಹೇಳಿದ ವಿಚಾರಗಳೆಲ್ಲಾ ನನ್ನ ಗಮನಕ್ಕೆ ಬಂದಿದೆ ಎಂದು. ಆದರೆ ನಿರ್ದಿಷ್ಟವಾಗಿ ಕೆಲಸಗಳನ್ನು ಪೂರೈಸುತ್ತೇವೆಂದು ಹೇಳಲಿಲ್ಲ. ದಾವಣಗೆರೆ 2ನೇ ಹಂತ ಕುಡಿಯುವ ನೀರಿನ ಯೋಜನೆಯನ್ನು ಯಾವ ತಿಂಗಳು, ವರ್ಷದಲ್ಲಿ ಮುಗಿಸುತ್ತೀರೆಂದು ಹೇಳಬೇಕು. ಬೇರೆ ನಗರ ಸಭೆಗಳ ಜೊತೆ ನೀರಿನ ಹಂಚಿಕೆ ಬಗ್ಗೆ ಸಾಲ ನಿಗದಿಮಾಡಿ ಕೆಲಸ ಪೂರೈಸಬೇಕು, ಹರಿಹರದ ಶಿವಪ್ಪ-ನವರ ಪರವಾಗಿಯೂ ನಾನು ಕೇಳುತ್ತೇನೆ. ಹರಿಹರದ ಕುಡಿಯುವ ನೀರಿನ ಬಗ್ಗೆಯೂ ಸಹ ನಿರ್ದಿಷ್ಟ ವಾಗಿ ಯಾವಾಗ ಮುಗಿಸುತ್ತೇವೆಂದು ಸದನದಲ್ಲಿ ಸಚಿವರು ಹೇಳಬೇಕು.

ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನ ಹಳ್ಳಿ):- ಅಧ್ಯಕ್ಷರೇ, ನನ್ನ ತಾಲ್ಲೂಕಿನಲ್ಲಿ 15 ದಿವಸಕ್ಕೊಮ್ಮೆ ಕುಡಿಯುವ ನೀರು ಬಿಡುವ ಸನ್ನಿವೇಶ ಇರುವುದರಿಂದ ಹೇಮಾವತಿ 11 ಕಿಮೀ ವ್ಯಾಪ್ತಿಯಲ್ಲಿ ಹರಿದಿರುವುದರಿಂದ ನಾವು ರಿಕ್ವಿಸಿಷನ್ ಕೊಟ್ಟಾಗ ಇಂಜಿನಿಯರ್ 5.25 ಕೋಟಿಗೆ ಅಂದಾಜು ಮಾಡಿದ್ದಾರೆ. ದಯಮಾಡಿ ತಮ್ಮ ಇಲಾಖೆ ವತಿಯಿಂದ ಅದನ್ನು ಬೇಗ ಮಾಡಿಸಿ-ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಂಗಣ್ಣ ಕರಡಿ ಅಮರಪ್ಪ (ಕೊಪ್ಪಳ):- ಅಧ್ಯಕ್ಷರೇ, ಕೊಪ್ಪಳದ ಕುಡಿಯುವ ನೀರಿನ ಅಭಾವವನ್ನು ಈಗಾಗಲೇ ತಮ್ಮ ಗಮನಕ್ಕೆ ತರಲಾಗಿದೆ, ಕೊಪ್ಪಳದ ಯೋಜನೆ ಮಂಜೂರಾದ ಮೇಲೆ ಗುತ್ತಿಗೆದಾರರಿಗೆ ಕೆಲಸ ವಹಿಸಿಕೊಡಲಾಗಿತ್ತು. ಅವರ ವಿಳಂಬದಿಂದ ಕೆಲಸ ಅರ್ಧಕ್ಕೆ ನಿಂತಿದೆ. ಹಳೆ ಗುತ್ತಿಗೆದಾರರ ಟೆಂಡರ್ ರದ್ದು ಮಾಡಿದ್ದು ಪುನಃ ಟೆಂಡರ್ ಕರೆದಿರುವುದಾಗಿ ಸಚಿವರು ಹೇಳಿದ್ದಾರೆ. ಮೊನ್ನೆ ಅಲ್ಲಿ ಬೋರ್‌ವೆಲ್‌ಗಳಿಂದ ನೀರು ಕೊಟ್ಟರೂ ಬೋರ್‌ನಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ಸಾಕಾಗದೆ ಸಾರಿಗೆ ವ್ಯವಸ್ಥೆ ಮೂಲಕ ನೀರು ಕೊಡುತ್ತಿದ್ದೇವೆ. ಗುತ್ತಿಗೆ-ದಾರರನ್ನು ಬಿಟ್ಟು ಸರ್ಕಾರ ಇಲಾಖೆಯಿಂದಲೇ ಆ ಕುಡಿಯುವ ನೀರಿನ ಯೋಜನೆ ಮಾಡಲು ಸಾಧ್ಯವೇ? ಏಕೆಂದರೆ ಇನ್ನೊಬ್ಬರಿಗೆ ಗುತ್ತಿಗೆ ಕೊಟ್ಟರೆ ಅವರು ಮತ್ತೆ 10 ವರ್ಷ ತೆಗೆದುಕೊಳ್ಳುತ್ತಾರೆ. ಆಮೇಲೆ ಮಂತ್ರಿಗಳು ಸಬ್‌ಡಿವಿಜನನ್ನು ಕೊಪ್ಪಳಕ್ಕೆ ಮಂಜೂರು ಮಾಡಿಕೊಟ್ಟಿದ್ದರು. ಅದನ್ನು ಮತ್ತೆ ಕ್ಯಾನ್ಸಲ್ ಮಾಡಿದ್ದಾರೆ. ಅಲ್ಲಿ ಕೆಲಸ ಮಾಡಲು ಅಧಿಕಾರಿಗಳಿರದಿದ್ದರೆ ಕೆಲಸ ಆಗುವುದಿಲ್ಲ. ಆದ್ದರಿಂದ ಸಬ್‌ಡಿವಿಜನ್ ಕೂಡ ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

12.40 ಪಿ. ಎಂ.

ಶ್ರೀ ಆರ್. ಸುಭಾಷ್ ಗುತ್ತೇದಾರ್ (ಆಳಂದ):- ಆಳಂದ ನಗರದಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ ಹೊಸ ಪೈಪ್ ಲೈನ್ ಸಲುವಾಗಿ ಈಗಾಗಲೇ ಅಂದಾಜು ಮಾಡಿದ್ದಾರೆ. ಸುಮಾರು 9-10 ಕಿಲೋ ಮೀಟರಿನಿಂದ ಅಮರ ಜ್ಯೋತಿಯಿಂದ ನೀರು ಫಿಲ್ಟರ್ ಮಾಡಿ ಕೊಟ್ಟರೂ ಕೂಡ ಹಳೆಯ ಪೈಪ್‌ಲೈನ್ ಕೆಟ್ಟು ಪೈಪ್‌ಲೈನ್ ಒಡೆದು ನೀರು ಸೋರುತ್ತಿತ್ತು. ಈಗ ಅವೆಲ್ಲಾ ಪೈಪುಗಳು ಒಳಗಿನಿಂದ ಒಳಚರಂಡಿ ನೀರು ಬಂದು ಹಿಂದೆ ಕಾಲರಾ ಸಹ ಆಗಿ ಕೆಲವು ಜನರು ಸತ್ತಿದ್ದಾರೆ. ಹೊಸ ಪೈಪ್‌ಲೈನ್ ಮತ್ತು ಒಳಚರಂಡಿ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಜಾವೆಂಕಟಪ್ಪ ನಾಯಕ್ (ಸುರಪುರ):- ಸುರಪುರ ಪಟ್ಟಣದಲ್ಲಿ ಆಗ್‌ಮೆಂಟೇಷನ್ ವಾಟರ್ ಸಪ್ಲೈ ಸ್ಕೀಮ್ 94ರಲ್ಲಿ ಪ್ರಾರಂಭವಾಗಿದ್ದು ಇಲ್ಲಿಯವರೆಗೆ ಪೂರ್ತಿಯಾಗಿಲ್ಲ. ಎರಡು ವರ್ಷದಿಂದ ಬರೀ ಒಂದು ಟ್ಯಾಂಕ್ ಕಟ್ಟಿದ್ದಾರೆ. ಇದು ಪೂರ್ಣವಾಗಬೇಕು. ಇದೆಲ್ಲಾ ಆಗಬೇಕಾದರೆ 5 ಕೋಟಿ ರೂ.ಗಳ ಅಂದಾಜು ಇರುವುದು ಏನು ಇದೆ ಇದು ಹತ್ತು ಕೋಟಿಗೂ ಹೋಗಬಹುದು. ಎರಡು ವರ್ಷಗಳಲ್ಲಿ ಮುಗಿಸದಿದ್ದರೆ ಹತ್ತು ಕೋಟಿಗೂ ಹೋಗಬಹುದು. ಆದ್ದರಿಂದ ಆದಷ್ಟು ಬೇಗನೆ ಅದನ್ನು ಮುಗಿಸಬೇಕೆಂದು ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಸ್. ಶಿವಾನಂದ ಪಾಟೀಲ್:- ಮಾನ್ಯ ಮಂತ್ರಿಗಳು ಸವಿಸ್ತಾರವಾಗಿ ಉತ್ತರ ತಿಳಿಸ ತಕ್ಕಂತಹ ಪ್ರಯತ್ನ ಮಾಡಿದ್ದಾರೆ. ಆದರೆ ಬಿಜಾಪುರದ ಬಿ.ಡಿ.ಎ. ಬಗ್ಗೆ ನಾನು ಹೇಳಬೇಕಾಗಿದೆ. ಬಿಜಾಪುರ ಡೆವಲಪ್‌ಮೆಂಟ್ ಅಥಾರಿಟಿನಲ್ಲಿ ಮೊದಲು ಗಾರ್ಡನ್ ಫಾರ್ಮೇಷನ್‌ಗೆ 20 ಲಕ್ಷ ಮೊದಲು ಖರ್ಚು ಮಾಡಿದ್ದಾರೆ. ಕೇವಲ ಎರಡೇ ಎರಡು ಎಕರೆಗೆ. ಇವತ್ತು ಅಲ್ಲಿ ಆ ಗಾರ್ಡನ್ ನೋಡಿಕೊಳ್ಳುವವರು ದಿಕ್ಕಿಲ್ಲ. ಮಂಜೂರಾತಿಯಾದ ಹುದ್ದೆ ಅಲ್ಲಿ ಇಲ್ಲ. ಗಾರ್ಡನ್ ಮಾಡತಕ್ಕಂತಹ ಆಬ್ಜೆಕ್ಟ್ ಕೂಡ ಇಲ್ಲ. ಎರಡು ದಿವಸದ ಹಿಂದೆ ಬಿ.ಡಿ.ಎ. ಹೌಸ್ ಟ್ಯಾಕ್ಸ್ ಕಲೆಕ್ಷನ್ ಬಗ್ಗೆ ಗೆಜೆಟ್ ಇಷ್ಯೂ ಮಾಡಿದೆ. ಬಿ.ಡಿ.ಎ.ನವರು ಲೇ ಔಟ್ ಫಾರ್ಮೇಷನ್ ಮಾಡಿರುತ್ತಾರೆ. ಇಲ್ಲಿಯವರೆಗೆ ನಗರಸಭೆಯವರು ಮನೆ ಕಂದಾಯ ಕಲೆಕ್ಷನ್ ಮಾಡುತ್ತಿದ್ದರು. ಆದರೆ ಮೊನ್ನೆ ಒಂದು ನೋಟಿಫಿ-ಕೇಷನ್ ಇಷ್ಯೂ ಮಾಡಿ ಅದನ್ನು ಬಿ.ಡಿ.ಎ.ನವರೇ ಕಲೆಕ್ಷನ್ ಮಾಡಬೇಕೆಂದು ಹೇಳುತ್ತಿದ್ದೀರಿ. ಈಗಾಗಲೇ ನಗರಸಭೆಗಳು ಆರ್ಥಿಕವಾಗಿ ದುರ್ಬಲವಾಗಿವೆ. ಎಂಟರ್‌ಟೇನ್‌ಮೆಂಟ್ ತೆರಿಗೆ ಸ್ಲ್ಯಾಬ್ ಸಿಸ್ಟಂ ಬಂದಿರುವುದರಿಂದ ಇವತ್ತು ನೂರಕ್ಕೆ 40 ರಷ್ಟು ಸಿಗುತ್ತಿದೆ. ಆಕ್ಟ್ರಾಯ್ ಕೂಡ ನೇರವಾಗಿ ಟ್ರೆಜರಿಗೆ ಕ್ರೆಡಿಟ್ ಆಗುವುದರಿಂದ ಬರೀ ಸ್ಯಾಲರಿ ಕೊಡತಕ್ಕಂಥಹ ದೃಷ್ಟಿಯಲ್ಲಿ ಹೋಗುತ್ತಿದೆ. ನಗರ ಸಭೆ ಪೂರ್ತಿ ಇವೂ ಹೌಸ್ ಟ್ಯಾಕ್ಸ್ ತೆರಿಗೆ ಕಲೆಕ್ಷನ್ ಶುರು ಮಾಡಿದರೆ ಅವರು ಪೂರ್ತಿ ಇನ್ನು ಯಾವುದೇ ಕೆಲಸ ಮಾಡದೇ ಸುಮ್ಮನೆ ಕೂಡಬೇಕಾಗುತ್ತದೆ. ಮಾನ್ಯ ಮಿರಾಜುದ್ದೀನ್ ಪಟೇಲರು ಇದರ ಕಡೆಗೆ ಲಕ್ಷ್ಯ ಕೊಡಬೇಕಾಗಿದೆ. ಬಿಜಾಪುರ ವಾಟರ್ ಸಪ್ಲೈ ಬಗ್ಗೆ ನಿನ್ನೆ ಕೂಡ ಉತ್ತರ ಕೊಟ್ಟಿ-ದ್ದಾರೆ. ಇನ್ನು 4 ಕೋಟಿ ರೂಪಾಯಿ ಅದಕ್ಕೆ ಮಂಜೂರು ಮಾಡಬೇಕಾಗಿದೆ. ಈ ವರ್ಷ 8 ಕೋಟಿ

ರೂಪಾಯಿಗಳ ಪ್ರಾವಿಷನ್ ಮಾಡಿದ್ದೇವೆಂದು ಹೇಳಿದ್ದಾರೆ. ಇನ್ನು 4 ಕೋಟಿ ಹಣವನ್ನು ಪ್ರಾವಿಷನ್ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು. ಬಿಜಾಪುರ್ ಡೆವಲಪ್‌ಮೆಂಟ್ ಅಥಾರಿಟಿ ಫಾರ್ಮೇಷನ್ ಆದ ಮೇಲೆ ಇಲ್ಲಿಯವರೆಗೆ ನೂರಕ್ಕೆ 70 ರಷ್ಟು ಖಾಸಗಿಯವರೇ ಬರೀ ಲೇ ಔಟ್ ಫಾರ್ಮೇಷನ್ ಮಾಡಿದ್ದಾರೆ. ಸ್ಕೀಮ್(1) ಮತ್ತು ಸ್ಕೀಮ್(2) ಬಿಟ್ಟರೆ ಇಲ್ಲಿಯವರೆಗೆ ಯಾರೂ ಲೇ ಔಟ್ ಫಾರ್ಮೇಷನ್ ಮಾಡಿಲ್ಲ. ಇದರಲ್ಲಿ ಬಹಳಷ್ಟು ಅವ್ಯವಹಾರವಾಗಿದೆ. ಬರೀ ಡ್ರಾಫ್ಟ್ ಲೆವೆಲ್‌ನಲ್ಲೇ ಇವತ್ತು ಎಷ್ಟೋ ಲೇ ಔಟ್‌ಗಳನ್ನು ಮಾರಿಬಿಟ್ಟಿದ್ದಾರೆ. ಫೈನಲ್ ಲೇ ಔಟ್ ಮಾಡಿಲ್ಲ. ರಸ್ತೆ ಡ್ರೈನೇಜ್ ಲೈನ್ಸ್ ಇಲ್ಲ, ಸ್ಟ್ರೀಟ್ ಲೈಟ್ಸ್ ಇಲ್ಲ. ಅಂತಹ ಲೇ ಔಟ್ ಮಾಡಿ ಜನರಿಗೆ ಮಿಸ್‌ಲೀಡ್ ಮಾಡಿ ನೂರಕ್ಕೆ 80ರಷ್ಟು ಅಂತಹ ಫ್ಲಾಟ್ ಅನ್ನೇ ಮಾಡಿದ್ದಾರೆ. ಇದರ ಬಗ್ಗೆ ಕೂಲಂಕುಷವಾಗಿ ವಿಚಾರಣೆ ಮಾಡಬೇಕೆಂದು ತಮಗೆ ತಿಳಿಸುತ್ತಿದ್ದೇನೆ.

ಶ್ರೀ ಕಲ್ಲಪ್ಪನಾಗಪ್ಪ ಗದ್ದಿ (ನವಲಗುಂದ):- ನವಲಗುಂದ ಹಾಗೂ ಅಣ್ಣಿಗೇರಿಯಲ್ಲಿ ಶಾಶ್ವತ ಕುಡಿಯುವ ನೀರಿನ ಯೋಜನೆ 1993ರಲ್ಲಿ ಮಂಜೂರಾಗಿದೆ. ಅದರ ಕಾಸ್ಟ್ ನೂರು ಕೋಟಿ 50 ಲಕ್ಷ ರೂಪಾಯಿ ಆವತ್ತು ಇತ್ತು. ಇವತ್ತು ಅದು 5ರಿಂದ ಐದೂವರೆ ಕೋಟಿ ಆಗಿದೆ. ನವಲಗುಂದ ಅಣ್ಣಿಗೇರಿ ನಗರದಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಬೇಗನೆ ಜಾರಿಗೊಳಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ. ಅಲ್ಲಿ 3-5 ದಿವಸಕ್ಕೊಮ್ಮೆ ಕುಡಿಯುವ ನೀರನ್ನು ಬೋರ್‌ವೆಲ್ ಮುಖಾಂತರ ಕೊಡುತ್ತಾರೆ. 1992ರಲ್ಲಿ ಹತ್ತು ಬೋರ್‌ವೆಲ್ ಅನ್ನು ಅಣ್ಣಿಗೇರಿ ನಗರಕ್ಕೆ ಕೊಟ್ಟಿದ್ದರು. ಅವೆಲ್ಲಾ ಕೆಟ್ಟು ಹೋಗಿ ಕೇವಲ 4 ಕ್ಕೆ ಇಳಿದಿದೆ. ಕಿರು ನೀರು ಯೋಜನೆಯಲ್ಲಿ ಬೋರ್‌ವೆಲ್ ಹಾಕಿ ಸಧ್ಯಕ್ಕೆ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸಬೇಕು. ನಂತರ ಶಾಶ್ವತ ಯೋಜನೆ-ಯಾದಂತಹ ಅಣ್ಣಿಗೇರಿ, ನವಲಗುಂದ ಯೋಜನೆಯನ್ನು ತೀವ್ರಗತಿಯಲ್ಲಿ ಕಾರ್ಯಗತಗೊಳಿಸಬೇಕು. ಲ್ಯಾಂಡ್ ಕಾಸ್ಟ್ ರಿಜೆಕ್ಟ್ ಮಾಡಿ ಮಾಡುವುದರ ಬದಲು ಲ್ಯಾಂಡ್ ಕಾಸ್ಟ್ ಇನ್‌ಕ್ಲೂಡ್ ಮಾಡಿ-ಕೊಂಡು ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತಗೊಳಿಸಬೇಕು.

ಶ್ರೀ ಎಂ.ಎಸ್. ಅಕ್ಕಿ (ಕುಂದಗೋಳ):- 1983 ರಲ್ಲಿ ಮಾನ್ಯ ಬೊಮ್ಮಾಯಿಯವರು ಕಂದಾಯ ಮಂತ್ರಿಯಾಗಿದ್ದಾಗ ಕುಂದಗೋಳಕ್ಕೆ ಮಲಪ್ರಭಾದಿಂದ ಕುಡಿಯುವ ನೀರನ್ನು ಕೊಟ್ಟಿ-ದ್ದಾರೆ. ಒಂದು ಕೋಟಿ 20 ಲಕ್ಷ ರೂಪಾಯಿ ಖರ್ಚು ಮಾಡಿ ಪೈಪ್‌ಲೈನ್ ಹಾಕಿ ನೀರು ಕೊಟ್ಟಿ-ದ್ದಾರೆ. ಆದರೆ ಹುಬ್ಬಳ್ಳಿಯಿಂದ ಕುಂದಗೋಳಕ್ಕೆ ಹಾಕಿದಂತಹ ಪೈಪು ಕಟ್ ಆಗಿ ಎಲ್ಲಾ ನೀರು ರಸ್ತೆಗೆ ಸೋರಿ ಹೋಗುತ್ತಿದೆ. ಕುಂದಗೋಳಕ್ಕೆ 4-5 ದಿನವಾದರೂ ನೀರು ಬರುತ್ತಿಲ್ಲ. ಆ ಪೈಪನ್ನು ರಿಪೇರಿ ಮಾಡಿಸಿ ಕುಂದಗೋಳಕ್ಕೆ ನೀರನ್ನು ಸರಿಯಾಗಿ ಒದಗಿಸಿಕೊಡಬೇಕೆಂದು ಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಗಂಗಹನುಮಯ್ಯ (ಮಧುಗಿರಿ):- ನಮ್ಮ ಮಧುಗಿರಿ ಕ್ಷೇತ್ರ ಬರಗಾಲ ಪೀಡಿತ-ವಾದಂತಹ ಕ್ಷೇತ್ರವಾಗಿದೆ. ಅಲ್ಲಿ ಬೋರ್‌ವೆಲ್ ಕೊರೆದರೆ ನೀರು ಸಿಗುತ್ತಿಲ್ಲ. ಆದರೂ ಕೆಲವು ಕಡೆ

ಬೋರ್ ಕೊರೆದರೂ ನೀರು ಸಿಕ್ಕಿಲ್ಲ ಮತ್ತು ಜೈ ಮಂಗಲಿ ನದಿಯಿಂದ ನೀರು ತರುತ್ತೇವೆಂದು ಈಗಾಗಲೇ ಎರಡು ವರ್ಷದಿಂದ ಹೇಳುತ್ತಿದ್ದಾರೆ. ಇದುವರೆಗೂ ಆ ಕೆಲಸವಾಗಿಲ್ಲ. ಮಾನ್ಯ ಸಚಿವರು ಆದಷ್ಟು ಬೇಗನೆ ಆ ಕಾರ್ಯ ಮಾಡಿಕೊಡಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು):- ಮಾನ್ಯ ಸಭಾಧ್ಯಕ್ಷರೆ, ಕಡೂರಿಗೆ ಈಗಾಗಲೇ 3ನೇ ಹಂತದ ಕುಡಿಯುವ ನೀರಿನ ಯೋಜನೆ ಮಂಜೂರಾಗಿದ್ದು ವೇದಾ ನದಿ ಒಣಗಿ ಹೋಗಿದೆ. ಮಳೆ ಗಾಲದಲ್ಲಿ ಕೂಡ ವೇದಾ ನದಿ ಒಣಗಿ ಹೋಗಿದೆ ಎಂದರೆ ನಾವು ಕಳೆದ 25 ವರ್ಷದಿಂದ ಬರ-ಗಾಲಕ್ಕೆ ತುತ್ತಾಗಿದ್ದು ಭೀಕರವಾದ ಬರಗಾಲವೆಂಬುದನ್ನು ಇದು ತೋರಿಸುತ್ತಿದೆ. ಭದ್ರಾ ಚಾನಲ್ 35 ಕಿಲೋ ಮೀಟರ್ ಆಗುತ್ತದೆ. ಅಲ್ಲಿಂದ ಕಡೂರಿಗೆ ತರೀಕೆರೆ ಬೀರೂರಿಗೆ ಶಾಶ್ವತವಾದ ಕುಡಿಯುವ ನೀರಿನ ಯೋಜನೆ ಮಾಡಲಿಕ್ಕೆ ಒಂದು ಸರ್ವೆ ಕಾರ್ಯವನ್ನು ಪ್ರಾರಂಭಿಸಬೇಕೆಂದು ಮಾನ್ಯ ಮಂತ್ರಿ-ಗಳಲ್ಲಿ ಕೇಳಿಕೊಳ್ಳುತ್ತೇನೆ. 1953 ನೇ ಇಸವಿಯಲ್ಲಿ ಮಾನ್ಯ ಕೆಂಗಲ್ ಹನುಮಂತಯ್ಯನವರು ಮುಖ್ಯ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ 6 ಲಕ್ಷ ಕೊಟ್ಟು ಆವತ್ತು ಕುಡಿಯುವ ನೀರಿನ ಯೋಜನೆ-ಯನ್ನು ತಂದಿದ್ದರು. ಅಲ್ಲಿಂದ ಇಲ್ಲಿಯವರೆಗೂ ಕೂಡ ಯಾವುದೇ ಡಿಸ್ಟ್ರಿಬ್ಯೂಟರಿ ಲೈನ್ ಕೂಡ ಬದಲಾಯಿಸಿಲ್ಲ. ಅದು ತುಕ್ಕು ಹಿಡಿದು ನೀರೆಲ್ಲಾ ಸೋರಿ ಹೋಗುತ್ತಿದೆ. 3ನೇ ಹಂತದ ಯೋಜನೆ ಏನು ಇದೆ 96 ಲಕ್ಷಕ್ಕೆ ಮಂಜೂರಾತಿ ಮಾಡಿದ್ದಾರೆ ಅದರ ಜೊತೆಗೆ ಹೆಚ್ಚುವರಿ ಅನುದಾನವನ್ನು ಕೊಟ್ಟು ಆ ಹೊಸ ಡಿಸ್ಟ್ರಿಬ್ಯೂಟರಿ ಲೈನ್ ಅನ್ನು ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ನಮಗೆ ಪುರಸಭೆಯವರು ಕೇವಲ 25 ಸಾವಿರಕ್ಕಿಂತ ಕಡಿಮೆ ಇರುವ ಪಟ್ಟಣ ಅದು ಆದ್ದರಿಂದ ಮ್ಯಾಚಿಂಗ್ ಗ್ರ್ಯಾಂಟ್ ಕೊಡಬೇಕೆಂದು ತಾವೇನು ಹೇಳುತ್ತಿದ್ದೀರಿ, ಇವತ್ತು ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲದೇ ಇರುವುದರಿಂದ ಆರ್ಥಿಕ ಪರಿಸ್ಥಿತಿಯ ದುಸ್ಥಿತಿಯಿಂದ ಸರಕಾರ ಮ್ಯಾಚಿಂಗ್ ಗ್ರ್ಯಾಂಟ್ ಅನ್ನು ಬಿಟ್ಟು 3ನೇ ಹಂತದ ಕಾರ್ಯಕ್ರಮವನ್ನು ರೂಪಿಸಬೇಕೆಂದು ತಮ್ಮ ಮೂಲಕ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಬಿ.ಆರ್. ಯಾವಗಲ್ (ನರಗುಂದ):- ನರಗುಂದ ನಗರ ಕುಡಿಯುವ ನೀರಿನ ಯೋಜನೆ 1989 ರಿಂದ ನಡೆಯುತ್ತಿದೆ. ಮೂಲತಃ 1.56 ಕೋಟಿ ಅಂದಾಜು ಮಾಡಿದ್ದು ಐದೂ-ವರೆ ಕೋಟಿಗೆ ಬಂದಿದೆ. ನರಗುಂದ ಪ್ರದೇಶ ಬ್ರ್ಯಾಕಿಷ್ ಜೋನ್ ಏರಿಯಾದಿಂದ ಕೂಡಿದಂಥಾದ್ದು. ಅಲ್ಲಿ ಸುಮಾರು 4-6 ದಿವಸಕ್ಕೊಮ್ಮೆ ನೀರು ಬಿಡುವ ಪರಿಸ್ಥಿತಿ ಇದೆ. ಬೋರ್‌ವೆಲ್‌ನಲ್ಲಿ ಕೂಡ ಫ್ಲೋರೈಡ್ ಕಂಟೆಂಟ್ ಆಗಿ ಕುಡಿಯಲಿಕ್ಕೆ ಅಯೋಗ್ಯವಾದಂತಹ ನೀರು ಇದೆ. ಇದನ್ನು ಆದಷ್ಟು ಬೇಗನೆ ತಡೆಯಬೇಕೆಂದು ಒತ್ತಾಯ ಮಾಡುತ್ತೇನೆ. ಡಿಸೆಂಬರ್ ಒಳಗಡೆ ಕುಡಿಯುವ ನೀರಿನ ಯೋಜನೆಯನ್ನು ಪೂರೈಸಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಚಂದ್ರಶೇಖರ ನಾಯಕ್:- ಗೋಕಾಕ್ ತಾಲ್ಲೂಕಿನಲ್ಲಿ ಒಂದು ನಗರಸಭೆ ಎರಡು ಪುರಸಭೆಗಳು ಇದ್ದು, ಬನ್ನೂರು ಗ್ರಾಮಕ್ಕೆ ಈಗಾಗಲೇ ಘಟಪ್ರಭಾ ನದಿಯಿಂದ ನೀರು ಸರಬರಾಜು ಆಗುತ್ತಿದ್ದರೂ ಕೂಡ ಅಲ್ಲಿ ನೀರಿನ ಶುದ್ಧೀಕರಣದ ಯಾವುದೇ ವ್ಯವಸ್ಥೆ ಇಲ್ಲ. ಅದಕ್ಕಾಗಿ ರೋಗ

ರುಜಿನಗಳು ಹೆಚ್ಚಾಗುತ್ತಿರುವುದರಿಂದ ಕಡೇ ಪಕ್ಷ ಒಂದು ಆಸ್ಪತ್ರೆಯಾನ್ನಾದರೂ ಮಂಜೂರು ಮಾಡಿ. ಕೂಡಲಗಿ ಗ್ರಾಮಕ್ಕೆ ಈಗಾಗಲೇ 5 ಲಕ್ಷ ರೂ.ಗಳ ಹಣ ತುಂಬಿದೆ. ಘಟಪ್ರಭಾ ನದಿಯಿಂದ ಕೂಡಲಗಿ ಗ್ರಾಮಕ್ಕೆ ನೀರು ಸರಬರಾಜು ಆಗುವ ಸಲುವಾಗಿ 3 ಕೋಟಿ 25 ಲಕ್ಷ ರೂಪಾಯಿಗಳ ಬೇಡಿಕೆ ಇತ್ತು. ಇದರ ಬಗ್ಗೆ ಮನವಿ ಸಲ್ಲಿಸಿದ್ದೇವೆ. ಇದರ ಬಗ್ಗೆ ಮಾನ್ಯ ವೈಜನಾಥ ಪಾಟೀಲರು ಆಶ್ವಾಸನೆ ಕೊಟ್ಟಿದ್ದರು. ಇಲ್ಲಿಯವರೆಗೆ ಆಗಿಲ್ಲ, ಅದು ತೀವ್ರವಾಗಿ ಆಗಬೇಕು.

ಶ್ರೀ ವಿ.ಎಸ್. ಕರಜಗಿ:- ತುಂಗಾಭದ್ರಾ ನದಿಯಿಂದ ರಾಣಿಬೆನ್ನೂರಿಗೆ ಕುಡಿಯುವ ನೀರಿನ ಯೋಜನೆ ಇದ್ದು ಅದು ಸ್ಥಗಿತಗೊಂಡಿದೆ. ಅದಕ್ಕೆ 19 ಕಿಲೋ ಮೀಟರ್ ಪೈಪ್‌ಲೈನ್ ಹಾಕಬೇಕಾಗಿತ್ತು. ಹತ್ತು ಕಿಲೋ ಮೀಟರ್ ಪೈಪ್‌ಲೈನ್ ಹಾಕಿದ್ದು ಇನ್ನು 9 ಕಿಲೋ ಮೀಟರ್ ಪೈಪ್‌ಲೈನ್ ಹಾಕಿಲ್ಲ. ಕುಡಿಯುವ ನೀರಿನ ಈ ಪೈಪ್‌ಲೈನ್ 550 ರೂಪಾಯಿ ಇದ್ದು ಈಗ 1500 ಆಗಿದೆ ಎಂದು ಕಂಟ್ರಾಕ್ಟರ್ ಕೆಲಸ ನಿಲ್ಲಿಸಿದ್ದಾರೆ. ಸರಕಾರದವರು 30 ಪರ್ಸೆಂಟ್ ಕೊಡುತ್ತೇವೆಂದರೂ ಕೂಡ ಆ ಕೆಲಸ ಸ್ಥಗಿತಗೊಂಡಿದೆ. ರಾಣಿಬೆನ್ನೂರಿನವರು ಬಹಳ ನೀರಿನ ಬವಣೆಯಿಂದ ಬಳಲುತ್ತಿದ್ದು ಈ ಬೇಸಿಗೆಯಲ್ಲಿ ಆಗದಿದ್ದರೆ ಬಹಳ ತೊಂದರೆಯಾಗುತ್ತದೆ. ಆದಷ್ಟು ಬೇಗ ಕುಡಿಯುವ ನೀರಿನ ವ್ಯವಸ್ಥೆಯ ಕಾರ್ಯಕ್ರಮವನ್ನು ತೀವ್ರವಾಗಿ ಕೈಗೊಳ್ಳಬೇಕು.

ಶ್ರೀ ಎ. ರಾಮದಾಸ್:- ನಗರ ಪಾಲಿಕೆ ಮತ್ತು ಅಭಿವೃದ್ಧಿ ಪ್ರಾಧಿಕಾರಿಗಳ ಆಡಳಿತವನ್ನು ಚುರುಕುಗೊಳಿಸುವ ದೃಷ್ಟಿಯಿಂದ ಇಂಟರ್ ಕಾರ್ಪೋರೇಷನ್ ಇಂಟರ್ ಮುನಿಸಿಪಾಲಿಟಿ ಇಂಟರ್ ಅಥಾರಿಟಿಗೆ ನೌಕರರುಗಳನ್ನು ವರ್ಗ ಮಾಡುವ ಬಗ್ಗೆ ಸರಕಾರ ಕ್ರಮ ಕೈಗೊಳ್ಳಬೇಕು. ಇದರ ಬಗ್ಗೆ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ?

ಡಾ: ಎಂ.ಪಿ. ಕರ್ಕಿ:- ನಿನ್ನೆ ಪ್ರಶ್ನೋತ್ತರ ಸಮಯದಲ್ಲಿ ಕೆಲವೊಂದು ಕ್ಲಾರಿಫಿಕೇಷನ್ ಕೇಳಲಿಕ್ಕೆ ಪ್ರಯತ್ನ ಪಟ್ಟೆ. ಅದು ಸಾಧ್ಯವಾಗಲಿಲ್ಲ. ಕುಮಟಾ, ಹೊನ್ನಾವರದಲ್ಲಿ ನಲ್ಲಿ ನೀರಿನ ಯೋಜನೆ ವಿಶೇಷವಾಗಿರತಕ್ಕಂತಹ ಯೋಜನೆ, ಇದೊಂದು ಜಂಟೀ ಯೋಜನೆ. ಕೇಂದ್ರ ಹಾಗೂ ರಾಜ್ಯ ಸರಕಾರ ಕೂಡಿ ಮಾಡಿರತಕ್ಕಂತಹ ಯೋಜನೆ. ಇದರಲ್ಲಿ ಕೇಂದ್ರದ ಪಾಲು ಬಹಳ ದೊಡ್ಡದು. ಮೊದಲಿನಿಂದಲೂ ಕೂಡ ರೂರಲ್ ಏರಿಯಾದಲ್ಲಿರತಕ್ಕಂತಹ ಪಟ್ಟಣಗಳಿಗೆ ಉಚಿತವಾಗಿ ಇತ್ತು. ಈಗ ಕೇಂದ್ರ ಸರಕಾರ ರೂರಲ್ ಏರಿಯಾ ಮತ್ತು ಅರ್ಬನ್ ಏರಿಯಾಕ್ಕೆ ಇರುವ ಡೆಫನಿಷನ್ ಏನು ಇದೆ ಅದನ್ನು ಬದಲು ಮಾಡಿದೆ. ಮೊದಲು 20 ಸಾವಿರ ಇತ್ತು. ಈಗ 50 ಸಾವಿರಕ್ಕೆ ತೆಗೆದುಕೊಂಡು ಹೋಗಿದೆ. ಅವರು ಉತ್ತರದಲ್ಲಿ ಹೇಳುತ್ತೇನೆಂದು ಹೇಳಿದರು. ಉತ್ತರ ಬರಲಿಲ್ಲ. ಕೆಲವು ಪುರಸಭೆಗಳಿಗೆ ವಿನಾಯಿತಿ ಕೊಟ್ಟರೇ ವಿನಃ ಈ ಜಂಟಿ ನೀರಿನ ಯೋಜನೆ ಸಮಸ್ಯೆ ಅವರ ಗಮನಕ್ಕೆ ಬರಲಿಲ್ಲವೆಂದು ಅನಿಸುತ್ತದೆ. ಕೇಂದ್ರ ಸರಕಾರವೇನು ಮಾನದಂಡವನ್ನು ಅನುಸರಿಸಿದೆಯೋ ಅದೇ ಮಾನದಂಡವನ್ನು ಇಲ್ಲೂ ಕೂಡ ಅನುಸರಿಸಬೇಕೆಂಬ ಬೇಡಿಕೆಯನ್ನು ಸಚಿವರ ಮುಂದಿಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ತಾವು ಮಾನ್ಯ ಮಂತ್ರಿಗಳನ್ನು ಕೇಳಬೇಕಾಗುತ್ತದೆ. ನಿಜಕ್ಕೂ ನಾಚಿಕೆಯಿಂದ ತಲೆ ತಗ್ಗಿಸಬೇಕಾಗಿದೆ. ಪ್ರತಿಯೊಬ್ಬ ಸದಸ್ಯರೂ ಕೂಡ ಕುಡಿಯುವ ನೀರಿನ ಅಭಾವದ ಬಗ್ಗೆ ಮಾತನಾಡಿದ್ದಾರೆ. 45 ವರ್ಷವಾಯಿತು. ಹಣಕಾಸಿನ ಸಚಿವರು ಇಲ್ಲಿಯೇ ಇದ್ದಾರೆ. ಪ್ರತಿಯೊಬ್ಬ ಸದಸ್ಯರಿಗೂ ಅವಕಾಶ ಕೊಟ್ಟು ಪರೀಕ್ಷೆಯಲ್ಲಿ ಪ್ರಶ್ನೆ ಕೇಳಿದಾಗ ಉತ್ತರ ಕೊಡುವ ರೀತಿಯಲ್ಲಿ ಮಾನ್ಯ ಅಧ್ಯಕ್ಷರು ಒಂದು ಪರೀಕ್ಷೆ ಮಾಡುತ್ತಿದ್ದಾ-ರೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಒಳ್ಳೆಯದನ್ನು ಮಾಡಿದಿರಿ.

ಅಧ್ಯಕ್ಷರು:- ನಿಮ್ಮ ಮಾತನ್ನು ನನ್ನ ಬಾಯಿಗೇಕೆ ಹಾಕುತ್ತೀರಿ? ನಾನೇನೋ ನನಗೆ ತೋಚಿದ ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಖಂಡಿತ ಬೇರೆ ದೃಷ್ಟಿಯಿಂದ ಅಲ್ಲ. ಆ ಕಡೆ ಈ ಕಡೆ ಎಲ್ಲಾ ಸದಸ್ಯರು ಎದ್ದು ನಿಂತು ಕುಡಿಯುವ ನೀರಿನ ಅಭಾವದ ಬಗ್ಗೆ ಕ್ಲಾರಿಫಿಕೇಷನ್ ಕೇಳುವ ಕಾಲದಲ್ಲಿ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಕರ್ನಾಟಕದಲ್ಲಿ ಮಾನ್ಯ ಸಗೀರ್ ಅಹಮದ್‌ರವರು ನಗರಾಭಿವೃದ್ಧಿ ಮಂತ್ರಿಗಳಾಗಿದ್ದಾಗ 1989ರಲ್ಲಿ ರಾಜ್ಯದ ಪಟ್ಟಣ ಹಾಗೂ ನಗರ ಪ್ರದೇಶಗಳಿಗೆ 29 ಕುಡಿಯುವ ನೀರಿನ ಯೋಜನೆ ಮಾಡಿದರು. 800 ಕೋಟಿ ಆಡಳಿತಾತ್ಮಕ ಮಂಜೂರಾತಿಯಾಯಿತು. 6 ವರ್ಷ-ವಾಯಿತು. ಒಂದು ಯೋಜನೆಯನ್ನು ಸಹ ನಾವು ಇವತ್ತಿನವರೆಗೆ ಮಾಡುವುದಕ್ಕಾಗಿಲ್ಲ. ಇವತ್ತು ನೀವು 27 ಲಕ್ಷ ರೂಪಾಯಿಗಳನ್ನು 29 ಯೋಜನೆಗಳಿಗೆ ಬಡ್ಜೆಟ್ಟಿನಲ್ಲಿ ತೆಗೆದು ಇಟ್ಟಿದ್ದೀರಿ. ಒಂದು ಲಕ್ಷ ಆಗಲಿಲ್ಲ. ಬರಗಾಲ ಎದುರಿಸತಕ್ಕಂತಹ ಕಾಲದಲ್ಲಿ ಶುದ್ಧವಾದ ಕುಡಿಯುವ ನೀರು ಕುಡಿಯ-ದಿದ್ದರೆ ಅನೇಕ ರೀತಿಯ ರೋಗರುಜಿನಗಳಾಗುತ್ತವೆ. ಕಾಲರ ಮತ್ತೊಂದನ್ನು ನಾವು ನೋಡುತ್ತಿದ್ದೇವೆ. ಧಾರವಾಡದಲ್ಲಿ 11 ಜನರು ಸತ್ತರು. ನಾನು ಆ ವಿಷಯ ಬಂದಾಗ ಅದಕ್ಕೆ ಬರುತ್ತೇನೆ. ನಗರ ಸಭೆ, ಪುರಸಭೆ ಇವರ್‍ಯಾರೂ ಹಣ ಕಟ್ಟಲು ಅಂದರೆ 15 ಪರ್ಸೆಂಟ್ ಕಟ್ಟುವ ಸ್ಥಿತಿಯಲ್ಲಿ ಇಲ್ಲ. ಯಾವುದೇ ರೀತಿಯಿಂದ ಇದು ಕಾರ್ಯರೂಪಕ್ಕೆ ಬರುವುದಿಲ್ಲ. ಎಲ್.ಐ.ಸಿ.ಯಿಂದ ತಾವು ಹಣವನ್ನು ತೆಗೆದು-ಕೊಂಡು ಈ ಕುಡಿಯುವ ನೀರಿನ ಸಮಸ್ಯೆಯನ್ನೇನು ನಮ್ಮ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ ಇದನ್ನು ಬಗೆಹರಿಸುವುದಕ್ಕೆ ನಿಮ್ಮ ಕಾಲದಲ್ಲಾದರೂ ಹಣಕಾಸು ಸಚಿವರು ಹೆಚ್ಚಿನ ಹಣ ಕೊಟ್ಟು ತಾವು ಮಾಡಿಕೊಟ್ಟರೆ ತಾವು ಹಣಕಾಸಿನ ಇಲಾಖೆಯನ್ನು ವಹಿಸಿಕೊಂಡದ್ದಕ್ಕೆ ಇಷ್ಟು ಹೊತ್ತು ಕ್ಲಾರಿಫಿಕೇಷನ್ ಕೇಳಿದ್ದಕ್ಕೆ ಸಾರ್ಥಕವಾಗುತ್ತದೆ.

ಶ್ರೀ ಯು.ಆರ್ ಸಭಾಪತಿ (ಉಡುಪಿ):- ಅಭಿವೃದ್ಧಿ ಪಥದಲ್ಲಿ ಇರತಕ್ಕಂತಹ ನಗರಸಭೆಗಳನ್ನು ಗುರುತಿಸಿ ಕರ್ನಾಟಕ ರಾಜ್ಯದಲ್ಲಿ 3 ನಗರಸಭೆಗಳನ್ನು ಹುಡ್ಕೋ ಸಂಸ್ಥೆ ಗುರುತಿಸಿದೆ. ಅದರಲ್ಲಿ ಇಂಡೋ ಯು.ಎಸ್. ಏಡ್ ಕಾರ್ಯಕ್ರಮದಲ್ಲಿ ಫೈರ್ (FIRE) ಅಡಿಯಲ್ಲಿ (ಫೈನಾನ್ಷಿಯಲ್ ಇನ್ಸ್‌ಟಿಟ್ಯೂಷನ್ ರಿಫಾರ್ಮ್ ಅಂಡ್ ಎಕ್ಸ್‌ಪ್ಯಾನ್ಷನ್ ಕಾರ್ಯಕ್ರಮದಲ್ಲಿ) ಉಡುಪಿ, ಗುಲ್ಬರ್ಗ, ದೊಡ್ಡ ಬಳ್ಳಾಪುರ ಸೇರಿದೆ. ಉಡುಪಿಗೆ 150 ಕೋಟಿಯ ಸಾಲ ಹಾಗೂ ಸಹಾಯಧನ ಮತ್ತು

ಸಾರ್ವಜನಿಕರಿಂದ ದೇಣಿಗೆ ರೂಪದಲ್ಲಿ ಕೊಡತಕ್ಕಂತಹ ಯೋಜನೆ ಬಗ್ಗೆ ಹುಡ್ಕೋ ಅಧಿಕಾರಿಗಳು ಈಗಾಗಲೇ ಪ್ರಕಟಿಸಿದ್ದಾರೆ, ಅದರ ಬಗ್ಗೆ ತಾವೇನೂ ಪ್ರಸ್ತಾವನೆ ಮಾಡಲಿಲ್ಲ. ತಾವು ಮುತುವರ್ಜಿ ವಹಿಸಿದರೆ ಈ ಯೋಜನೆಯನ್ನು ಉಡುಪಿ ನಗರಸಭೆಗೆ ಅಳವಡಿಸಲಿಕ್ಕೆ ಅವಕಾಶವಾಗುತ್ತದೆ. ಸ್ವರ್ಣ ನದಿಯ ಎರಡನೇ ಹಂತದ ಯೋಜನೆ ಹಾಗೂ ಉಡುಪಿಯ ಒಳಚರಂಡಿ ವ್ಯವಸ್ಥೆ ಬಗ್ಗೆ ಒಂದು ಹೊಸ ಯೋಜನೆಯನ್ನು ರೂಪಿಸುವುದರೊಂದಿಗೆ ವಾಣಿಜ್ಯ ಸಂಕೀರ್ಣಗಳು ಹಾಗೂ ಇನ್ನಿತರ ಪಾರ್ಕು ಡೆವಲಪ್‌ಮೆಂಟ್‌ಗಳೆಲ್ಲಾ ಇದರಲ್ಲಿ ಸೇರಿವೆ. ಅನೇಕ ನಗರಸಭೆಗಳು ನೀರಿನ ದರ ಏರಿಸ-ಬೇಕೆಂದು ನಿರ್ಣಯ ಮಾಡಿದೆ. ವಾಟರ್ ಸಪ್ಲೈ ಬೋರ್ಡಿಗೆ 90 ಲಕ್ಷ ರೂಪಾಯಿ ನಮ್ಮ ಉಡುಪಿ ನಗರಸಭೆ ಕೊಡಬೇಕಾಗಿದೆ. ನೀರಿನ ದರ 4 ರೂಪಾಯಿಗೆ ಸಾವಿರ ಲೀಟರ್ ಇದೆ. ಇದನ್ನು 8 ರೂಪಾಯಿಗೆ ಏರಿಸಬೇಕೆಂದು ಇದೆ. 50 ಪೈಸೆ ಪ್ರಕಾರ ವರ್ಷಂಪ್ರತಿ ಏರಿಸುತ್ತಾ ಬಂದಿದ್ದರೆ ಅಷ್ಟು ದೊಡ್ಡ ಭಾರ ಆಗುತ್ತಿರಲಿಲ್ಲ. ಹೀಗಾಗಿ ಏರಬೇಕೆಂದು ನಿರ್ಣಯ ಮಾಡಿ ಕಳುಹಿಸಿದ್ದನ್ನು ಸರಕಾರ ಸ್ಥಗಿತಗೊಳಿಸಿ ತಡೆಯಾಜ್ಞೆ ಕೊಟ್ಟಿದೆ. ಒಂದು ಕಡೆಯಿಂದ ತಾವು ನಗರಸಭೆಗೆ ಹಣ ಬರುತ್ತಿಲ್ಲವೆಂದು ಹೇಳುತ್ತೀರಿ. ಮತ್ತೊಂದು ಕಡೆ ನೀರಿಗೆ ತೆರಿಗೆ ಹಾಕಲಿಕ್ಕೂ ನೀವು ಬಿಡುತ್ತಿಲ್ಲ. ವರ್ಷ ವರ್ಷಕ್ಕೆ 50 ಪೈಸೆ ಏರಿಸಿದರೆ ಯಾರಿಗೂ ಅದು ಗೊತ್ತಾಗುವುದಿಲ್ಲ. ಒಮ್ಮೆಲೆ 4 ರೂಪಾಯಿ ಏರಿಸುವಂತಹ ಪರಿಸ್ಥಿತಿಯನ್ನು ಒಡ್ಡಬಾರದು. ಟೌನ್ ಪ್ಲಾನಿಂಗ್ ಅಥಾರಿಟಿಯಲ್ಲಿ ಡೆವಲಪ್‌ಮೆಂಟ್ ಫೀಸ್ ಎಂದು ಕಲೆಕ್ಟ್ ಮಾಡಿದ್ದೀರಿ. ಅದನ್ನು ಸುಸೂತ್ರ ರೀತಿಯಲ್ಲಿ ವಿತರಣೆ ಮಾಡುತ್ತಿಲ್ಲ. ನಮ್ಮಲ್ಲಿ ಟೌನ್ ಪ್ಲಾನಿಂಗ್ ಅಥಾರಿಟಿಯಲ್ಲಿ 85ರಿಂದ 90 ಲಕ್ಷ ರೂಪಾಯಿ ಹಣ ಇದೆ. ಅದನ್ನು ನೀರು ಸರಬರಾಜು ಯೋಜನೆಗೆ ಒಳಚರಂಡಿ ವ್ಯವಸ್ಥೆಗೆ ಆ ಮೇನ್‌ಟೆನೆನ್ಸ್ ಚಾರ್ಜಿಗಾದರೂ ಖರ್ಚು ಮಾಡಲಿಕ್ಕೆ ನೀವು ಬಿಟ್ಟರೆ ಅದಕ್ಕೆ ಬೇಕಾಗುವ ಕಾರ್ಯಕ್ರಮವನ್ನು ರೂಪಿಸಲಿಕ್ಕೆ ಆಗುತ್ತದೆ. ತಾವು ಇದಕ್ಕೆ ಸ್ಪಷ್ಟೀಕರಣ ಕೊಡಬೇಕು.

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಪ್ರಮುಖವಾದಂತಹ ವಿಷಯ-ವನ್ನು ಪ್ರಸ್ತಾಪ ಮಾಡಿದ್ದಾರೆ. ಸಾಂಪ್ರದಾಯಿಕವಾಗಿ ಏನೋ ಉತ್ತರ ಹೇಳಬೇಕೆಂದು ಹೇಳಿ ಮತ್ತೆ ಸದಸ್ಯರು ಎದ್ದು ನಿಂತುಕೊಳ್ಳುವುದಕ್ಕಿಂತ, ತಾವೆಲ್ಲಾ ನೋಟ್ ಮಾಡಿಕೊಂಡಿದ್ದೀರಿ ಅದರ ಆಧಾರದ ಮೇಲೆ ಕ್ರಮ ಕೈಗೊಳ್ಳಿ. ನಿಜವಾಗಲೂ ಕೂಡ ಈ ಇಲಾಖೆಯನ್ನು ನೀವು ವಹಿಸಿಕೊಂಡ ದಿವಸದಿಂದ ಇಲ್ಲಿ ಕೊಡುತ್ತಿರತಕ್ಕಂತಹ ಉತ್ತರಗಳನ್ನೆಲ್ಲಾ ನೋಡಿದರೆ ನಮಗೆ ಬಹಳ ಸಂತೋಷವಾಗಿದೆ. ತಾವು ದಕ್ಷತೆಯಿಂದ ಕೆಲಸ ಮಾಡುತ್ತಿದ್ದೀರಿ ಅದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇವೆ. ಯಾವ್ಯಾವ ಸದಸ್ಯ-ರುಗಳು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಈ ಅಧಿವೇಶನ ಮುಗಿದ ನಂತರ ಅವರನ್ನೆಲ್ಲಾ ಕರೆಯಿಸಿ ನಿಮ್ಮ ಅಧಿಕಾರಿಗಳನ್ನು ಕರೆಯಿಸಿ ಅವರಿಗೆ ಬೇಕಾಗಿರತಕ್ಕಂತಹ ಪರಿಹಾರ-ವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆಂಬುದರ ಬಗ್ಗೆ ನೀವು ಅವರ ಎದುರಿನಲ್ಲೇ ಮಾತನಾಡಿದರೆ ಅವರು ಇಲ್ಲಿ ಪ್ರಸ್ತಾಪ ಮಾಡಿದ್ದಕ್ಕೂ ಸಾರ್ಥಕವಾಗುತ್ತದೆ. ಸಾಂಪ್ರದಾಯಿಕವಾಗಿ ಉತ್ತರ ಹೇಳು-ವುದು ಇವರು ಎದ್ದು ನಿಲ್ಲುವುದು ಬೇಡ. ಇದನ್ನು ನೀವು ಮಾಡುತ್ತೀರಿ ಎನ್ನುವ ವಿಶ್ವಾಸ ಇದೆ,

ಅದನ್ನು ಮಾಡಬೇಕೆಂದು ವಿನಂತಿಸುತ್ತೇನೆ. ಈಗ 96-97ನೇ ಸಾಲಿನ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"ದಿನಾಂಕ 31-3-97ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 10, 11, 14, 23, 24, 25, 26, 28, 29, 30, 31, 32, 35, 36, 37, 38, 40, 47, ಮತ್ತು 51. ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಿಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುತ್ತದೆ."

ಪ್ರಸ್ತಾಪದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು. ಪ್ರಸ್ತಾಪದ ವಿರೋಧ–ವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.

Sri B.S. YEDIYURAPPA:- Sir, I Press for Divison.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಅಧ್ಯಕ್ಷರೇ, . . .

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದರಲ್ಲೇನೂ ಪಾಯಿಂಟ್ ಆಫ್ ಆರ್ಡರ್ ಇಲ್ಲ.

(ಗೊಂದಲ)

Sri M.C. NANAIAH:- I am not raising any Point of Order.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, we have pressed for the Division. . . ಡಿವಿಜನ್‌ಗೆ ಪ್ರೆಸ್ ಮಾಡಿದಾಗ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ.

(ಗೊಂದಲ)

Mr. SPEAKER:- What do you want to say? ಅವರೇನು ಹೇಳುತ್ತಾರೆ ಕೇಳುತ್ತೇನೆ. I am not going to deviate from the Procedure.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಹಂತದಲ್ಲಿ ಅವರೇನು ಹೇಳುತ್ತಾರೆ ಅದಕ್ಕೆ ಅಲೋ ಮಾಡುವುದಕ್ಕೆ ಬರುವುದಿಲ್ಲ. ವೋಟಿಂಗ್ ಹಂತದಲ್ಲಿ ನಾನು ಡಿವಿಜನ್‌ಗೆ ಪ್ರೆಸ್ ಮಾಡಿದ ಮೇಲೆ ಅವರು ಮಾತನಾಡುವ ಪ್ರಶ್ನೆ ಬರುವುದಿಲ್ಲ.

ಶ್ರೀ ಎಂ.ಸಿ. ನಾಣಯ್ಯ:- ಈ ಸದನದ ಸಂಪ್ರದಾಯವನ್ನೇ ನಾವು ಎತ್ತಿಕೊಂಡು ಬಂದಾಗ ಮುಂಗಡ ಪತ್ರದ ವಿವಿಧ ಇಲಾಖೆಗಳ ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ಚರ್ಚೆ ನಡೆದಾದ ಮೇಲೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ರಾಜ್ಯದ ಜನರಿಗೆ ಸದನ ಪ್ರಾರಂಭವಾದ ದಿನದಿಂದ ಆಡಳಿತ ಪಕ್ಷ ಸದನದ ಕಾರ್ಯಕಲಾಪದಲ್ಲಿ ಎಷ್ಟು ಆಸಕ್ತಿ ವಹಿಸಿದೆ ಎಂದು ಗೊತ್ತು. ಸದನ ಪ್ರಾರಂಭ-ವಾದಾಗಿನಿಂದ ಇವತ್ತಿನವರೆಗೆ ಇವರನ್ನು ಭಿಕ್ಷೆ ಮಾಡುವುದು ಬಂದು ಇಲ್ಲಿ ಕುಳಿತುಕೊಳ್ಳಿ ಸದನ ನಡೆಸಿ. ವಿರೋಧ ಪಕ್ಷದಲ್ಲಿ ಕುಳಿತು ಸದನ ನಡೆಸುತ್ತಿದ್ದೇವೆ. ಈಗಲಾದರೂ ಸೀರಿಯಸ್‌ನೆಸ್ ಇರ-ಬೇಕಲ್ಲಾ ದಯಮಾಡಿ ಮಾಡಿ. ಅದಕ್ಕೆ ಉತ್ತರ ಕೊಡುವುದೇನು ಇದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದಾಗಲೀ. ಡಿಫೀಟ್ ಆದರೆ ಮತ್ತೆ ಪಾಸ್ ಮಾಡೋಣ. ಬೇರೆಯವರಿಗೂ ಗೊತ್ತಾಗಲಿ.

ಅಧ್ಯಕ್ಷರು:- ನಾನು ಇನ್ನೊಂದು ಸಲ ಮತಕ್ಕೆ ಹಾಕುತ್ತೇನೆ. ನೀವು ಪ್ರೆಸ್ ಮಾಡಿದರೆ ಡಿವಿಜನ್ ಬೆಲ್ ಪ್ರೆಸ್ ಮಾಡಬೇಕಾಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ :-ಈ ಸದನದ ಇತಿಹಾಸದಲ್ಲಿ. . .

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ರಾಜ್ಯದ ಜನರ ಮುಂದೆ ಕ್ಷಮಾಪಣೆ ಕೇಳಲಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಡಿವಿಜನ್ ಎಂದ ಮೇಲೆ ಮತ್ತೆ ಚರ್ಚೆ ಮಾಡುವುದಕ್ಕೆ ಹೇಗೆ ಸಾಧ್ಯ? ಈಗ ಅವರು ಮನೆಯಲ್ಲಿರುವವರನ್ನು ಕರೆದುಕೊಂಡು ಬಂದು ಕೂರಿಸಲು ಆಗುತ್ತ-ದೆಯೇ? ಇದೊಂದು ಪದ್ಧತಿ ಇದೆ. ನಾವೇನು ಸತ್ಸಂಪ್ರದಾಯಗಳನ್ನು ಪಾಲನೆ ಮಾಡಿಕೊಂಡು ಬಂದಿದ್ದೇವೆ, ಅದಕ್ಕೆ ಧಕ್ಕೆ ಬರುತ್ತದೆ.

Mr. SPEAKER:- Mr. Nanaiah, you will have to come to my rescue. I am in a fix. The conduct of the chair . . .

ಶ್ರೀ ಎಂ.ಸಿ. ನಾಣಯ್ಯ:- ನಾನು ಒಂದು ವಿಚಾರ ಹೇಳುತ್ತಿದ್ದೇನೆ ಸಾರ್. ನಾವೂ ಕೂಡ ಈ ಸದನದಲ್ಲಿ ಕೆಲಸ ಮಾಡಿದ್ದೇವೆ. ಈ ಸದನದ ಇತಿಹಾಸದಲ್ಲಿ . . .

Mr. SPEAKER:- That is a different thing.

ಶ್ರೀ ಎಂ.ಸಿ. ನಾಣಯ್ಯ:- ಬೇಡಿಕೆಗಳನ್ನು ಚರ್ಚೆ ಮಾಡುತ್ತೇವೆ; ಕಡೆಗೆ ಉತ್ತರ ಕೇಳುತ್ತೇವೆ.

Mr. SPEAKER:- Kindly understand my difficulty. It is the right and prerogative of the members. . .

ಶ್ರೀ ಎಂ.ಸಿ. ನಾಣಯ್ಯ:- ಅಂಥ ಸಂದರ್ಭ ಬಂದಿಲ್ಲ. ಇಲ್ಲಿಯವರೆಗೆ ನಾನು ಹೇಳುತ್ತೇನೆ. ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ಯಾರೂ ಡಿವಿಜನ್‌ಗೆ ಪ್ರೆಸ್ ಮಾಡಿ ಕೇಳಿರತಕ್ಕದ್ದು ಇಲ್ಲ.

Mr. SPEAKER:- Kindly understand my difficulty. It is the right and Prerogative of the members.

ಶ್ರೀ ಎಂ.ಸಿ. ನಾಣಯ್ಯ:- ಒಪ್ಪಿಕೊಳ್ಳುತ್ತೇನೆ. ಬಹುಶಃ ಇದು ನಾವು ಈ ಸದನದಲ್ಲಿ ಹಾಕಿ-ಕೊಟ್ಟಿರತಕ್ಕ ಸಂಪ್ರದಾಯವೇ? ನಾವು ಈ ಸದನದಲ್ಲಿ ಹಾಕಿಕೊಂಡಿರತಕ್ಕ ಸಂಪ್ರದಾಯದ ಅನು-ಗುಣವಾಗಿ ಮಾಡುತ್ತಾ ಇರತಕ್ಕದ್ದೇ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಇವತ್ತು ಅಜೀರ್ಣ ಆಗುವಷ್ಟು ಬಹುಮತ ಇದ್ದಾಗ ನೀವೇನು ಬೇಕಾದರೂ ದರ್ಬಾರು ನಡೆಸಬಹುದಾಗಿತ್ತು. ಸರಿ ಸಮಾನವಾಗಿ ವಿರೋಧ ಪಕ್ಷ ಇದ್ದಾಗ ಆ ರೀತಿ ನಡೆದುಕೊಳ್ಳಬೇಕಾಗುತ್ತದೆ. ಆ ಒಂದು ಕಳಕಳಿ ನಿಮಗೆ ಇರಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಕೋರಂ ಮಾಡುವುದಕ್ಕೂ ನಾವು ರಿಕ್ವೆಸ್ಟ್ ಮಾಡಿ ಕೊಳ್ಳಬೇಕು. ನಿಮ್ಮ ಡಿಮ್ಯಾಂಡ್ ಪಾಸ್ ಮಾಡುವುದಕ್ಕೂ ನಾವು ರಿಕ್ವೆಸ್ಟ್ ಮಾಡಿ ಕೊಳ್ಳಬೇಕು. ಅಂದರೆ you think that it is our duty to cooperate and it is not your duty to present in the House.

ಶ್ರೀ ಯು.ಆರ್. ಸಭಾಪತಿ:- ಎಷ್ಟು ದಿವಸದಿಂದ ನಾವು ಹೇಳುತ್ತಿದ್ದೇವೆ ನಿಮಗೆ. ಈ ಹೊತ್ತಿ-ಗಾದರೂ ಸಚಿವರನ್ನು ಕರೆಸುವುದಕ್ಕೆ ಆಗುವುದಿಲ್ಲ. ನಮಗೆ ಡಿಸಿಪ್ಲಿನ್ ಬಗ್ಗೆ ಹೇಳುತ್ತೀರಿ. ನಿಮಗೆ ಡಿಸಿ-ಪ್ಲಿನ್ ಬೇಡವೇ? ನಿಮಗೆ ಡಿಸಿಪ್ಲಿನ್ ಇದೆಯೋ?

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ದಯಮಾಡಿ, ಆ ಛೇರ್‌ನಲ್ಲಿ ಕುಳಿತಾಗ ಕೆಲವು ಸತ್ಸಂಪ್ರದಾಯಗಳನ್ನು ಅನುಸರಿಸಬೇಕು.

Mr. SPEAKER:- My difficulty you should understand.

ಶ್ರೀ ಬಿ.ಎಸ್. ಯಡಿಯೂರಪ್ಪ:- ಆ ಛೇರ್‌ಗೆ ಅಪಚಾರ ಮಾಡಬಾರದು ಎಂದು ನನ್ನ ವಿನಂತಿ.

ಅಧ್ಯಕ್ಷರು:- ನಾನು ಅಪಚಾರ ಮಾಡುವುದಿಲ್ಲ. ನನ್ನಿಂದ ಸದನ ಏನು ನಿರೀಕ್ಷೆ ಮಾಡುತ್ತದೆ, ಅದರಂತೆ ನಾನು ನಡೆದುಕೊಳ್ಳುತ್ತೇನೆಯೇ ಹೊರತು I will not deviate from the procedure, let me assure the House.

ಶ್ರೀ ವಾಟಾಳ್ ನಾಗರಾಜ್:- ಇನ್ನು ತಡ ಮಾಡುವ ಬದಲು ಮತದಾನಕ್ಕೆ ಹಾಕುವುದು ಒಳ್ಳೆಯದು. ತಡ ಮಾಡುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್:- ಸದನ ಯಾವ ರೀತಿ ನಡೆಯುತ್ತಿದೆ, ಸರ್ಕಾರೀ ಕಛೇರಿಗಳು ಕೂಡ ಅದೇ ರೀತಿ ನಡೆಯುತ್ತಿದೆ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಸಭಾಧ್ಯಕ್ಷರೇ, ನಾನು ಅವರ ಅಧಿಕಾರವನ್ನು ಪ್ರಶ್ನೆ ಮಾಡು- ವುದಿಲ್ಲ. ಆದರೆ ಮುಂಗಡ ಪತ್ರಕ್ಕೆ ಸಂಬಂಧಪಟ್ಟಹಾಗೆ ಬೇಡಿಕೆಗಳ ಮೇಲೆ ಚರ್ಚೆ ಬಂದಾಗ. . .

ಶ್ರೀ ವಾಟಾಳ್ ನಾಗರಾಜ್:- ಅನೇಕ ಬಾರಿ ಇದೇ ರೀತಿ ವರ್ತನೆ ಮಾಡಿದ್ದಾರೆ. ಸರ್ಕಾರ ತನ್ನ ನೀತಿಯಲ್ಲಿ ಬದಲಾವಣೆ ಆಗಿಲ್ಲ. ಈ ಸದನವನ್ನು ಬೇಜವಾಬ್ದಾರಿಯಿಂದ ಕಾಣುತ್ತಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ:- ಸರ್ಕಾರದಿಂದ ಅದಕ್ಕೆ ಬೇಕಾಗಿರತಕ್ಕಂಥಹ ಕ್ಲಾರಿಫಿಕೇಷನ್ ಕೇಳಿ ಆದ ಮೇಲೆ ಬಹುಶಃ ಈ ಸದನದ ಇತಿಹಾಸದಲ್ಲಿ ಇದುವರೆಗೆ ಮತಕ್ಕೆ ಹಾಕುವುದು ನಡೆದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಅಪೋಸಿಷನ್ ಪಾರ್ಟಿ ಲೀಡರ್ ಆಗಿ ಎದ್ದು ನಿಂತು ಕೊಂಡು I Press for division ಎಂದ ಮೇಲೆ ಒಂದು ಕ್ಷಣವೂ ಸಹ ನೀವು ಅವಕಾಶ ಕೊಡಬಾರದು.

Mr. SPEAKER:- My conscience pricks. Please understand my predicament.

Sri M.C. NANAIAH:- It is not a good precedent. Even in the House of Commons, it has never happened. Never in any Legislature, not even in Parliament, it has happened.

ಅಧ್ಯಕ್ಷರು:- ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ. ಬೈರೇಗೌಡರೇ, ಕುಳಿತುಕೊಳ್ಳಿ.

ಶ್ರೀ ಎಂ.ಸಿ. ನಾಣಯ್ಯ:- ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು:- ಒಂದು ನಿಮಿಷ ನಾನು ಹೇಳುವುದಕ್ಕಾದರೂ ಅವಕಾಶ ಕೊಡಿ. Whether it is a good precedent or a bad precedent, it is for the members who have raised that. My difficulty is, members have asserted their right. They are asking for a division. What am I to do.

ಶ್ರೀ ಎಂ.ಸಿ. ನಾಣಯ್ಯ:- ಸಾರ್, ನಾನು ಅವರಿಗೆ ಇನ್ನೂ ಕೂಡ ಹೇಳುತ್ತಿದ್ದೇನೆ.

Mr. SPEAKER:- By sitting in this Chair, I cannot commit any mistake.

ಶ್ರೀ ಶ್ರೀನಿವಾಸ್:- ಸಾರ್, ಇದರಲ್ಲಿ ರಾಜಿ ಏನು ಇದೆ?

Sri M.C. NANAIAH:- I am requesting through you, to the Leader of the Opposition. . . Let us not break the convention.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಒಂದು ಸಾರಿ ಈ ದೇಶದ ರಾಜ್ಯದ ಜನತೆಗೆ ಗೊತ್ತಾಗಲಿ. ಇವರು ಜವಾಬ್ದಾರಿಯಿಂದ ಇದ್ದಾರೆಂಬುದು ಗೊತ್ತಾಗಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಉದ್ದೇಶ ಪೂರ್ವಕವಾಗಿ ಸದಸ್ಯರನ್ನು ಕರೆಸುವುದಕ್ಕೆ ಕಾಲ-ವ್ಯಯ ಮಾಡುತ್ತಿದ್ದಾರೆ.

Mr. SPEAKER:- Then alright, I will put the Division Bell.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮತದಾನಕ್ಕೆ ಅವಕಾಶ ಮಾಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಡಿಲೇ ಮಾಡುವುದಕ್ಕೆ ಬಿಡುವುದಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಇದು ಜನಕ್ಕೆ ಗೊತ್ತಾಗಬೇಕು.

(ಗೊಂದಲ)

Sri M.C. NANAIAH: Again I appeal to the hon. members. ನಾನು ನಿಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ ಸಭಾಧ್ಯಕ್ಷರ ಮುಖಾಂತರ ತಮಗೆ ಈ ಸದನ ಅದರಲ್ಲೂ ಮುಂಗಡ ಪತ್ರಕ್ಕೆ ಬೇಡಿಕೆಗಳಿಗೆ ಸಂಬಂಧಪಟ್ಟಹಾಗೆ, ಮನಿ ಬಿಲ್‌ಗೆ ಸಂಬಂಧಪಟ್ಟ ಹಾಗೆ ನಾನು ಹೇಳುತ್ತೇನೆ. ಅದನ್ನು ಯಾವಾಗಲೂ ಕೂಡ ಡಿವಿಜನ್‌ಗೆ ಕೇಳಿರತಕ್ಕ ಸಂಪ್ರದಾಯ ಇಲ್ಲ.

ಶ್ರೀ ಎಂ. ಶ್ರೀನಿವಾಸ್:- ನಾವು ಮಾಡುತ್ತೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಸದನದಲ್ಲಿ ಮಂತ್ರಿಗಳು, ಶಾಸಕರು. . . ಇವರುಗಳ ಬೇಜವಾಬ್ದಾರಿತನ ಜನತೆಗೆ ಗೊತ್ತಾಗಬೇಕು.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ:- ಬೇಡಿಕೆಗಳ ಮೇಲೆ ಡಿವಿಜನ್ ಬೇಕಾಗಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಸನ್ಮಾನ್ಯ ಅಧ್ಯಕ್ಷರೇ, ಯಾವತ್ತೂ ನಡೆದಿಲ್ಲ ಎಂದು ಹೇಳುತ್ತಿ-ದ್ದಾರೆ. ತಮ್ಮಲ್ಲಿ ನಾನು ಮನವಿ ಮಾಡುತ್ತಿದ್ದೇನೆ ನೀವು ತೀರ್ಪು ಕೊಡಿ. ತಮ್ಮ ತೀರ್ಪಿಗೆ ನಾವು ಮನ್ನಣೆ ಕೊಡುತ್ತೇವೆ. ತಮ್ಮ ತೀರ್ಪನ್ನು ನಾವು ಒಪ್ಪುತ್ತೇವೆ. ಮತಕ್ಕೆ ಹಾಕಿ.

(ಗೊಂದಲ)

ಅಧ್ಯಕ್ಷರು:- ಮತಕ್ಕೆ ಹಾಕೋಣ.

ಶ್ರೀ ವಾಟಾಳ್ ನಾಗರಾಜ್:- ಸಾರ್, ಇನ್ನು ಕಾಲ ಕಳೆಯುವುದು ಬೇಕಾಗಿಲ್ಲ. ಅವರು ಸದಸ್ಯರನ್ನು ಸೇರಿಸುತ್ತಿದ್ದಾರೆ. ದಯಮಾಡಿ ಅದಕ್ಕೆ ಒಂದು ಕಾಲವನ್ನು ನಿಗದಿ ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನಿಯಮಾವಳಿ ಪ್ರಕಾರ ಮೊದಲು ವಾಯ್ಸ್ ಓಟು. . .

ಶ್ರೀ ಎಂ. ಶ್ರೀನಿವಾಸ್:- ನಮ್ಮ ನಾಯಕರು ಹೇಳಿದ್ದಾರೆ, ಮತಕ್ಕೆ ಹಾಕಿ ಸ್ವಾಮಿ. ನಿಮ್ಮ ಹುಳುಕು ಇದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಅದು ನಿಮ್ಮ ಹತ್ತಿರವೂ ಇದೆ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ:- ಸಾರ್, ಮಂತ್ರಿಗಳ ಮನೆಗೆ ಫೋನ್ ಮಾಡುತ್ತಿದ್ದಾರೆ ದಯ–ವಿಟ್ಟು ಬೇಗ ಮತಕ್ಕೆ ಹಾಕಿ.

Mr. SPEAKER:- I won't give room for all that. You have been watching.

ಶ್ರೀ ವಾಟಾಳ್ ನಾಗರಾಜ್:- ಐದು ನಿಮಿಷ ದಯಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಆಗಲೇ 7-8 ನಿಮಿಷ ಆಗಿದೆ.

ಆಧ್ಯಕರು:- ದಯಮಾಡಿ ತಾವು ಕುಳಿತುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ತಾವು ಕಾಲಾವಕಾಶ ಕೊಟ್ಟರೆ. . .

ಅಧ್ಯಕ್ಷರು:- ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಈಗಾಗಲೇ ಐದು ನಿಮಿಷ ಆಗಿ ಹೋಯಿತು.

ಶ್ರೀ ಯು.ಆರ್. ಸಭಾಪತಿ:- ಕಾಲಾವಕಾಶ ಸಿಕ್ಕುವುದರಿಂದ ಅವರಿಗೆ ರಕ್ಷಣೆ ಸಿಗುತ್ತದೆ.

ಅಧ್ಯಕ್ಷರು:- ನಮಗೆ ವಾಟಾಳ್‌ರ ವಿಚಾರ ಅರ್ಥ ಆಗುವುದಿಲ್ಲ. ಕೊಡಬೇಡಿ ಎಂದು ಹೇಳು-ತ್ತಾರೆ, ಹೀಗೆ ಹೀಗೆ ಅನ್ನುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಹೀಗೆ ಮಾಡಿದರೆ ಅದು ಸರಿ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾವು ಸದನದಲ್ಲಿ ಇದನ್ನು ತುಂಬಾ ಹಗುರವಾಗಿ ತೆಗೆದು-ಕೊಳ್ಳುತ್ತಿರುವುದರಿಂದ ಅವರು ಸೀರಿಯಸ್ ಆಗಿಲ್ಲ. ಆದು ಆಗಬಾರದು. ಅವರು ಮುಂದೆ ಈ ಸದನ ದಲ್ಲಿ ಬಿಗಿಯಾಗಿ ನಡೆದುಕೊಳ್ಳಬೇಕು. ವಿರೋಧ ಪಕ್ಷವನ್ನು ಹಗುರವಾಗಿ ತೆಗೆದು ಕೊಳ್ಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಈ ಸನ್ನಿವೇಶದಲ್ಲಿ ನನ್ನ ಕರ್ತವ್ಯ. . . .

ಶ್ರೀ ಎಂ. ಶ್ರೀನಿವಾಸ್:- ಮಂತ್ರಿಮಂಡಲವನ್ನು ಹೇಗೆ ನಡೆಸುತ್ತಾರೆ ಎಂದು ಗೊತ್ತಾಗುತ್ತಿದೆ.

(ಗೊಂದಲ)

ಅಧ್ಯಕ್ಷರು:- ಈ ಸನ್ನಿವೇಶದಲ್ಲಿ ನನ್ನ ಕರ್ತವ್ಯ ಮತ್ತೊಮ್ಮ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಅವರು ಡಿವಿಜನ್‌ಗೆ ಪ್ರೆಸ್ ಮಾಡಿದರೆ ನಾನು ಡಿವಿಜನ್ ಬೆಲ್ ಹಾಕುತ್ತೇನೆ. ಡಿವಿಜನ್ ಬೆಲ್ ಹಾಕಿದ ಮೇಲೆ ಎರಡು ನಿಮಿಷ ಕಾಲಾವಕಾಶ ಇರುತ್ತದೆ. ಒಂದು ಸಲ ಬೆಲ್ ಕ್ಲೋಸ್ ಮಾಡಿದ ಮೇಲೆ ಯಾರಿಗೂ ಒಳಗೆ ಬರುವುದಕ್ಕೆ ಅವಕಾಶ ಇಲ್ಲ. ನಾನೇನೂ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಎಂ.ಸಿ. ನಾಣಯ್ಯ:- ಸಾರ್, ಈಗ ಏನು ವಿಚಾರ ಎಂದರೆ. . .

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ, ಇನ್ನು ಸಂಸದೀಯ ಸಚಿವರ ವ್ಯಾಪ್ತಿ ಬೇಕಾಗಿಲ್ಲ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್:- 15 ಜನ ಮಂತ್ರಿಗಳು ಇದ್ದೀರಿ. . .

(ಗೊಂದಲ)

ಅಧ್ಯಕ್ಷರು:- ದಯಮಾಡಿ, ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ:- ಮೊದಲು ವಾಯ್ಸ್ ಓಟು ಮಾಡುವ ಪದ್ಧತಿ ಇದೆ.

ಶ್ರೀ ಎಂ.ಸಿ. ನಾಣಯ್ಯ:- ನಾನು ಈಗ ಹೇಳುತ್ತಾ ಇರತಕ್ಕದ್ದು ಇಷ್ಟೆ, ನಾವು ಕೆಲವು ಬಹಳ ಒಳ್ಳೆಯ ಸಂಪ್ರದಾಯಗಳನ್ನು ಈ ಸಂಸದೀಯ ವ್ಯವಸ್ಥೆಯಲ್ಲಿ ನಡೆಸಿಕೊಂಡು ಬಂದಿದ್ದೇವೆ. ಸಂಪ್ರ-ದಾಯಗಳನ್ನು ತಾವು ಮುರಿಯಬಾರದು.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ:- ಅವಕಾಶ ಕೊಡಬಾರದು.

(ಗೊಂದಲ)

Mr. SPEAKER:- You are on a very weak wicket.

ಶ್ರೀ ಎಂ. ನಾರಾಯಣ ಸ್ವಾಮಿ:- ಸಭಾಧ್ಯಕ್ಷರೇ, ಅಟ್‌ಲೀಸ್ಟ್ ಅವರು ಹೇಳತಕ್ಕದ್ದನ್ನು ಸೌಜನ್ಯವಾಗಿ ಕೇಳಬೇಕಲ್ಲಾ. ತಾವು ರೂಲಿಂಗ್ ಕೊಡಿ ಏನಾದರೂ ಕೊಡಿ. ಆದರೆ ನಾವು ಹೇಳುವು-ದನ್ನು ಅವರು ಸ್ವಲ್ಪ ಕೇಳಬೇಕಲ್ಲಾ.

ಅಧ್ಯಕ್ಷರು:- ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ:-

''ದಿನಂಕ 31-03-1997 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ 10, 11, 14, 23, 24, 25, 26, 28, 29, 30, 31, 32, 35, 36, 37, 38, 40, 41, 47 ಮತ್ತು 51 ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡಬೇಕು.''

1.10 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್:- ನಾನು ಮತದಾನಕ್ಕೆ ಒತ್ತಾಯಿಸುತ್ತಿದ್ದೇನೆ.

ಅಧ್ಯಕ್ಷರು:- ಈಗ ಡಿವಿಜನ್ ಬೆಲ್ ಅನ್ನು ಪ್ರೆಸ್ ಮಾಡಿ. ಎರಡು ನಿಮಿಷಗಳಷ್ಟು ಅವಕಾಶ ಕೊಡುತ್ತೇನೆ. ಅಷ್ಟರೊಳಗೆ ಯಾವ ಸದಸ್ಯರುಗಳು ಸದನಕ್ಕೆ ಬರುತ್ತಾರೋ ಬರಲಿ, ಅನಂತರ ಬಾಗಿಲು ಗಳನ್ನು ಹಾಕೋಣ.

(ಈ ಹಂತದಲ್ಲಿ ಸದನದ ಬಾಗಿಲುಗಳನ್ನು ಎರಡು ನಿಮಿಷಗಳ ಕಾಲ ತೆರೆದು ಕರೆಗಂಟೆಯನ್ನು ಹಾಕಲಾಯಿತು)

ಈಗ ದಯವಿಟ್ಟು ಎಲ್ಲಾ ಬಾಗಿಲುಗಳನ್ನು ಮುಚ್ಚಿ.

(ಈ ಹಂತದಲ್ಲಿ ಕಾನೂನು ಮತ್ತು ಸಂಸದೀಯ ಸಚಿವರಾದ ಶ್ರೀ ಎಂ.ಸಿ. ನಾಣಯ್ಯನವರು ಮಾತನಾಡಲು ಎದ್ದು ನಿಂತಾಗ ವಿರೋಧ ಪಕ್ಷದವರು ಆಕ್ಷೇಪವೆತ್ತಿದರು)

ಶ್ರೀ ಎಂ.ಸಿ. ನಾಣಯ್ಯ:- ಇದಕ್ಕೆ ನಮ್ಮ ಯಾವುದೇ ತರಹದ ವಿರೋಧವಿಲ್ಲ.

Mr. SPEAKER:- Now everything is over.

Sri. M.C. NANAIAH:- Let me have my say. I have got a right to say. You don't have to worry. Let us hear what he says. Now it is only standing row by row.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್. ಪ್ರಕಾಶ್‌ರವರು ಸದನಕ್ಕೆ ಪ್ರವೇಶಿಸುತ್ತಿ-ರುವುದನ್ನು ಕಂಡು ವಿರೋಧ ಪಕ್ಷದವರು ಆಕ್ಷೇಪವೆತ್ತಿದರು)

ಅಧ್ಯಕ್ಷರು:- ಪ್ರಕಾಶ್‌ರವರೇ, ತಾವು ಸ್ವಲ್ಪ ಸಮಯ ಬಿಟ್ಟು ಅನಂತರ ಸದನಕ್ಕೆ ಬರಬೇಕು. Let the Members realise. Let the Members realise, I have said hundred and odd times that it is a privilege to get into House. One should also know how to use the privileges conferred on them.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್. ಪ್ರಕಾಶ್‌ರವರು ಸದನದಿಂದ ಹೊರಗಡೆ ಹೋದರು)

ಶ್ರೀ ಎಂ. ಮಲ್ಲಕಾರ್ಜನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಇವೊತ್ತು ವಿರೋಧ ಪಕ್ಷದ ನಾಯಕರು ಈ ವಿಷಯವನ್ನು ಪ್ರಸ್ತಾಪಿಸಿದ್ದು ಏಕೆಂದರೆ, just to alert the government. ಪ್ರತಿ ಸಲವೂ ಸದನದಲ್ಲಿ ಕೋರಂ ಇಲ್ಲವೆಂದು ನಾವು ಬಡಿದುಕೊಳ್ಳುವುದು. ಅಲ್ಲದೆ, ಬೇಡಿಕೆಗಳನ್ನು ಸಂಬಂಧಪಟ್ಟ ಮಂತ್ರಿಗಳು ಮಂಡಿಸುವುದಿಲ್ಲ, ಉತ್ತರ ಕೊಡುವಾಗಲೂ ಇರುವುದಿಲ್ಲ, ಗಮನ ಸೆಳೆಯುವ ಸೂಚನೆ ಬಂದಾಗಲೂ ಹಾಜರಿರುವುದಿಲ್ಲ. ಇದರ ಬಗ್ಗೆ ಸರ್ಕಾರವನ್ನು ಎಚ್ಚರಿಸುವುದಕ್ಕಾಗಿ ಡಿವಿಜನ್ ಅನ್ನು ಪ್ರೆಸ್ ಮಾಡಿದ್ದೇ ಹೊರತು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಕೆಂದಾಗಲೀ, ಇಲ್ಲವೇ ತಾವು ಹೇಳಿದಂತೆ ಸರ್ಕಾರವನ್ನು ಬ್ಲಾಕ್‌ಮೇಲ್ ಮಾಡಬೇಕೆಂದಾಗಲೀ ಆ ದೃಷ್ಟಿಯಿಂದಲ್ಲ. ಸದನಕ್ಕೆ ಅನೇಕ ಹೊಸ ಸದಸ್ಯರು ಬಂದಿದ್ದು ಸದನವನ್ನು ಹೇಗೆ ನಡೆಸಬೇಕೆನ್ನುವುದರ ಬಗ್ಗೆ ಅವರಿಗೂ ಗೊತ್ತಾಗಲೆನ್ನುವ ದೃಷ್ಟಿಯಿಂದ ಈ ರೀತಿ ಮಾಡಿದ್ದೇ ಹೊರತು ಬೇರೆ ಯಾವ ಉದ್ದೇಶದಿಂದಲೂ ಅಲ್ಲ. ಆದುದರಿಂದ, ಈಗ ನಾವು ಮತ್ತೆ ಡಿವಿಜನ್‌ಗೆ ಪ್ರೆಸ್ ಮಾಡುವುದಿಲ್ಲ, ಬೇಡಿಕೆಗಳನ್ನು ಅಂಗೀಕರಿಸಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಬಹಳ ನೊಂದು ಒಂದು ಮಾತನ್ನು ನಿಮಗೆ ಹೇಳುತ್ತಿರುವುದೇನೆಂದರೆ, ನಾನು 1983ರಿಂದಲೂ ಇಲ್ಲಿ ಶಾಸಕನಾಗಿ ಕೆಲಸ ಮಾಡುತ್ತಿದ್ದು, ಜನರು ನಿಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದು, ಐದು ವರ್ಷಗಳ ಕಾಲ ನೀವು ಸರ್ಕಾರದಲ್ಲಿದ್ದು ಆಡಳಿತ ನಡೆಸಬೇಕೆಂದು ಹೇಳುವಂಥ ವ್ಯಕ್ತಿ ನಾನಾಗಿದ್ದೇನೆ. ಆದರೆ, ಆಡಳಿತ ಪಕ್ಷ ಮತ್ತು ಪ್ರತಿ ಪಕ್ಷ ಸರಿಸಮಾನವಾದ ಸಂಖ್ಯೆಯಲ್ಲಿರುವ ಸಂದರ್ಭದಲ್ಲಿ ವಿರೋಧ ಪಕ್ಷಗಳನ್ನು ಹಗುರವಾಗಿ ತೆಗೆದುಕೊಂಡು, ಅಧಿವೇಶನ ನಡೆಯುತ್ತಿರುವಾಗ ಸದನದಲ್ಲಿ ಮಂತ್ರಿಗಳು, ಶಾಸಕರುಗಳು ಯಾರೂ ಇಲ್ಲದೆ ಆಡಳಿತ ನಡೆಸಿಕೊಂಡು ಹೋಗುತ್ತಿದ್ದೀರಿ, ನಾವಂತೂ ರಾತ್ರಿಯಿಡೀ ನಿದ್ದೆ ಮಾಡುತ್ತಿಲ್ಲ, ನಾಚಿಕೆಯಿಂದ ತಲೆ ತಗ್ಗಿಸುವಂಥ ಪರಿಸ್ಥಿತಿ ಬರುತ್ತಿದೆ, ಏನೇನೋ ಆಗುತ್ತಿದೆಯೆಂದು ನೋವಾಗುತ್ತಿದೆ, ಜನಹಿತ ಮರೆತು ಯಾವ ಗೊಂದಲದಲ್ಲಿ, ಪರಿಸ್ಥಿತಿಯಲ್ಲಿ ಆಡಳಿತ ಪಕ್ಷ ಇದೆಯೆಂಬುದು ನಾಡಿನ ಜನರಿಗೆ ಗೊತ್ತಾಗಲೆನ್ನುವ ದೃಷ್ಟಿಯಿಂದ ನಾನು ಡಿವಿಜನ್‌ಗೆ ಪ್ರೆಸ್ ಮಾಡಿದೆ. ಆದರೆ, ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಡಿವಿಜನ್‌ಗೆ ಪ್ರೆಸ್ ಮಾಡುವುದು ಬೇಡವೆಂದು ಹೇಳಿರುವುದರಿಂದ ನಾನು ಡಿವಿಜನ್‌ಗೆ ಪ್ರೆಸ್ ಮಾಡುವುದಿಲ್ಲ. ನಾನು ವಿರೋಧ ಪಕ್ಷದ ನಾಯಕನಾಗಿ ನನ್ನ ಭಾವನೆಯೇನಿದೆ ಎಂಬುದನ್ನು ವ್ಯಕ್ತಪಡಿಸಿ ನನ್ನ ಕರ್ತವ್ಯ

ನಿರ್ವಹಿಸಿದ್ದೇನೆ. ಇದನ್ನು ಸರಿಯಾಗಿ ಅರ್ಥೈಸಿಕೊಂಡು ಸದನದಲ್ಲಿ ಮತ್ತೊಮ್ಮೆ ಇಂತಹ ಪರಿಸ್ಥಿತಿ ಬಾರದಿರುವ ರೀತಿಯಲ್ಲಿ ಆಡಳಿತ ನಡೆಸಿಕೊಂಡು ವಿಶಾಲವಾದ ವಿಚಾರವನ್ನಿಟ್ಟುಕೊಂಡು ಹೋಗು-ವುದಕ್ಕೆ ಡಿವಿಜನ್ ಪ್ರೆಸ್ ಮಾಡಿದೆ. ಈಗ ನಾನು ಡಿವಿಜನ್‌ಗೆ ಪ್ರೆಸ್ ಮಾಡುತ್ತಿಲ್ಲ. ಸರಿಯಾದ ರೀತಿಯಲ್ಲಿ ಆಡಳಿತ ನಡೆಸಿ, ಸದನದ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ):- ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಯಾರು ಬಹುಮತದಲ್ಲಿದ್ದಾರೆ, ಯಾರು ಅಲ್ಪಮತದಲ್ಲಿದ್ದಾರೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ಇದೊಂದು ನೀತಿಯ ಪ್ರಶ್ನೆಯಾಗಿದೆ. ತಾವು ಸರ್ಕಾರಕ್ಕೆ ಅನೇಕ ಬಾರಿ ಎಚ್ಚರಿಕೆ ಕೊಟ್ಟಿದ್ದೀರಿ, ಅದು ಸದನದ ಕಡತದಲ್ಲಿ ದಾಖಲೆಯಲ್ಲಿದೆ. ಹೆಚ್ಚು–ಕಡಿಮೆಯೆಂದರೂ ಸುಮಾರು 10-15 ಬಾರಿ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದೀರಿ ಮತ್ತು ಉಪಾಧ್ಯಕ್ಷರು ಕೂಡ ಎಚ್ಚರಿಕೆ ಕೊಟ್ಟಿದ್ದಾರೆ. ಅಂದರೆ, ನಾವು ಮತ-ದಾನಕ್ಕೆ ಒತ್ತಾಯಿಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿ ತೆಗೆಯಬೇಕೆಂಬ ಉದ್ದೇಶವಿಟ್ಟುಕೊಂಡು ಮಾತನಾಡುತ್ತೇವೆಂಬ ಪ್ರಶ್ನೆ ಅಲ್ಲ. ಆದರೆ, ನನಗನ್ನಿಸಿರುವುದೇನೆಂದರೆ, ಈ ಸದನವನ್ನು ಸಂಪೂರ್ಣ-ವಾಗಿ ಕಡೆಗಣಿಸಿ, ಆಡಳಿತ ನಡೆಸುವವರು ಸದನದ ಬಗ್ಗೆ ಗೌರವವಿಲ್ಲದೆ, ಮಂತ್ರಿಗಳಾಗಲೀ, ಶಾಸಕರು ಗಳಾಗಲೀ, ಅಧಿಕಾರಿಗಳಾಗಲೀ ಸದನವನ್ನು ಒಂದು ರೀತಿ ಕಡೆಗಣಿಸಿದ್ದಾರೆ ಎಂದು ಆದಕಾರಣ, ಸದನಕ್ಕೆ ಶಕ್ತಿ, ಗೌರವ ಬರಲೆನ್ನುವ ಉದ್ದೇಶದಿಂದ ನಾವು ಮತದಾನಕ್ಕೆ ಒತ್ತಾಯಿಸಿದ್ದೇವೆ. ಅಂದರೆ, ಮತದಾನಕ್ಕೆ ಒತ್ತಾಯಿಸುವುದು ಸಂಪ್ರದಾಯ ಅಥವಾ ಮತದಾನ ಹುಡುಗಾಟವೆನ್ನುವ ಪ್ರಶ್ನೆಯಲ್ಲ, ಇದೇನೂ ಹುಡುಗುತನವಲ್ಲ, ಸರ್ಕಾರ ಈ ರೀತಿ ನಡೆದುಕೊಂಡಿರುವ ಬಗ್ಗೆ ಹಾಗೂ ಶಾಸನಸಭೆಗೆ ಎಷ್ಟರಮಟ್ಟಿಗೆ ಗಾಂಭೀರ್ಯ, ಘನತೆ ಇದೆಯೆಂಬುದರ ಬಗ್ಗೆ ರಾಜ್ಯದ ಜನತೆಗೆ ತಿಳಿವಳಿಕೆಯಾಗಲಿ ಎನ್ನುವ ಉದ್ದೇಶದಿಂದ ನಾವೆಲ್ಲರೂ ಇಂತಹ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಆದ್ದರಿಂದ, ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿ, ಬೇರೆ ದಿಕ್ಕಿಗೆ ತೆಗೆದುಕೊಂಡು ಹೋಗಬೇಕೆನ್ನುವುದಲ್ಲ. ಈಗ ಮತ ದಾನಕ್ಕೆ ಒತ್ತಾಯಿಸುತ್ತಿಲ್ಲವೆಂದು ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ತೀರ್ಮಾನಿ-ಸಿರುವುದರಿಂದ ನಾನೂ ಸಹ ಅದಕ್ಕೆ ಬೆಂಬಲ ಕೊಡುತ್ತಾ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರ ಮಾತಿಗೂ ಬೆಂಬಲ ಕೊಟ್ಟು ದನಿಗೂಡಿಸುತ್ತಿದ್ದೇನೆ. ಇದು ಸರ್ಕಾರದ ನೀತಿಯ ಪ್ರಶ್ನೆಯಾಗಿರುವುದರಿಂದ ಇನ್ನು ಮುಂದಾದರೂ ಆಡಳಿತ ನಡೆಸುವವರು ಈ ಸದನಕ್ಕೆ ಎಷ್ಟು ಗೌರವ ಕೊಡಬೇಕೋ ಅಷ್ಟು ಗೌರವ ಕೊಟ್ಟು ಸದನದ ಘನತೆ, ಗಾಂಭೀರ್ಯವನ್ನು ಕಡೆಗಣಿಸ ಬಾರದೆಂದು ತಿಳಿದುಕೊಳ್ಳಬೇಕು. ಅನೇಕ ಸಲ ಸದನದಲ್ಲಿ ವಿರೋಧ ಪಕ್ಷದ ನಾಯಕರು ಚರ್ಚಿಸು-ತ್ತಿರುವಾಗ, ಮಾತನಾಡುವ ಸಂದರ್ಭಗಳಲ್ಲಿ ಅಧಿಕಾರಿಗಳಿರುವುದಿಲ್ಲ. ಅಲ್ಲದೆ, ಆಯವ್ಯಯದ ಬಗ್ಗೆ ವಿರೋಧ ಪಕ್ಷಗಳು ತಮ್ಮ ಚರ್ಚೆಯನ್ನು ಪ್ರಾರಂಭಿಸಿದಾಗ ಸದನದಲ್ಲಿ ಮುಖ್ಯಮಂತ್ರಿಗಳು, ಮಂತ್ರಿ-ಗಳು ಹಾಗೂ ಇಲಾಖಾಧಿಕಾರಿಗಳಿರುವುದಿಲ್ಲ. ಇಂತಹ ಪ್ರಸಂಗ ಅನೇಕ ಬಾರಿ ನಡೆದಿದೆ. ಆದುದ-ರಿಂದ, ಇವೊತ್ತು ಸದನದಲ್ಲಿ ನಡೆದಿರುವ ಪ್ರಸಂಗ ಸರ್ಕಾರಕ್ಕೆ ನಿಜವಾಗಿಯೂ ಒಂದು ಎಚ್ಚರಿಕೆ

ಗಂಟೆಯಾಗಿದ್ದು ಇನ್ನು ಮುಂದಾದರೂ ಸದನದಲ್ಲಿ ಇಂತಹ ಪರಿಸ್ಥಿತಿ ಮರುಕಳಿಸಬಾರದೆಂಬ ದೃಷ್ಟಿಯಿಂದ ಇದೊಂದು ಸೂಚನೆ ಕೊಡಲಾಗಿದೆಯೆಂಬುದನ್ನು ತಮಗೆ ಮನವರಿಕೆ ಮಾಡಿಕೊಡು-ತ್ತಿದ್ದೇವೆ.

ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಅಧ್ಯಕ್ಷರೇ, ನಾವೂ ಸೇರಿದಂತೆ ಅನೇಕ ಮಂದಿ ಹೊಸ ಸದಸ್ಯರುಗಳು ಸದನಕ್ಕೆ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಬಂದಿದ್ದೇವೆ. ನಾವು ಹೊಸ ಸದಸ್ಯರುಗಳಾಗಿರುವುದರಿಂದ ಸರ್ಕಾರಕ್ಕೆ ಸಮಸ್ಯೆಗಳನ್ನು ವಿವರಿಸಿ ಅದಕ್ಕೆ ಸರ್ಕಾರ-ದಿಂದ ಉತ್ತರ ಅಪೇಕ್ಷಿಸುವ ದೃಷ್ಟಿಯಿಂದ ಬಹಳಷ್ಟು ಶ್ರಮ ವಹಿಸಿ, ಅಧ್ಯಯನ ಮಾಡಿಕೊಂಡು ಬಂದು ನಾವು ಗಂಭೀರವಾಗಿ ಚರ್ಚಿಸುತ್ತಿರುವ ಅನೇಕ ಸಂದರ್ಭಗಳಲ್ಲಿ ಸದನದಲ್ಲಿ ಮಂತ್ರಿಗಳಿರು-ವುದಿಲ್ಲ, ಬಹಳ ಜನ ಮಂತ್ರಿಗಳು ನಿದ್ರೆ ಮಾಡುತ್ತಿರುತ್ತಾರೆ. ಆದುದರಿಂದ ಸರ್ಕಾರದಿಂದ ಒಂದು ಅಗ್ನಿ ಪರೀಕ್ಷೆಯಾಗಿ, ಈ ರಾಜ್ಯದ ಜನತೆಗೆ ಒಂದು ಸಂದೇಶ ಹೋಗಬೇಕೆನ್ನುವ ಉದ್ದೇಶದಿಂದ ಮತ-ದಾನಕ್ಕೆ ಒತ್ತಾಯಿಸಿದ್ದೇವೆಯೇ ವಿನಹ ಬೇರೆ ಉದ್ದೇಶದಿಂದ ಅಲ್ಲ. ನಂತರ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಮತದಾನಕ್ಕೆ ಒತ್ತಾಯಿಸುವುದಿಲ್ಲವೆಂದು ಹೇಳಿದಾಗ ಸೌಜನ್ಯಕ್ಕಾಗಿ-ಯಾದರೂ ತಾವು ತಮ್ಮ ಬೇಜವಾಬ್ದಾರಿತನವನ್ನು ಒಪ್ಪಿಕೊಳ್ಳಬೇಕಾಗಿತ್ತು. ಅದರ ಬದಲು ನಾವೆಲ್ಲಾ ಸಿದ್ಧತೆ ಮಾಡಿದ್ದೇವೆಂದರೆ ಏನರ್ಥ? ಈ ತರಹದ ಸವಾಲನ್ನು ಹಾಕಬಾರದು. ಸವಾಲು ಹಾಕದಿದ್ದರೆ ನಾವು ಮತದಾನಕ್ಕೆ ಒತ್ತಾಯಿಸುತ್ತಿರಲಿಲ್ಲ.

ಅಧ್ಯಕ್ಷರು:- ಈಗ ಅದನ್ನು ಹೆಚ್ಚು ಬೆಳೆಸುವುದು ಬೇಡ. Why should you give room for new controversy?

ಶ್ರೀ ಸಿ. ಬೈರೇಗೌಡ:- ಅಧ್ಯಕ್ಷರೇ, ನನಗೆ ಮಾತನಾಡುವುದಕ್ಕೆ ಎರಡು ನಿಮಿಷಗಳ ಕಾಲ ತಾವು ದಯಮಾಡಿ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:- ನಾನು ಸರ್ಕಾರಕ್ಕೆ ಮತ್ತು ವಿರೋಧ ಪಕ್ಷಗಳಿಗೆ ಇಷ್ಟೇ ವಿನಂತಿ ಮಾಡಿಕೊಳ್ಳು-ತ್ತೇನೆ. ಬಹಳ ಜನ ವಯಸ್ಸಿನಲ್ಲಿ ಮತ್ತು ಅನುಭವದಲ್ಲಿ ನನಗಿಂತ ಹಿರಿಯರು ಈ ಸದನದಲ್ಲಿದ್ದೀರಿ. ಈ ಸದನ ಹೇಗೆ ನಡೆದುಕೊಂಡು ಬಂದಿದೆ ಎನ್ನತಕ್ಕಂಥದ್ದರ ಪರಿಚಯ ನನಗಿಂತ ಚೆನ್ನಾಗಿ ತಮಗಿದೆ. ಪ್ರಜಾಪ್ರಭುತ್ವದಲ್ಲಿ ಸಂಖ್ಯೆಗೆ ಪ್ರಾಮುಖ್ಯತೆ ಇರುತ್ತದೆ ಎನ್ನುವುದು ನಿಜ. ಆದರೆ ಬರೀ ಸಂಖ್ಯಾಬಲದ ಮೇಲೆ ಆಧರಿಸಿ ಪ್ರಜಾಪ್ರಭುತ್ವವನ್ನು ನಡೆಸತಕ್ಕಂತಹ ಒಂದು ಪ್ರಯೋಗಕ್ಕೂ ಕೂಡ ನಾವು ಕೈ ಹಾಕ ಬಾರದು. ಅದರೆ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಖರ್ಗೆಯವರು, ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಸಭಾಪತಿಯವರು ಪ್ರಸ್ತಾಪ ಮಾಡಿದಂತೆ ಅವರ ಉದ್ದೇಶ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸತಕ್ಕಂಥದ್ದು, ಮುಜುಗರ ಉಂಟು ಮಾಡತಕ್ಕಂಥದ್ದು ಅಲ್ಲ. ಇಷ್ಟು ದೊಡ್ಡ ಪ್ರಮಾಣದಲ್ಲಿ ಜವಾಬ್ದಾರಿ ಹೊತ್ತಿರತಕ್ಕಂಥವರ ನಡವಳಿಕೆ ಈ ಸದನದಲ್ಲಿ ಹೇಗಿರಬೇಕು ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರತಕ್ಕಂಥದ್ದಷ್ಟೇ ಆಗಿತ್ತು. ನಾನು ಅಧ್ಯಕ್ಷನಾಗಿ ಬಹಳ

ಮುಜುಗರಕ್ಕೆ ಸಿಕ್ಕಿಹಾಕಿಕೊಂಡೆ. ಮಾನ್ಯ ಸದಸ್ಯರು ಅವರ ಹಕ್ಕನ್ನು ಚಲಾಯಿಸಿ, ನಾವು ಡಿವಿಜನ್‌ಗೆ ಪ್ರೆಸ್ ಮಾಡುತ್ತೇವೆ ಎಂದು ಹೇಳಿದಾಗ, ನನಗೆ ಬೇರೆ ಮಾರ್ಗವೇ ಇರಲಿಲ್ಲ. ನಾನು ಅಧ್ಯಕ್ಷ ಸ್ಥಾನಕ್ಕೆ ಇರತಕ್ಕಂಥ ಗೌರವಕ್ಕೆ ಹೊಂದಿಕೊಂಡೇ ನನ್ನ ಕೆಲಸವನ್ನು ನಾನು ನಿಭಾಯಿಸಬೇಕಾಗುತ್ತದೆಯೇ ಹೊರತು ನಾನು ಬೇರೆ ಯಾವ ಹಿನ್ನೆಲೆಯನ್ನೂ ನೆನಪು ಮಾಡಿಕೊಳ್ಳುವುದಕ್ಕೆ ನನಗೆ ಅವಕಾಶ ಇರುವುದಿಲ್ಲ. ಆಗಷ್ಟೇ ಈ ಸ್ಥಾನಕ್ಕೆ ಗೌರವ ಬರುತ್ತದೆ. ಮಾನ್ಯ ಸದಸ್ಯರುಗಳಲ್ಲಿ ಕೆಲವರು ಮಾತ-ನಾಡತಕ್ಕ ಅವಧಿಯಲ್ಲಿ ಬಂದರು, ಅದೆಲ್ಲಾ ಸರಿಯೇ ಇದು ತಾಂತ್ರಿಕವಾಗಿ ಬಲ ರೂಪಿಸಿಕೊಳ್ಳ ತಕ್ಕಂಥದ್ದು. ನಾನು ತಮ್ಮಲ್ಲಿ ವಿಶೇಷವಾಗಿ ವಿನಂತಿ ಮಾಡಿಕೊಳ್ಳುತ್ತೇನೆ, ರಾಜ್ಯದ ಜನ ನಿಮಗೆ ಆಶೀರ್ವಾದವನ್ನು ಕೊಟ್ಟು, ಆಡಳಿತ ನಡೆಸತಕ್ಕಂತಹ ಜವಾಬ್ದಾರಿಯನ್ನು ಹೊರಿಸಿದ್ದಾರೆ. ಆದ್ದರಿಂದ ಅವರ ಭಾವನೆಗಳೇನಿದೆ, ಅದರ ಒಳ ಅರ್ಥವನ್ನು ತಾವು ತಿಳಿದುಕೊಳ್ಳಬೇಕು. ಸಾಕಷ್ಟು ಅನುಭವ-ಶಾಲಿಗಳು ಈ ಕಡೆ ಕುಳಿತಿದ್ದೀರಿ. ಹೊಸ ಸದಸ್ಯರುಗಳಿಗೆ ತಾವು ತರಬೇತಿ ಕೊಡಬೇಕು; ಅವರಿಗೆ ಸೂಚನೆ ಕೊಡಬೇಕು. ಸದನವನ್ನು ನಾವು ಹೆಚ್ಚು ಜವಾಬ್ದಾರಿಯುತವನ್ನಾಗಿ ನಡೆಸಿಕೊಂಡು ಹೋದರೆ ರಾಜ್ಯದ ಹಿತ ಕಾಯುವಲ್ಲಿ ನಾವು ಮೊದಲಿಗರಾಗುತ್ತೇವೆ ಮತ್ತು ನಮ್ಮ ಸದನ ಒಂದು ಒಳ್ಳೆಯ ಮಾದರಿಯನ್ನು ಹಾಕಿಕೊಂಡಂತಾಗುತ್ತದೆ. ಇನ್ನು ಇದರ ಮೇಲೆ ಹೆಚ್ಚು ಚರ್ಚೆ, ವ್ಯಾಖ್ಯಾನ ಏನೂ ಬೇಡ. ಸಹಕರಿಸಿ ಮುಂದೆ ಉಂಟಾಗಬಹುದಾಗಿದ್ದ ಮುಜುಗರವನ್ನು ತಪ್ಪಿಸಿದ್ದೀರಿ. ಎಲ್ಲರಲ್ಲೂ ಕೂಡ ಈ ಏನೊಂದು ಭಾವನೆ ಇದೆ, ನಿಮ್ಮ ಆ ಸ್ಪೋರ್ಟಿವ್ ಸ್ಪಿರಿಟ್ ಅನ್ನು ನಾನು ಮೆಚ್ಚುತ್ತೇನೆ. ಇದನ್ನು ಯಾರೂ ಕೂಡ ಒಂದು ಕಹಿ ಪ್ರಸಂಗ ಎಂದು ತಿಳಿದುಕೊಳ್ಳಬೇಕಾಗಿಲ್ಲ. ಇದೊಂದು ಎಚ್ಚ-ರಿಕೆಯಷ್ಟೆ. ಈಗ ನೋಡಿ ಮಾನ್ಯ ಪ್ರಕಾಶ್‌ರವರು ಹೊಸದಾಗಿ ಆರಿಸಿ ಬಂದಿದ್ದರು. ಅವರಿಗೆ ಈ ಪದ್ಧತಿಯೇ ಗೊತ್ತಿಲ್ಲ. ಡಿವಿಜನ್ ಬೆಲ್ ಹಾಕಿ ಎರಡು ನಿಮಿಷ ಆದಮೇಲೆ ನಾವು ಬಾಗಿಲು ಹಾಕಿದ ಮೇಲೆ, ಯಾರು ಆಯ್ಕೆಯಾಗಿ ಬಂದಿದ್ದಾರೆ ಈ ಸದನಕ್ಕೆ, ಅವರೇ ಒಳಗೆ ಬರುವುದಕ್ಕೆ ಆಗದಿರು-ವಂತಹ ಒಂದು ಸನ್ನಿವೇಶ. ಇದು ಆಗಬಾರದು. ಇದು ಅವರಿಗೆ ಬಹುಶಃ ಗೊತ್ತಿರಲಿಕ್ಕಿಲ್ಲ. ಅವರು ಹೊಸ ಸದಸ್ಯರು. ಆದ್ದರಿಂದ ನಾನು ಈಗಲೂ ಕೂಡ ಹೇಳುತ್ತೇನೆ, ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರುಗಳೂ ಕೂಡ ತಮ್ಮ ತಮ್ಮ ರಾಜಕೀಯ ಪಕ್ಷದೊಳಗೆ, ಶಾಸಕಾಂಗ ಪಕ್ಷದೊಳಗೆ, ತಮ್ಮ ಶಾಸಕರನ್ನು ಸಂಸದೀಯ ವ್ಯವಹಾರಗಳ ಬಗ್ಗೆ ಹೆಚ್ಚು ತಿಳುವಳಿಕೆಯನ್ನು ಕೊಡತಕ್ಕಂತಹ ಪ್ರಯತ್ನ ಪಟ್ಟರೆ ಇದೊಂದೇ ಸಂದರ್ಭವಲ್ಲ, ಬೇರೆ ಸಂದರ್ಭಗಳಲ್ಲೂ ಕೂಡ ಸದನವನ್ನು ನಡೆಸಿಕೊಂಡು ಹೋಗಲಿಕ್ಕೆ ನನಗೆ ಸುಲಭವಾಗುತ್ತದೆ. ಸದನದ ಗೌರವವನ್ನು ಎತ್ತಿ ಹಿಡಿಯಲಿಕ್ಕೆ ನಮಗೆಲ್ಲರಿಗೂ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಿ, ಈಗ ಪ್ರಸ್ತಾವವನ್ನು ತಮ್ಮ ಮುಂದಿಟ್ಟಿದ್ದೇನೆ. ಪ್ರಸ್ತಾವವನ್ನು ಹಾಕುತ್ತೇನೆ. ದಯಮಾಡಿ ಎಲ್ಲರೂ ಸಹಕರಿಸಿ.

ಪ್ರಸ್ತಾವ ಏನೆಂದರೆ :

"ದಿನಾಂಕ 31-3-97ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ 10, 11, 14, 23, 24, 25, 26, 28, 29, 30, 31, 32, 35, 36, 37, 38, 40, 41, 47 ಮತ್ತು 51 ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿ-ದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡುವುದು"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಬೇಡಿಕೆಗಳಿಗೆ ಮಂಜೂರಾತಿ ನೀಡಲಾಯಿತು)

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸ-ಲಾಗಿದೆ)

ಅಭಿಯಾಚನೆ ಕ್ರಮಾಂಕ **10** - ಲೇಖನ ಸಾಮಗ್ರಿ ಮತ್ತು ಮುದ್ರಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಲೇಖನ ಸಾಮಗ್ರಿ ಮತ್ತು ಮುದ್ರಣ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 25,46,25,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ **11** – ಉನ್ನತ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಉನ್ನತ ಶಿಕ್ಷಣ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 302,96,35,000 ರೂ. ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆ-ಯಲ್ಲಿ 10,00,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 16,21,28,07,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – **23** ಸಾರಿಗೆ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಾರಿಗೆ ಸೇವೆ" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 66,74,07,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 15,00,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂ-ರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – **24** ಆರಕ್ಷಕ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರಕ್ಷಕ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖತೆಯಲ್ಲಿ 446,89,77,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖನುದಾನದಲ್ಲಿ ಮಂಜೂ-ರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – **25** ಬಂದೀಖಾನೆಗಳು, ಗೃಹರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬಂದೀಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕ ಕಲ್ಯಾಣ ಇತ್ಯಾದಿ" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 41,88,99,000 ರೂ. ಗಳಿ-ಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 55,00,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡು-ವುದು.

ಅಭಿಯಾಚನೆ ಕ್ರಮಾಂಕ – **26** ವಾರ್ತಾ ಮತ್ತು ಪ್ರಚಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ ಮತ್ತು ಪ್ರಚಾರ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,92,02,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾ-ನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – **28** ವೈದ್ಯಕೀಯ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವೈದ್ಯಕೀಯ ಶಿಕ್ಷಣ"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ

ರಾಜಸ್ವ ಖಾತೆಯಲ್ಲಿ 137,28,09,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನು-ದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – **29** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 521,85,51,000 ರೂ. ಗಳಿಗಿಂತ ಮೀರದ ಮೊತ್ತ-ವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ **30** ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತಾಗಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)"ಕ್ಕೆ ಸಂದಾಯ ಮಾಡುವಲ್ಲಿ ಬರ-ತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 100,91,83,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 911,58,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡು-ವುದು.

ಅಭಿಯಾಚನೆ ಕ್ರಮಾಂಕ – **31** – ನಗರಾಭಿವೃದ್ಧಿ – (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಸೌಕರ್ಯ ವ್ಯವಸ್ಥೆ ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲ ಸೌಕರ್ಯ ವ್ಯವಸ್ಥೆ ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 247,73,80,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 124,78,75,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನು-ದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – **32** ಬೆಂಗಳೂರು ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬೆಂಗಳೂರು ಅಭಿವೃದ್ಧಿ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 194,41,87,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 40,10,00,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – **35** ರಾಜ್ಯ ವಿಧಾನ ಮಂಡಲ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯ ವಿಧಾನ ಮಂಡಲಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 15,59,28,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – **36** ನ್ಯಾಯ ಪರಿಪಾಲನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನ್ಯಾಯ ಪರಿಪಾಲನೆಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 71,43,79,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – **37** ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯಪಾಲರು ಮಂತ್ರಿಗಳು ಮತ್ತು ಲೋಕಸೇವಾ ಆಯೋಗ" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 61,94,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – **38** ಸಚಿವಾಲಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಚಿವಾಲಯಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 38,78,98,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – **40** ಸಾಮಾನ್ಯ ಆಡಳಿತ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಾಮಾನ್ಯ ಆಡಳಿತ ಇತ್ಯಾದಿ" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 72,77,22,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – **47** ವಿದ್ಯುಚ್ಛಕ್ತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿದ್ಯುಚ್ಛಕ್ತಿ ಯೋಜನೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾ-ರಕ್ಕೆ ರಾಜಸ್ವ ಖಾತೆಯಲ್ಲಿ 206,76,88,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಮತ್ತು ಬಂಡವಾಳ ಖಾತೆಯಲ್ಲಿ 149,00,00,000 ರೂ. ಗಳಿಗಿಂತ ಮೀರದ ಮೊತ್ತ-ವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ – **51** ವಕ್ಫ್ಸ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಕ್ಫ್ಸ್" ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆ ಯಲ್ಲಿ 4,55,25,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಧ್ಯಕ್ಷರು:- ಈಗ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇನ್ನಿತರ ಬೇರೆ ಬೇಡಿಕೆಗಳನ್ನು ಮಂಡಿ-ಸುತ್ತಾರೆ. ಭೋಜನ ವಿರಾಮಕ್ಕಾಗಿ ಸದನವನ್ನು ಮುಂದೂಡಿ ಸದನ ಪುನಃ ಸಮಾವೇಶಗೊಂಡ ನಂತರ ಈಗ ಮಂಡಿಸಲಾಗುವ ಬೇಡಿಕೆಗಳ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳೋಣ. ಈಗ ಸಂಬಂಧ ಪಟ್ಟ ಮಾನ್ಯ ಮಂತ್ರಿಗಳು ತಮ್ಮ ತಮ್ಮ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಬೇಕು.

ಆ) **1996-97** ನೇ ಸಾಲಿನ ಇಲಾಖಾ ಬೇಡಿಕೆಗಳ ಮಂಡನೆ ಮತ್ತು ಅಂಗೀಕರಿಸುವುದು.

ಅಭಿಯಾಚನೆ ಕ್ರಮಾಂಕ – **39** ಜಿಲ್ಲಾಡಳಿತ

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜಿಲ್ಲಾ-ಡಳಿತಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸಾರ್ಕಾರಕ್ಕೆ ರಾಜಸ್ವ ಖಾತೆ ಯಲ್ಲಿ 100,29,74,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂ-ರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ – **48** ಭೂ ಕಂದಾಯ ಇತ್ಯಾದಿ

ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭೂ ಕಂದಾಯ ಇತ್ಯಾದಿ" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 86,61,12,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 601,75,000 ರೂ. ಗಳಿಗಿಂತ ಮೀರದ ಮೊತ್ತವನ್ನು